بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 04

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಜನವರಿ 2021, 28 ಸುಲಹ್ 1399 ತಬ್‌ಲೀಗ್ ಹಿಜರಿ ಶಮ್‌ಸಿ,
14 ಜಮಾದಿಉಸ್ಸಾನಿ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

اِنَّ الَّذِیْنَ اٰمَنُوْا ثُمَّ کَفَرُوْا ثُمَّ اٰمَنُوْا ثُمَّ کَفَرُوْا ثُمَّ ازْدَادُوْا کُفْرًا لَّمْ یَکُنِ اللّٰہُ لِیَغْفِرَ لَھُمْ وَلَا لِیَھْدِیَھُمْ سَبِیْلًا ○ (النساء:138)

*(ಅನ್ನಿಸಾಅ್:138)*

ಅಂದರೆ: ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರ. ಅವರಿಗೆ ಅವನು (ಮೋಕ್ಷ) ಮಾರ್ಗವನ್ನೂ ತೋರಿಸಿ ಕೊಡಲಾರ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

* ಹಝ್ರತ್ ಝೈದ್ ಬಿನ್ ಖಾಲಿದ್ ಜುಹ್ನಿ (ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ರು ಹುದೈಬಿಯದಲ್ಲಿ ನಮಗೆ ಫಜ್ರ್ (ಸುಬ್‌ಹ್) ನಮಾಝ್ ಮಳೆಯಾದ ನಂತರ ನಿರ್ವಹಿಸಿಕೊಟ್ಟರು. ಅದು ರಾತ್ರಿಯಿಂದಲೇ ಪ್ರಾರಂಭವಾಗಿತ್ತು. ರಸೂಲುಲ್ಲಾಹ್(ಸ) ನಮಾಝಿನಿಂದ ಬಿಡುವಾದ ಮೇಲೆ ಜನರಿಗೆ ಸಂಬೋಧಿಸಿ ಹೇಳಿದರು. ನಿಮ್ಮ ಪ್ರಭೂ ಏನು ಹೇಳಿದ್ದಾನೆ ಎಂಬುದು ನಿಮಗೆ ಗೊತ್ತೆ? ಅವರು ಹೇಳಿದರು. ಅಲ್ಲಾಹ್ ಮತ್ತು ಅವನ ಪ್ರವಾದಿ ಉತ್ತಮ ರೀತಿಯಲ್ಲಿ ಬಲ್ಲರು. (ಅವರು ನುಡಿದರು). ಅಲ್ಲಾಹನು ಹೇಳುತ್ತಾನೆ. ಇಂದು ಮುಂಜಾನೆ ನನ್ನ ದಾಸರಲ್ಲಿ ಒಬ್ಬನು ನನ್ನ ವಿಶ್ವಾಸಿಯಾಗಿದ್ದರೆ, ಇನ್ನೊಬ್ಬರು ನನ್ನ ಅವಿಶ್ವಾಸಿಯಾಗಿದ್ದಾನೆ. ಯಾರು ಹೀಗೆ ಹೇಳುವನೋ. ನಮ್ಮ ಮೇಲೆ ಅಲ್ಲಾಹನ ಅನುಗ್ರಹದಿಂದ ಮಳೆಯಾಗಿದೆ. ಅವನು ವಿಶ್ವಾಸಿಯಾಗಿರುತ್ತಾನೆ. ಅವನು ನಕ್ಷತ್ರಗಳನ್ನು ನಂಬುವುದಿಲ್ಲ. ಯಾರು ಹೀಗೆ ಹೇಳುವನು. ಇಂತಿಂತಹ ನಕ್ಷತ್ರ ಬಲದಿಂದಾಗಿ ಮಳೆಯಾಗಿದೆ ಎನ್ನುತ್ತಾರೋ, ಅವರು ಅವಿಶ್ವಾಸಿಗಳು, ಅವರು ನನ್ನನ್ನು ನಿರಾಕರಿಸುವರು ಮತ್ತು ನಕ್ಷತ್ರಗಳಲ್ಲಿ ವಿಶ್ವಾಸವಿಟ್ಟವರಾಗಿದ್ದಾರೆ.

* ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಅಗೋಚರ ಜ್ಞಾನದ ಐದು ಕೀಲಿಗೈಗಳಿವೆ. ಕೇವಲ ಅಲ್ಲಾಹನು ಅದನ್ನು ಬಲ್ಲನು. ಹೊರತು ನಾಳೆ ಏನು ಆಗುವುದು ಎಂಬುದು ಯಾರಿಂದಲೂ ಅರಿಯಲು ಸಾಧ್ಯವಿಲ್ಲ. ಮತ್ತು ಉದರದಲ್ಲಿ ಏನಿದೆ ಎಂಬುದು ಯಾರೂ ಸಹ ಅರಿಯರು. ನಾಳೆ ಏನು ಗಳಿಸಬಹುದು ಎಂಬುದು ಯಾವ ಜೀವವು ಅರಿಯದು ಮತ್ತು ಯಾರು ಯಾವ ದೇಶದಲ್ಲಿ ಮರಣ ಹೊಂದುವರೋ ಅರಿಯರು. ಮಳೆ ಯಾವಾಗ ಬರುವುದು ಯಾರೂ ಅರಿಯರು. **(ಸಹೀ ಬುಖಾರಿ, ಕಿತಾಬುಲ್ ಇಸ್ತಿಸ್‌ಖಾ, ಮುದ್ರಣ ಖಾದಿಯಾನ್ 2006)**

**ಪರಸ್ಪರ ಸಹೋದರತೆ ಮತ್ತು ಪ್ರೀತಿಯನ್ನು ಬೆಳೆಸಿರಿ ಮತ್ತು ಅಮಾನವೀಯತೆ ಹಾಗೂ ಭಿನ್ನತೆಯನ್ನು ತ್ಯಜಿಸಿರಿ.**

**ಎಲ್ಲ ರೀತಿಯ ಆಡಂಬರ ಹಾಗೂ ಅಪಹಾಸ್ಯದಿಂದ ಪ್ರತ್ಯೇಕಗೊಳ್ಳಿರಿ. ಏಕೆಂದರೆ ಅಪಹಾಸ್ಯ ಮಾಡುವ ಪ್ರವೃತ್ತಿಯು ಮನುಷ್ಯನ ಹೃದಯದಿಂದ ಸತ್ಯವನ್ನು ಅಳಿಸಿ ಹಾಕುತ್ತದೆ ಮತ್ತು ಎಲ್ಲೆಂದರಲ್ಲಿಯೂ ದೂರ ಮಾಡಿ ಬಿಡುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ತಮ್ಮ ಜೀವನದಲ್ಲಿ ಪರಿವರ್ತನೆಯನ್ನು ಉಂಟುಮಾಡಿಕೊಳ್ಳಿ. ನಿಜವಾಗಿ ಹೇಳಬೇಕಾದರೆ ಅಲ್ಲಾಹನು ತಾನು ಬಯಸಿದ್ದನ್ನು ಮಾಡಲು ಶಕ್ತನಿದ್ದಾನೆ. ನಿರ್ಜನ ಅವಸ್ತೆಯನ್ನು ಮಾರ್ಪಾಡು ಮಾಡಬಲ್ಲವನಾಗಿದ್ದಾನೆ. ಬಾಬುಲ್ ನಗರ ಅವಸ್ತೆ ಏನಾಯಿತು? ಅಲ್ಲಿ ಜನನ ವಸತಿ ಯೋಜನೆ ಹಾಕಲಾಗಿತ್ತು. ಆದರೆ ಅಲ್ಲಿ ಸ್ಮಶಾನವಾಯಿತು. ಅಲ್ಲಿ ಈಗ ಗೂಬೆಗಳು ವಾಸಿಸುತ್ತವೆ. ಎಲ್ಲಿ ಮನುಷ್ಯನು ಸ್ಮಶಾನವಾಗಬೇಕೆಂದು ಆಶಿಸಿದ್ದನೋ ಅದು ಲೋಕದಾದ್ಯಂತ ಯಾತ್ರಿಕರ ಸ್ಥಳವಾಯಿತು. ಆದುದರಿಂದ ಚೆನ್ನಾಗಿ ನೆನಪಿಡಿರಿ. ಅಲ್ಲಾಹನ ಮೇಲೆ ಭರವಸೆ ಬಿಡುವುದು ಮೂರ್ಖತನವಾಗಿದೆ. ಒಂದು ಹೊಸದಾದ ಜೀವನ ನಿರ್ಮಿಸಬೇಕು. ಯಥೇಚ್ಛವಾಗಿ 'ಅಸ್ತಗಾರ್' ಪಠಿಸಬೇಕು. ಯಾರಿಗೆ ಸ್ವಲ್ಪವು ಪುರುಸೊತ್ತಿಲ್ಲವೋ ಅವರು ಹೆಚ್ಚು ಭಯಪಡುವ ಅಗತ್ಯವಿದೆ. ಸರಕಾರಿ ನೌಕರರ ಜನರ  ನಮಾಝುಗಳು ಹೆಚ್ಚಾಗಿ ವರ್ಜಿಸಲ್ಪಡುತ್ತವೆ. ಆದುದರಿಂದ ಕೆಲ ಸಂದರ್ಭಗಳಲ್ಲಿ ಝುಹರ್ ಮತ್ತು ಅಸರ್ ಹಾಗೂ ಮಗ್ರೀಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸುವುದು ಧರ್ಮಬದ್ಧವಾಗಿವೆ. ಹಿರಿಯ ಅಧಿಕಾರಿಗಳ ಆಧೀನದಲ್ಲಿ ಕೆಳ ಅಧಿಕಾರಿಗಳ ನಿರ್ದೇಶನಗಳಿರುತ್ತವೆ. ನಮಾಝ್ ಬಿಡಲು ಇಂತಹ ನೆಪಗಳು ಆತ್ಮವಂಚನೆ ಹೊರತು ಇನ್ನೇನಿಲ್ಲ. ಅವನ ಸೃಷ್ಟಿಗಳ ಹಕ್ಕು ಪಾಲನೆಯಲ್ಲಿ ಮತ್ತು ಅಲ್ಲಾಹನ ಹಕ್ಕುಗಳ ಪಾಲನೆಯಲ್ಲಿ ದೌರ್ಜನ್ಯವೆಸಗದಿರಿ.

ನೀವು ಅಲ್ಲಾಹನ ಪ್ರಿಯರಲ್ಲಿ ಸೇರುವವರಾಗಿರಿ. ಬಹಳ ಸೂಕ್ಷ್ಮ ರೀತಿಯ ದಿನಗಳಾಗಿವೆ. ಅಲ್ಲಾಹನ ಪ್ರಕೋಪದಿಂದ ಎಲ್ಲರಿಗೂ ಭಯಪಡಬೇಕಾಗಿದೆ. ಅಲ್ಲಾಹನು ಸಜ್ಜನರ ಹೊರತು ಯಾರನ್ನು ಲೆಕ್ಕಿಸುವುದಿಲ್ಲ ಪರಸ್ಪರ ಸಹೋದರತೆ ಮತ್ತು ಪ್ರೀತಿಯನ್ನು ಉಂಟು ಮಾಡಿರಿ. ಅಮಾನವೀಯತೆ ಹಾಗೂ ವಿಛಿದ್ರಕಾರಿಕೆ ಬಿಟ್ಟುಬಿಡಿ. ಎಲ್ಲ ರೀತಿಯ ಆಡಂಬರ ಹಾಗೂ ಅಪಹಾಸ್ಯದಿಂದ ಪ್ರತ್ಯೇಕಗೊಳ್ಳಿರಿ. ಏಕೆಂದರೆ ಅಪಹಾಸ್ಯ ಮಾಡುವ ಪ್ರವೃತ್ತಿಯೂ ಮನುಷ್ಯನ ಹೃದಯದಿಂದ ಸತ್ಯವನ್ನು ಅಳಸಿಹಾಕುತ್ತದೆ. ಒಬ್ಬರು ಮತ್ತೊಬ್ಬರೊಡನೆ ಆದರದಿಂದ ವರ್ತಿಸಿರಿ. ಪ್ರತಿಯೊಬ್ಬರು ತಮಗಿಂತ ತಮ್ಮ ಸಹೋದರನ ಹಿತಕ್ಕೆ ಆಧ್ಯತೆ ಕೊಡುವವರಾಗಿರಿ. ಅಲ್ಲಾಹನೊಂದಿಗೆ ಒಂದು ನೈಜವಾದ ಮೈತ್ರಿಯನ್ನು ಸಾಧಿಸಿರಿ. ಮತ್ತು ಅವನ ಅನುಸರಣೆಗೆ ಒಳಗಾಗಿರಿ. ಅಲ್ಲಾಹನ ಪ್ರಕೋಪ ಭೂಮಿಯ ಮೇಲೆ ಅವತರಿಸುತ್ತದೆ. ಯಾರು ಪರಿಪೂರ್ಣ ರೂಪದಲ್ಲಿ ತನ್ನ ಎಲ್ಲ ಪಾಪಗಳಿಂದ ಕ್ಷಮೆ ಬೇಡುತ್ತ ಅದರಿಂದ ರಕ್ಷಿಸಿಕೊಳ್ಳುವವರಾಗುವರೋ ಅವರೇ ಸುರಕ್ಷಿತರಾಗುವರು.

**(ಮಲ್ಫೂಝೂತ್, ಸಂಪುಟ 1, ಪುಟ–241–243, ಮುದ್ರಣ ಖಾದಿಯನ್ 2018)**

**ನಮ್ಮಲ್ಲಿಯೇ ಒಬ್ಬ ಮನುಷ್ಯನ ಮೇಲೆ ಹೇಗೆ ದೇವವಾಣಿ (ವಹಿ) ಆಯಿತು ಎಂದು ಅವಿಶ್ವಾಸಿಗಳಿಗೆ ಬಲು ಆಶ್ಚರ್ಯವಾಗುತಿತ್ತು. ಇಂದಿನ ಮುಸಲ್ಮಾನರ ಅವಸ್ಥೆಯೂ ಹಾಗೆಯೇ ಆಗಿದೆ. ಅವರು ಹೇಳುವುದು ಇದನ್ನೆ. ಹಝ್ರತ್ ಈಸಾ(ಅ) ರವರೇ ಆಕಾಶದಿಂದ ಅವತರಿಸಿ ನಮಗೆ ಈ ಹೀನ ಸ್ಥಿತಿಯಿಂದ ಮತ್ತು ಅವನತಿಯಿಂದ ಪಾರು ಮಾಡುವರು ಎಂದು, ನಮಗೆ ಪರಿಹಾರ ಒದಗಿಸಿ ಕೊಡುವಂತಹ ವ್ಯಕ್ತಿ ನಮ್ಮಲ್ಲಿ ಹುಟ್ಟಲು ಸಾಧ್ಯವಿಲ್ಲ.**

ಹಝ್ರತ್ ಮುಸ್ಲಿಹ್ ಮೌಊದ್(ರ), **"ಅಕಾನ ಲಿನ್ನಾಸಿ ಅಜಬನ್ ಅನ್ ಅವ್‌ಹೈನ ಇಲಾ ರಜುಲಿನ್ ಮಿನ್‌ಹುಮ್**.......ಸೂರ: ಯೂನುಸ್ ವಚನ 4ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ:

ತಮ್ಮಲ್ಲಿಯೇ ಒಬ್ಬ ಮನುಷ್ಯನಿಗೆ ಹೇಗೆ ದೇವವಾಣಿ ಅವತರಿಸಿತು ಎಂಬುದು ಅವಿಶ್ವಾಸಿಗಳಿಗೆ ಅಚ್ಚರಿ ಹುಟ್ಟಿಸಿತ್ತು. ಯಾವಾಗಲೂ ಅವನತಿಗೆ ಗುರಿಯಾದ ಸಮುದಾಯಗಳ ಇದೇ ಭಾವನೆಗಳಾಗಿರುತ್ತದೆ. ಅದೇನೆಂದರೆ ನಮ್ಮಲ್ಲಿ ಯಾರು ಮಹಾನ್ ಪುರುಷರು ಹುಟ್ಟುವುದಿಲ್ಲ. ಅಂತೂ ಅವಿಶ್ವಾಸಿಗಳು ಎಷ್ಟರ ಮಟ್ಟಿಗೆ ಅಧೋಗತಿಗೆ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

**ಎಲ್ಲ ಧರ್ಮಗಳಿಗೆ ಆಧ್ಯಾತ್ಮಿಕ ಕಾರ್ಯಗಳಲ್ಲಿ ಪ್ರತಿಪಾದಿಸಲು ಗಂಬೀರ ಪಂಥಹ್ವಾನ.**
**ಸೋಲನ್ನುಭವಿಸಿದರೆ ಹತ್ತು ಸಾವಿರಗಳಿಗೆ ಸಮೀಪವಿರುವ ಎಲ್ಲ ಆಸ್ತಿಗಳನ್ನು ಬಿಟ್ಟುಕೊಡುವೆನು.**

ಈ ಬಹುಮಾನದ ಪಂಥಹ್ವಾನ ನಾವು ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಗ್ರಂಥ "ಆಯಿನ ಕಮಾಲಾತೆ ಇಸ್ಲಾಂ" ರೂಹಾನಿ ಖಝಾಯಿನ್ ಸಂಪುಟ 5 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಈ ಬಹುಮಾನದ ಪಂಥ್ವಾನದಲ್ಲಿ ಅವರು ಯಾವ ವಿಷಯದೆಡೆ ಗಮನ ಸೆಳೆದರೆಂದರೆ -- ಎಲ್ಲ ಧರ್ಮಗಳವರು ತನ್ನ ಧರ್ಮವನ್ನು ಸತ್ಯ ಮತ್ತು ಇತರರ ಧರ್ಮವನ್ನು ಮಿಥ್ಯ ಎಂದು ಭಾವಿಸುತ್ತಾರೆ. ವಿಶೇಷವಾಗಿ ಇಸ್ಲಾಮಿನ ಕುರಿತು ಎಲ್ಲ ಧರ್ಮಗಳ ದೃಷ್ಟಿಯೂ ಅತ್ಯಂತ ದ್ವೇಷಮಯವಾಗಿದೆ. ಅವರು ತಮ್ಮ ಪ್ರೀತಿಯ ನೇತಾರರಾದ ಸಯ್ಯದ್‌ನ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಮೇಲೆ ಅಪಮಾನಕರವಾದ ಆರೋಪಗಳನ್ನು ಜನರು ಹಚ್ಚುತ್ತಾರೆ. ಮತ್ತು ಮುಸಲ್ಮಾನರಿಗೆ ಪೀಡಿಸುವ ಯಾವ ಮಾರ್ಗವನ್ನು ಬಿಟ್ಟುಕೊಡುವುದಿಲ್ಲ. ಮತ್ತು ಅವರು ತಂದಿರುವಂತಹ ಪವಿತ್ರ ಗ್ರಂಥ ಖುರ್‌ಆನ್‌ನ್ನು ಮಿಥ್ಯ ಎಂದು ಭಾವಿಸುತ್ತಾರೆ. ಇಂತಹ ಪರಿಸ್ಥಿತಿಗಳಲ್ಲಿ ಧರ್ಮಗಳ ಸತ್ಯತೆಯನ್ನು ಪರೀಕ್ಷಿಸುವುದು ಕಠಿಣ ಕೆಲಸವಾಗಿರುತ್ತದೆ. ಅದಕ್ಕಾಗಿ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಒಂದು ಅತ್ಯಂತ ಸರಳವಾದ ಮಾರ್ಗ ಕಂಡು ಹಿಡಿದರು. ಅದನ್ನು ಒಬ್ಬ ಅಜ್ಞನಿಯೂ ತಿಳಿಯಬಹುದಾಗಿದೆ. ಅದೇನೆಂದರೆ ಅಲ್ಲಾಹನಿಂದ ಯಾವುದೊ ಭವಿಷ್ಯವಾಣಿ ಅಥವಾ ಪ್ರಾರ್ಥನೆ ಸ್ವೀಕೃತಿಯ ದೃಷ್ಟಾಂತ ಪಡೆದುಕೊಳ್ಳಬೇಕು. ಅಂದ ಹಾಗೆ ಎಲ್ಲ ಧರ್ಮಗಳ ಮಧ್ಯ ಈ ನೆಲೆಯಲ್ಲಿ ಒಂದು ಸ್ಪರ್ಧೆ ಏರ್ಪಡಬೇಕು. ಯಾರು ದೃಷ್ಟಾಂತವನ್ನು ತೋರಿಸಲು ಶಕ್ತವಾಗುವರೋ ಅವರನ್ನು ಸತ್ಯವಂತರು ಮತ್ತು ಅವರ ಧರ್ಮವನ್ನು ಅಲ್ಲಾಹನಿಂದ ಅವತರಿಸಿದ್ದು ಎಂದು ತಿಳಿಯಬಹುದು. ಇದು ಸ್ಪರ್ಧೆಯ ಅತ್ಯುತ್ತಮ ವಿಧಾನವಾಗಿದೆ. ಅದರಿಂದ ಇಡೀ ಲೋಕ ಅನುಭವಿಸಿ ನೋಡಬಹುದು. ಮತ್ತು ಅಲ್ಪ ಜ್ಞಾನವುಲ್ಲವರು ಸಹ ಸರಿಯಾದ ಫಲಿತಾಂಶ ಪಡೆಯಬಹುದು. ಆದುದರಿಂದ ಈ ಕಾರಣಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ಅವರು ಎಲ್ಲ ಧರ್ಮಗಳ ಅನುಯಾಯಿಗಳನ್ನು ಸಂಬೋಧಿಸಿ ಹೇಳಿದರು. ವಿಧಿಬದ್ಧವಾಗಿ ಒಂದು ಜಾಹೀರಾತು ಪ್ರಕಟಪಡಿಸಿದರು. ಅದು ಇದ್ದ ಹಾಗೆ ಕೆಳಗೆ ನಮೂದಿಸಲಾಗಿದೆ.

### ಜಾಹಿರಾತು

ಅಮ್ಮಾಬಾದ್ ಅಂದ ಹಾಗೆ ಈ ಕಾಲದಲ್ಲಿ ಧರ್ಮಗಳು ಕೆಳಗೆ ನಮೂದಿಸಿದ ಖುರ್‌ಆನ್‌ನ ಶಿಕ್ಷಣದ ವಿಷಯಗಳ ಮೇಲೆ ತೀವ್ರತರದ ವಿರೋಧ ಹೊಂದಿವೆ ಮತ್ತು ಅಧಿಕವಾಗಿ ಜನರು ನಮ್ಮ ನೇತಾರರದ ಮಾಲೀಕರಾದ ಹಜ್‌ರತ್ ಮುಹಮ್ಮದ್ ಮುಸ್ತಫಾ ಖಾತಮುಲ್ ಅಂಬಿಯಾ(ಸ) ರವರನ್ನು ಸತ್ಯವಂತರೆಂದು ಭಾವಿಸುವುದಿಲ್ಲ. ಮತ್ತು ಪವಿತ್ರ ಖುರ್‌ಆನ್‌ನ್ನು ದೈವಿಕ ಗ್ರಂಥವೆಂದು ನಂಬುವುದಿಲ್ಲ. ಮತ್ತು ನಮ್ಮ ರಸೂಲುಲ್ಲಾಹ್(ಸ) ರನ್ನು ಸುಳ್ಳು ವಾದಿಗಳು ಮತ್ತು ನಮ್ಮ ಪವಿತ್ರ ಗ್ರಂಥವನ್ನು ಸುಳ್ಳಿನ ಕಂತೇ ಎಂದು ಸಾರುತ್ತಾರೆ. ಈ ಪೈಕಿ ನಮ್ಮ ಮತ್ತು ಅವರ ನಡುವೆ ಚರ್ಚೆಯಲ್ಲಿ ಒಂದು ಕಾಲ ಕಳೆದಿದ್ದೇವೆ ಮತ್ತು ಅವರ ಎಲ್ಲ ಆರೋಪಗಳಿಗೆ ಪರಿಪೂರ್ಣ ರೀತಿಯಲ್ಲಿ ಉತ್ತರವೂ ನೀಡಲಾಗಿದೆ. ಅವರ ಧರ್ಮಗಳ ಮೇಲೆ ಮತ್ತು ಅವರ ಗ್ರಂಥಗಳ ಮೇಲೆ ಆರೋಪಗಳ ಸಾಧ್ಯತೆಯ ಕುರಿತು ಶರತ್ತುಪೂರ್ಣವಾಗಿ ಆಲಿಸಿಕೊಡಳಾಗಿದೆ ಮತ್ತು ಸ್ಪಷ್ಟಪಡಿಸಲಾಗಿದೆ. ಅವರ ಧಾರ್ಮಿಕ ತತ್ವಗಳು ನಂಬಿಕೆಗಳು ಮತ್ತು ಕಾನೂನುಗಳು ಯಾವ ರೀತಿ ಇಸ್ಲಮಿಗೆ ವಿರುದ್ಧವಾಗಿವೆ. ಹೇಗೆ ಸತ್ಯದಿಂದ ದೂರವಾಗಿವೆ ಎಂದು ಮತ್ತು ಹೇಗೆ ನಾಚಿಕೆಗೇಡಾಗಿದೆ ಎಂದು. ಆದರೂ ಸಹ ಆ ಮಹನೀಯರು ಸತ್ಯವನ್ನು ಸ್ವೀಕರಿಸಲಿಲ್ಲ. ತನ್ನ ಅಹಂಭಾವ ಮತ್ತು ಅಶ್ಲೀಲ ಭಾಷೆ ಬಿಡಲಿಲ್ಲ. ಅಂತಿಮವಾಗಿ ನಾವು ಪೂರ್ಣ ರೂಪದ ನ್ಯಾಯತೀರ್ಪಿನ ದೃಷ್ಟಿಯಿಂದ ಈ ಜಾಹೀರಾತು ಪ್ರಕಟಿಸಿದ್ದೇವೆ. ಅದರ ಸಂಕ್ಷಿಪ್ತ ವಿವರ ಕೆಳಗೆ ನಮೂದಿಸಲಾಗುತ್ತಿದೆ.

ಮಹನಿಯರೇ! ಅಂತಿಮ ನಿರ್ಣಯದ ದಿನವನ್ನು ನಂಬುವ ಎಲ್ಲ ಧರ್ಮದವರೇ, ಆತ್ಮವು ಶಾಶ್ವತ ಶಿಕ್ಷೆ ಪುರಸ್ಕಾರ ಮತ್ತು ಪರಲೋಕದ ಮೇಲೆ ವಿಶ್ವಾಸ ಹೊಂದಿದವರೇ. ನೂರಾರು ಮಾತುಗಳಲ್ಲಿ ಭಿನ್ನತೆಯಿದ್ದರೂ ಈ ವಿಷಯಗಳ ಮೇಲೆ ಎಲ್ಲರೂ ಒಮ್ಮತ ಹೊಂದಿದ್ದೇವೆ. ಅದೇನೆಂದರೆ ದೇವನಿದ್ದಾನೆ ಮತ್ತು ಆ ದೇವನೇ ನಮಗೆ ಈ ಧರ್ಮವನ್ನು ನೀಡಿದ್ದಾನೆ. ಮತ್ತು ಇದು ಅವನದ್ದೇ ಮಾರ್ಗದರ್ಶನವಾಗಿದೆ ಎಂದು. ಅದು ನಮ್ಮ ಕೈಯಲ್ಲಿದೆ ಮತ್ತು ನಾವು ಅವನು ನಡೆಸಿದಂತೆ ನಡೆಯುವರು, ಅವನ ಪ್ರೀತಿಯ ದಾಸರು. ಕೇವಲ ನಾವೇ ಅವನಿಗೆ ಪ್ರಿಯರಾದವರು. ಉಳಿದವರೆಲ್ಲರೂ ಅವನ ಪ್ರಕೋಪಕ್ಕೆ ಗುರಿಯಾದವರು. ಮಾರ್ಗಭ್ರಷ್ಟರು ದೇವನು ಅವರಿಂದ ಕ್ರೋಧಿತನಾಗಿರುವನು ಎಂದು. ಅಂದ ಹಾಗೆ ಎಲ್ಲರ ವಾದವು ನಾವೇ ದೇವನ ಇಚ್ಛಾನುಸಾರ ನಡೆಯುವವರಾಗಿದ್ದೇವೆ. ಮತ್ತು ಮುಕ್ತಿ ಪಡೆಯುವ ಹಾಗೂ ಪ್ರಾರ್ಥನೆ ಸ್ವೀಕೃತಿಯ ಇದೇ ಒಂದು ಮಾರ್ಗವಾಗಿದೆ. ಈ ಮಾರ್ಗದಲ್ಲಿ ಇದ್ದವರು ಮಾತ್ರ ದೇವನ ಸಾನಿಧ್ಯ ಪಡೆಯುವವರು ಮತ್ತು ಅವರಿಂದಲೇ ದೇವನು ಪ್ರೀತಿಸುವನು ಮತ್ತು ದೇವನು ಅವರ ಮಾತುಗಳನ್ನೇ ಆಲಿಸುವನು. ಅವರ ಪ್ರಾರ್ಥನೆಗಳನ್ನು ಸ್ವೀಕರಿಸುವನು. ಹೀಗಿರುವಾಗ ನಿರ್ಣಯ ಕೈಗೊಳ್ಳುವುದು ಸುಲಭದ ಕೆಲಸವಾಗಿದೆ. ನಾವು ಸಹ ಈ ಬಗ್ಗೆ ಒಮ್ಮತ ಹೊಂದಿದ್ದೇವೆ. ನಮ್ಮ ದೃಷ್ಟಿಯೂ ಇದೇ ಆಗಿದೆ. ಸತ್ಯ ಮತ್ತು ಮಿಥ್ಯವನ್ನು ಪರೀಕ್ಷಿಸಲು ಯಾವುದಾದರೊಂದು ಸ್ಪಷ್ಟವಾದ ಮಾರ್ಗವಿರಲೇಬೇಕು. ಅದರಿಂದ ಯಾರು ಅಲ್ಲಾಹನ ನಿಜವಾದ ಪಕ್ಷವಹಿಸುವರು ಎಂದು ತಿಳಿಯುವಂತಾಗಬೇಕು. ಹಾಗೆ ನೋಡಿದರೆ ಯಾವ ಸಮಯವು ಸಹ ಇತರ ಸಮುದಾಯಗಳಿಂದ ದೇವಭಕ್ತಿಯುಲ್ಲಾಗಲೀ, ಏಕದೇವತ್ವ ವಿಷಯುದಲ್ಲಾಗಲಿ, ನ್ಯಾಯು ಸತ್ಕರ್ಮಗಳಲ್ಲಾಗಲಿ ಹಿಂದುಳಿದಿದ್ದೇವೆ ಎಂದು ಭಾವಿಸುವುದಿಲ್ಲ. ಹೀಗಾದರೆ ತೀರ್ಪು ನೀಡುವುದು ಕಠಿಣವಾಗುತ್ತದೆ. ನಾವು ಸಹ ಹೇಳುತ್ತೇವೆ. ಇಸ್ಲಾಮಿನಲ್ಲಿ ಎಲ್ಲ ರೀತಿಯ ಮಹೋನ್ನತವಾದ ಅದ್ವಿತೀಯ ಶಿಕ್ಷಣವಿದೆ. ಅದು ಇಸ್ಲಾಮಿನ ವಿಶೇಷತೆಯಿಂದ ಸಾಬೀತುಗೊಂಡಿದೆ. ಉದಾಹರಣೆಗೆ ಇಸ್ಲಾಮಿನ ಏಕದೇವತ್ವ, ಇಸ್ಲಾಮಿನ ಭಯಭಕ್ತಿ, ಇಸ್ಲಾಮಿನ ಕಾಯದೆ ಕಾನೂನುಗಳು, ನೈತಿಕ ರಕ್ಷಣೆ, ಹಕ್ಕುಗಳ ರಕ್ಷಣೆ ಅದು ನಂಬಿಕೆಯ ನೆಲೆಯಲ್ಲಾಗಲಿ, ಕರ್ಮಗಳ ನೆಲೆಯಲ್ಲಾಗಲಿ ಕೋಟ್ಯಾಂತರ ಜನರಿಂದ ಸಾಬೀತಾಗಿದೆ. ಅದರ ಬದಲು ನಮ್ಮ ವಿರೋಧಿಗಳ ನಂಬಿಕೆಗಳು ಮತ್ತು ಕರ್ಮಗಳ ಸ್ಥಿತಿಯೂ ವ್ಯಕ್ತವಾಗಿದೆ. ಅದು ಯಾವ ನ್ಯಾಯವಂತನಿಂದಲೂ ಗೌಪ್ಯವಾಗಿ ಉಳಿದಿಲ್ಲ. ಆದರೆ ದುಃಖದ ಸಂಗತಿ ಎಂದರೆ ನಡುವೆ ದ್ವೇಷವಿದ್ದ ಕಾರಣ ಈ ಮಾತುಗಳನ್ನು ಸವೀಕರಿಸುವರು ಯಾರು ಮತ್ತು ಆಲಿಸುವವರು ಯಾರು. ಆದುದರಿಂದ ಇದು ನಿರ್ಣಾಯಕ ವಿಧಾನವಾಗಿದೆ. ಅದು ನೇಗಿಲು ಹೂಡುವ ಒಬ್ಬ ರೈತನು ಸಹ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಕಾಡು ಮನುಷ್ಯರು ಸಹ ತಿಳಿಯಬಹುದಾಗಿದೆ. ಎಲ್ಲ ಧರ್ಮಗಳಲ್ಲೂ ಈ ಗೊಂದಲ ಪಿತೂರಿ ನಡೆದಿದೆ. ಇದೀಗ ಅದು ಉತ್ತುಂಗಕ್ಕೆ ತಲುಪಿದೆ. ಅವನಿಂದಲೇ ಸಹಾಯ ಯಾಚಿಸಬೇಕಾಗಿದೆ. ಅವನಿಗಾಗಿಯೇ ಈ ಯುದ್ಧಗಳು ನಡೆದಿವೆ. ಅಂದ ಹಾಗೆ ಅಲ್ಲಾಹನು ಇದ್ದಾನೆ. ವಾಸ್ತವದಲ್ಲಿ ಅವನ ಕುರಿತು ಇವೆಲ್ಲ ಯುದ್ಧಗಳಾಗುತ್ತಿವೆ. ಆದುದರಿಂದ ಅವನಿಂದಲೇ ನಿರ್ಣಯ ಬಯಸುವುದು ಉತ್ತಮವಾದ ಮಾರ್ಗವಾಗಿದೆ. ಇದೀಗ ಸ್ಪಷ್ಟಪಡಿಸುವುದೇನೆಂದರೆ ಅಲ್ಲಾಹನ ಅನುಗ್ರಹದಿಂದ ಕೇವಲ ಇಸ್ಲಾಂ ಧರ್ಮವೇ ಸತ್ಯ ಧರ್ಮ ಮತ್ತು ಇತರ ಧರ್ಮಗಳನ್ನು ಮಿಥ್ಯ ಹಾಗೂ ಅಪ್ಪಟ ಮೋಸಗಾರಿಕೆಯ ಗೂಂಬೆ ಎಂದು ಭಾವಿಸುತ್ತೇವೆ. ಮತ್ತು ನಾನು ಸಾದರ ಪಡಿಸುವುದೇನೆಂದರೆ ಇಸ್ಲಾಮಿನ ಅನುಯಾಯಿಗಳೊಂದಿಗೆ ಪ್ರಕಾಶದ ಬುಗ್ಗೆಗಳು ಒಳಗಿನಿಂದ ಹರಿಯುತ್ತಿದೆ. ಕೇವಲ ರಸೂಲುಲಾಹ್(ಸ) ರವರಿಂದ ಪ್ರೀತಿಯ ಸಬಂಧದಿಂದಾಗಿ ನನಗೆ ಉನ್ನತಮಯ ಸ್ಥಾನ, ದೇವವಾಣಿ ಮತ್ತು ಪ್ರಾರ್ಥನೆಗಳ ಸ್ವೀಕೃತಿಯ ಭಾಗ್ಯ ದೊರೆತಿದೆ. ಅದು ಸತ್ಯ ಪ್ರವಾದಿಯ ಅನುಸರಣೆ ಹೊರತು ಯಾರಿಗೂ ದೊರೆಯುವುದಿಲ್ಲ. ಹಿಂದೂ ಹಾಗೂ ಕ್ರೈಸ್ತರು ತನ್ನ ಮಿಥ್ಯ ದೇವರುಗಳನ್ನು ಆರಾಧಿಸುತ್ತ ಪ್ರಾರ್ಥಿಸುತ್ತ ಮರಣಕ್ಕು ತಲುಪಿದರೂ ಅವರಿಗೆ ಆ ಸ್ಥಾನ ದೊರೆಯುವುದಿಲ್ಲ. ದೇವವಾಣಿ ದೈವವಾರ್ತಾರೂಪ ಇತರರು ಕೇವಲ ಸಂಶಯಾತ್ಮಕ ದೃಷ್ಟಿಯಿಂದ ನಂಬುವವರಾದರೆ ನಾನು ನಿಸ್ಸಂಶಯವಾಗಿ ಆಲಿಸುತ್ತಿದ್ದೇವೆ. ನನಗೆ ಮನವರಿಕೆ ಮಾಡಿಕೊಡಲಾಗಿದೆ. ಲೋಕದಲ್ಲಿ ಕೇವಲ ಇಸ್ಲಾಂ ಧರ್ಮವೇ ಸತ್ಯವಾಗಿದೆ, ಮತ್ತು ನನ್ನ ಮೇಲೆ ಸ್ಪಷ್ಟಪಡಿಸಲಾಗಿದೆ. ಇವೆಲ್ಲಾ ಅನುಗ್ರಹಗಳು ಹಝ್ರತ್ ಖಾತಮುಲ್ ಅಂಬಿಯಾ(ಸ) ರವರ ಅನುಸರಣೆಯಿಂದ ಲಭಿಸಿದುದಾಗಿದೆ. ನನಗೆ ಏನೆಲ್ಲ ದೊರೆತಿದೆಯೋ ಅದರ ಉದಾಹರಣೆ ಇತರ ಧರ್ಮಗಳಲ್ಲಿ ಇಲ್ಲ. ಏಕೆಂದರೆ ಅವು ಮಿಥ್ಯವಾಗಿವೆ. ಯಾರಾದರೂ ಸತ್ಯವನ್ನು ಬಯಸುವವನಾಗಿದ್ದರೆ ಆತನು ಹಿಂದೂ ಆಗಿರಲಿ ಅಥವಾ ಕ್ರೈಸ್ತನಾಗಿರಲಿ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರ‌ತ್ ಅಲಿ(ರ) ರವರು ಹಝ್ರತ್ ಝುಬೈರ್(ರ) ರವರೊಂದಿಗೆ ಹೀಗೆ ಕೇಳಿದರು: ನೀವು ನನ್ನ ವಿರುದ್ಧ ಹೋರಾಡಲು ಸೈನ್ಯವನ್ನು ತಯಾರು ಮಾಡಿದ್ದೀರಿ. ಆದರೆ ಅಲ್ಲಾಹನ ಸನ್ನಿಧಿಯಲ್ಲಿ ಇರಿಸಲು ಏನಾದರೂ ಸಬೂಬು ಸಹ ತಯಾರು ಮಾಡಿದ್ದೀರ? ತ್ಯಾಗ ಮತ್ತು ಜೀವಾರ್ಪಣೆ ಮೂಲಕ ಸಿಕ್ಕಿದಂತಹ ಇಸ್ಲಾಮನ್ನು ನೀವೇಕೆ ನಮ್ಮ ಕೈಯಿಂದಲೇ ನಾಶಪಡಿಸಲು ಹೋಗುತ್ತಿದ್ದೀರಿ.**

---

**ಸರಿಯಾದ ತರಬೇತಿ ಸಹ ನಡೆಯಬೇಕು ವರ್ತಮಾನ ಕಾಲದಲ್ಲಿ ಅಲ್ಲಾಹನು ನಮಗೆ ಎಂ.ಟಿ.ಎ. ಒದಗಿಸಿ ಕೊಟ್ಟಿದ್ದಾನೆ. ಖುತ್‌ಬಗಳನ್ನು ಲೋಕದೆಲ್ಲಡೆ ಕೇಳಲಾಗುತ್ತದೆ, ನೋಡಲಾಗುತ್ತದೆ ಮತ್ತು ಕೇಳಿಸಲಾಗುತ್ತದೆ. ಅದೇ ರೀತಿಯಲ್ಲಿ ಎಂ.ಟಿ.ಎ. ಯಲ್ಲಿ ಇತರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತವೆ. ಆದ್ದರಿಂದ ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಸ್ವತಃ ಓದುವುದರೊಂದಿಗೆ ಎಂ.ಟಿ.ಎ.ದೊಂದಿಗೆ ಸಂಬಂಧವಿರಿಸಬೇಕು. ಖ಼ಿಲಾಫತಿನೊಂದಿಗೆ ಸಂಬಂಧ ನೆಲೆನಿಲ್ಲುವಂತಾಗಲು, ಉತ್ತಮಗೊಳ್ಳುತ್ತಿರಲು ಮತ್ತು ವರ್ಧಿಸುತ್ತಾ ಇರಲು ವಿಶೇಷವಾಗಿ ಜುಮಾದ ಖು಼ತ್ಬಗಳನ್ನು ಎಂ.ಟಿ.ಎ. ಮೂಲಕ ಖಂಡಿತವಾಗಿಯೂ ಕೇಳಿರಿ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರ‌ತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ ರಬ್ಬಿ ಕುಲ್ಲಿ ಶೈಇನ್ ಖಾ಼ದಿಮುಕ ರಬ್ಬಿ ಫಹ್‌ಫಝ್ನೀ ವನ್ಸುರ್‌ನೀ ವರ್‌ಹಮ್‌ನೀ ಎಂಬ ದುಆವನ್ನು ಅಧಿಕವಾಗಿ ಮಾಡಿರಿ.ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧು಼ಬಿಕ ಮಿನ್ ಶುರೂರಿಹಿಂ ಎಂಬ ದುಆ ಸಹ ಹೆಚ್ಚಾಗಿ ಮಾಡಿರಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ.**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಶ ಕೋರಿಕೆ**

**ಐದು ದಿವಂಗತರಾದ ಖ಼ೈರ್‌ಪೂರಿನ ಸನ್ಮಾನ್ಯ ಅಬ್ಬಾಸ್ ಬಿನ್ ಅಬ್ದುಲ್‌ಖಾದಿರ್ ಸಾಹಿಬ್‌ರ ಪತ್ನಿಯಾದ ಹಿಂದ ಅಬ್ಬಾಸ್ ಸಾಹಿಬ, ಇರಾಕಿನ ರಿಝ್ವಾ಼ನ್ ನಈಮಿ ಸಾಹಿಬ್, ಸರ್‌ಗೋದ ಜಿಲ್ಲೆಯ ಹಜ್‌ಕ ಪಟ್ಟಣದ ಸನ್ಮಾನ್ಯ ಮಲಿಕ್ ಅಲಿ ಮುಹಮ್ಮದ್ ಸಾಹಿಬ್, ಲಾಹೋರಿನ ಇಹ್‌ಸಾನ್ ಅಹ್ಮದ್ ಸಾಹಿಬ್ ಹಾಗೂ ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್‌ರ ಕಿರಿಯ ಮಗನಾದ ಸನ್ಮಾನ್ಯ ರಿಯಾಝು಼ದ್ದೀನ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–12–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಕಳೆದ ಖುತ್‌ಬದಲ್ಲಿ ಹಝ್ರ‌ತ್ ಉಸ್ಮಾನ್‌ರ(ರ) ಶಹಾದತ್ ಮತ್ತು ಗಲಭೆಗೋರರ ಬಗ್ಗೆ ಪ್ರಸ್ತಾಪಿಸಿದ್ದೆ. ಅದಕ್ಕೆ ಸಂಬಂಧಿಸಿ ಹಝ್ರ‌ತ್ ಅಲಿಯರ(ರ) ಪ್ರಯತ್ನಗಳನ್ನು ವಿವರಿಸಿದ್ದೆ. ಇದರ ಬಗ್ಗೆ ಒಂದು ಮುಖ್ಯವಾದ ಸಂಗತಿಯ ಕಡೆಗೆ ಅಹ್ಮದಿಯರ ಗಮನಸೆಳೆಯುತ್ತಾ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ನೀವು ಸಹ ಸಹಾಬಿಯರ ಹಾಗೆಯೇ ಆಗಿರುವಿರಿ. ಆದ್ದರಿಂದ ಮುಸ್ಲಿಮರು ಹೇಗೆ ನಾಶವಾದರು ಮತ್ತು ಅವರ ನಾಶಕ್ಕೆ ಕಾರಣವಾದ ಸಂಗತಿಗಳೇನಾಗಿದ್ದುವು ಎಂಬುದರ ಕುರಿತು ಚರಿತ್ರೆಯಿಂದ ನಿಮಗೆ ವಿವರಿಸಿಕೊಡಲು ಬಯಸುತ್ತೇನೆ. ಆದ್ದರಿಂದ ನೀವು ಜಾಗರೂಕರಾಗಿರಿ ಮತ್ತು ನವಅಹ್ಮದಿಯರಾಗಿ ನಮ್ಮ ಬಳಿ ಬರುವವರ ಧಾರ್ಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಿರಿ. ಎಂದರೆ ಸರಿಯಾಗಿ ಹೊಸಬರ ತರ್‌ಬಿಯತ್ ನಡೆದಿರಬೇಕು ಮತ್ತು ಅವರ ಧಾರ್ಮಿಕ ಶಿಕ್ಷಣ ನಡೆದಿರಬೇಕು. ಹಝ್ರ‌ತ್ ಉಸ್ಮಾನ್‌ರ(ರ) ಕಾಲದಲ್ಲಿ ತಲೆಯೆತ್ತಿದ್ದ ಆ ಪಿತೂರಿ ಸಹಾಬಿಯರಿಂದ ಉಂಟಾಗಿರಲಿಲ್ಲ. ಫಿತ್ನಕ್ಕೆ ಕಾರಣಕರ್ತರು ಸಹಾಬಿಯರು ಎಂದು ಹೇಳುವವರು ತಪ್ಪು ತಿಳುವಳಿಕೆ ಹೊಂದಿದವರಾಗಿದ್ದಾರೆ. ಹಝ್ರ‌ತ್ ಅಲಿಯ(ರ) ಮತ್ತು ಮುಆವಿಯಾರ ವಿರುದ್ಧ ಹಲವಾರು ಸಹಾಬರು ನಿಂತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಪಿತೂರಿಗೆ ಕಾರಣಕರ್ತರು ಸಹಾಬಿಯರು ಆಗಿರಲಿಲ್ಲ. ಬದಲಿಗೆ ಹೊಸಬರಾಗಿ ನಂತರ ಬಂದವರೇ ಇದಕ್ಕೆ ಕಾರಣರಾಗಿದ್ದರು. ಅವರಿಗೆ ಹಝ್ರ‌ತ್ ಪೈಗಂಬರರ(ಸ) ಸಹವಾಸದ ಸೌಭಾಗ್ಯ ಸಿಕ್ಕಿರಲಿಲ್ಲ ಮತ್ತು ಹಝ್ರ‌ತ್ ಪೈಗಂಬರರ ಬಳಿ ಕುಳಿತಿರಲಿಲ್ಲ. ಆದ್ದರಿಂದ ನಾನು ನಿಮ್ಮ ಗಮನವನ್ನು ಇದರ ಕಡೆಗೆ ಸೆಳೆಯುತ್ತೇನೆ ಮತ್ತು ಫಿತ್ನಗಳಿಂದ ರಕ್ಷಣೆ ಹೊಂದಲಿರುವ ಮಾರ್ಗವನ್ನು ಹೇಳುತ್ತೇನೆ. ಅದೇನೆಂದರೆ, ಖಾದಿಯಾನಿಗೆ ಪದೇ ಪದೇ ಬನ್ನಿರಿ. (ಆ ಸಮಯದಲ್ಲಿ ಹಝ್ರ‌ತ್ ಖ಼ಲೀಫತುಲ್ ಮಸೀಹ್ ಸಾನಿ(ರ) ಖಾದಿಯಾನಿನಲ್ಲಿದ್ದರು.) ನಿಮ್ಮ ವಿಶ್ವಾಸ ತಾಜಾ ಆಗಿ ಇರಲು ಮತ್ತು ಅಲ್ಲಾಹನ ಮೇಲಿನ ಭಯಭಕ್ತಿ ವರ್ಧಿಸುತ್ತಿರಲು ಇಲ್ಲಿಗೆ ಪದೇ ಪದೇ ಬರುತ್ತಾ ಇರಿ. (ಅನ್ವಾರೆ ಖಿಲಾಫ್, ಅನ್ವಾರುಲ್ ಉಲೂಮ್, ಸಂಪುಟ–3, ಪುಟ–171)

ಎಂದರೆ, ನಿಮಗೆ ಮರ್ಕಝ್ ಮತ್ತು ಖ಼ಿಲಾಫತಿನೊಂದಿಗೆ ಸಂಬಂಧವಿರಬೇಕು. ಇದು ಇರುವುದಾದರೆ ಸರಿಯಾದ ತರಬೇತಿ ಸಹ ನಡೆಯುವುದು. ವರ್ತಮಾನ ಕಾಲದಲ್ಲಿ ಅಲ್ಲಾಹನು ನಮಗೆ ಎಂ.ಟಿ.ಎ. ಒದಗಿಸಿ ಕೊಟ್ಟಿದ್ದಾನೆ. ಖುತ್‌ಬಗಳನ್ನು ಲೋಕದೆಲ್ಲಡೆ ಕೇಳಲಾಗುತ್ತದೆ, ನೋಡಲಾಗುತ್ತದೆ ಮತ್ತು ಕೇಳಿಸಲಾಗುತ್ತದೆ. ಅದೇ ರೀತಿಯಲ್ಲಿ ಎಂ.ಟಿ.ಎ. ಯಲ್ಲಿ ಇತರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತವೆ. ಆದ್ದರಿಂದ ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಸ್ವತಃ ಓದುವುದರೊಂದಿಗೆ ಎಂ.ಟಿ.ಎ. ದೊಂದಿಗೆ ಸಂಬಂಧವಿರಿಸಬೇಕು. ಖ಼ಿಲಾಫತಿನೊಂದಿಗೆ ಸಂಬಂಧ ನೆಲೆನಿಲ್ಲುವಂತಾಗಲು, ಉತ್ತಮಗೊಳ್ಳುತ್ತಿರಲು ಮತ್ತು ವರ್ಧಿಸುತ್ತಾ ಇರಲು ವಿಶೇಷವಾಗಿ ಜುಮಾದ ಖು಼ತ್ಬಗಳನ್ನು ಎಂ.ಟಿ.ಎ. ಮೂಲಕ ಖಂಡಿತವಾಗಿಯೂ ಕೇಳಿರಿ.

ಜಮಲ್ ಯುದ್ಧದ ಬಗ್ಗೆ ಹೀಗೆ ವರದಿಯಾಗಿದೆ. ಜಮಲ್ ಯುದ್ಧ ಹಝ್ರ‌ತ್ ಅಲಿ(ರ) ಮತ್ತು ಹಝ್ರ‌ತ್ ಆಇಶರ(ರ) ನಡುವೆ ಹಿಜರೀ 36ರಲ್ಲಿ ನಡೆದಿತ್ತು. ಹಝ್ರ‌ತ್ ಆಇಶರೊಂದಿಗೆ(ರ) ಹಝ್ರ‌ತ್ ತಲ್‌ಹ(ರ) ಮತ್ತು ಹಝ್ರ‌ತ್ ಝುಬೇರ್(ರ) ಸಹ ಸೇರಿದ್ದರು. ಹಝ್ರ‌ತ್ ಆಇಶ(ರ) ಯುದ್ಧ ಮೈದಾನದಲ್ಲಿ ಒಂದು ಒಂಟೆಯ ಮೇಲೆ ಸವಾರರಾಗಿದ್ದರು. ಇದೇ ಕಾರಣದಿಂದ ಜಮಲ್ ಯುದ್ಧವೆಂಬ ಹೆಸರಿನಲ್ಲಿ ಈ ಯುದ್ಧ ಪ್ರಸಿದ್ಧವಾಗಿದೆ. ಜಮಲ್ ಎಂದರೆ ಒಂಟೆ. ಹಝ್ರ‌ತ್ ಆಇಶ(ರ) ಹಜ್ಜ್ ಕರ್ಮ ನಿರ್ವಹಿಸಲು ಮಕ್ಕಕ್ಕೆ ಹೋಗಿದ್ದರು. ಅವರು ಅಲ್ಲೇ ತಂಗಿದ್ದಾಗ ಹಝ್ರ‌ತ್ ಉಸ್ಮಾನ್‌ರ(ರ) ಶಹಾದತಿನ ವಾರ್ತೆ ಅವರಿಗೆ ಲಭಿಸಿತ್ತು. ಉಮ್ರ ಸಹ ನಿರ್ವಹಿಸಿ ಮದೀನದ

ಕಡೆಗೆ ರವಾನೆಯಾದಾಗ ಮಾರ್ಗ ಮಧ್ಯೆ ಸರಫ್ ಎಂಬ ಸ್ಥಳದಲ್ಲಿ ಉಬೈದ್ ಬಿನ್ ಅಬೂಸಲ್ಮಾ ಹಝ್ರತ್ ಆಇಶರನ್ನು(ರ) ಭೇಟಿಯಾದರು. ಅವರು ಆಇಶರಿಗೆ(ರ) ಹಝ್ರತ್ ಉಸ್ಮಾನ್‌ರ(ರ) ಶಹಾದತಿನ, ಹಝ್ರತ್ ಅಲಿ ಖಲೀಫರಾದ ಬಗ್ಗೆ ಮತ್ತು ಮದೀನ ಮುನವ್ವರದಲ್ಲಿ ಕೋಲಾಹಲ ಉಂಟಾದ ಸುದ್ದಿಯನ್ನು ಮುಟ್ಟಿಸಿದರು. ಹೀಗೆ ಹಝ್ರತ್ ಆಇಶ(ರ) ಅಲ್ಲಿಂದಲೇ ಮಕ್ಕಕ್ಕೆ ಮರಳಿಹೋದರು ಮತ್ತು ಹಝ್ರತ್ ಉಸ್ಮಾನ್‌ರ(ರ) ಕೊಲೆಯ ಪ್ರತಿಕಾರವನ್ನು ತೀರಿಸಲು ಮತ್ತು ಪಿತೂರಿಯನ್ನು ಕೊನೆಗೊಳಿಸಲು ಜನರನ್ನು ಒಟ್ಟುಗೂಡಿಸಿದರು. ಅಲ್ಲಿಂದ ಹಝ್ರತ್ ಆಇಶ(ರ), ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್ ಬಿನ್ ಅವಾಮ್‌ರ(ರ) ನೇತೃತ್ವದಲ್ಲಿ ಹಲವಾರು ಜನರು ಒಟ್ಟುಗೂಡಿದರು. ಈ ಸಂಘ ಅಲ್ಲಿಂದ ಬಸ್ರಾದ ಕಡೆಗೆ ರವಾನೆಯಾಯಿತು. ಆ ಸಂಘ ಅಲ್ಲಿಗೆ ಹೋಗುತ್ತಿದೆ ಎಂದು ಗೊತ್ತಾದಾಗ ಹಝ್ರತ್ ಅಲಿ(ರ) ಸಹ ಬಸ್ರಾದ ಕಡೆಗೆ ಹೊರಟರು. ಬಸ್ರಾಗೆ ತಲುಪಿದ ನಂತರ ಹಝ್ರತ್ ಆಇಶ(ರ) ಪಟ್ಟಣನಿವಾಸಿಗಳನ್ನು ತನ್ನೊಡನೆ ಸೇರಲು ಆಮಂತ್ರಿಸಿದರು. ಪಟ್ಟಣನವಾಸಿಗಳಲ್ಲಿ ಹೆಚ್ಚಿನವರು ಹಝ್ರತ್ ಆಇಶರೊಡನೆ(ರ) ಬಂದುಸೇರಿದರು. ಆದರೆ ಒಂದು ಸಂಘವು ಹಝ್ರತ್ ಅಲಿ(ರ) ಬಸ್ರದಲ್ಲಿ ನಿಶ್ಚಯಿಸಿದ್ದ ಅಧಿಕಾರಿಯಾದ ಉಸ್ಮಾನ್ ಬಿನ್ ಹನೀಫ್‌ರ ಕೈಯಲ್ಲಿ ಬೈಅತ್ ಮಾಡಿದರು. ಈ ವೇಳೆ ಎರಡು ಸಂಘಗಳ ನಡುವೆ ಸಂಘರ್ಷ ಕೂಡ ನಡೆಯಿತು. ಹಝ್ರತ್ ಅಲಿಯ(ರ) ಸೈನ್ಯ ಸಹ ಅಲ್ಲಿಗೆ ತಲುಪಿ ಹಝ್ರತ್ ಆಇಶರ(ರ) ಸೈನ್ಯದ ಸಮೀಪ ಡೇರೆ ಹಾಕಿತು. ಉಭಯ ಪಕ್ಷಗಳ ನಡುವೆ ಚರ್ಚೆಗಳ ಮೂಲಕ ಮೈತ್ರಿ ಸಂಧಾನ ಮಾಡಲು ಪ್ರಯತ್ನಿಸಲಾಯಿತು ಮತ್ತು ಅದು ಫಲಕಾರಿಯೂ ಆಗಿತ್ತು. ಆದರೆ ಹಝ್ರತ್ ಉಸ್ಮಾನ್‌ರನ್ನು(ರ) ಕೊಲೆಮಾಡುವುದರಲ್ಲಿ ಭಾಗಿಯಾಗಿದ್ದ ಸಂಘದ ಒಂದು ಭಾಗ ಹಝ್ರತ್ ಅಲಿಯ ಸೈನ್ಯದಲ್ಲಿ ಇತ್ತು. ಅದು ರಾತ್ರಿ ಸಮಯದಲ್ಲಿ, ಹಝ್ರತ್ ಆಇಶರ ಸೈನ್ಯದ ಮೇಲೆ ಹಲ್ಲೆ ನಡೆಸಿತು. ಇದರಿಂದ ಯುದ್ಧ ಶುರುವಾಯಿತು. ಹಝ್ರತ್ ಆಇಶ(ರ) ಒಂಟೆಯ ಮೇಲೆ ಸವಾರರಾಗಿದ್ದರು. ತ್ಯಾಗಶಾಲಿಯರು ಒಂಟೆಯ ಲಗಾಮು ಹಿಡಿಯುತ್ತಾ ಹಝ್ರತ್ ಆಇಶರ(ರ) ಸಂರಕ್ಷಣೆಯಲ್ಲಿ ಶಹೀದ್ ಆಗುತ್ತಿದ್ದರು. ಹಝ್ರತ್ ಆಇಶ(ರ) ಒಂಟೆಯ ಮೇಲೆ ಸವಾರರಾಗಿರುವ ತನಕ ಯುದ್ಧ ಕೊನೆಗೊಳ್ಳಲಿಕ್ಕಿಲ್ಲ ಎಂದು ಹಝ್ರತ್ ಅಲಿ(ರ) ಮನವರಿಕೆ ಮಾಡಿದರು. ಆದ್ದರಿಂದ ಆ ಒಂಟೆಯನ್ನು ಹೇಗೆಯಾದರೂ ಬೀಳಿಸಿ ಕೊಲ್ಲಲು ಹಝ್ರತ್ ಅಲಿ(ರ) ಯೋಧರೊಡನೆ ಆದೇಶಿಸಿದರು. ಏಕೆಂದರೆ ಅದರ ಬೀಳುವಿಕೆಯಿಂದಲೇ ಯುದ್ಧ ಕೊನೆಗೊಳ್ಳುವಂತಿತ್ತು. ಹೀಗೆ ಒಬ್ಬ ವ್ಯಕ್ತಿ ಮುಂದಕ್ಕೆ ಧಾವಿಸಿಕೊಂಡು ಒಂಟೆಯ ಕಾಲಿಗೆ ಖಡ್ಗದಿಂದ ಹಲ್ಲೆ ಮಾಡಿದಾಗ ಅದು ಕೂಗುತ್ತಾ ಕುಳಿತುಕೊಂಡಿತು. ಒಂಟೆಯನ್ನು ನಾಲ್ಕೂ ಕಡೆಯಿಂದ ಹಝ್ರತ್ ಅಲಿಯ(ರ) ಸೈನ್ಯ ಸುತ್ತುವರೆಯಿತು. ಹಝ್ರತ್ ಆಇಶರ(ರ) ಒಂಟೆ ಬಿದ್ದಾಗ ಜಮಲಿನ ಸೈನ್ಯ ಚದುರಿತು. ಅನಂತರ ತಮ್ಮ ಅಸ್ತ್ರಗಳನ್ನು ಕೆಳಗೆ ಹಾಕುವವರಿಗೆ ಅಥವಾ ಮನೆಯ ಬಾಗಿಲನ್ನು ಮುಚ್ಚಿ ಮನೆಯೊಳಗೆ ಇರುವವರಿಗೆ ಅಭಯ ನೀಡಲಾಗುವುದು ಎಂದು ಹಝ್ರತ್ ಅಲಿ(ರ) ಘೋಷಿಸಿದರು. ಯಾರನ್ನು ಹಿಂಬಾಲಿಸಬಾರದೆಂದೂ ಯಾರ ಸಂಪತ್ತನ್ನೂ ಯುದ್ಧ ಸಂಪತ್ತು ಎಂದು ತಿಳಿದು ಅಪಹರಿಸಬಾರದೆಂದೂ ಅವರು ತನ್ನ ಸೈನ್ಯದೊಡನೆ ಹೇಳಿದರು. ಹಝ್ರತ್ ಅಲಿರ(ರ) ಸೈನ್ಯ ಈ ಆದೇಶವನ್ನು ಪಾಲಿಸಿದರು. ಹಝ್ರತ್ ಝುಬೇರ್ ಬಿನ್ ಅವಾಂ(ರ) ಮತ್ತು ಹಝ್ರತ್ ತಲ್‌ಹ(ರ) ಇದೇ ಯುದ್ಧದಲ್ಲಿ ಶಹೀದ್ ಆದರು. (ಅಲ್‌ಕಾಮಿಲ್ ಫಿತ್ತಾರೀಖ್, ಇಬ್ನೆ ಅಸೀರ್, ಸಂಪುಟ–3, ಪುಟ–99–149, ದಾರುಲ್ ಕುತುಬುಲ್ ಇಲ್‌ಮಿಯ ಬೈರೂತ್ ಲಡಬನಾನ್ 2003)

ಇದನ್ನು ಸಂಕ್ಷೇಪವಾಗಿ ಇಬ್ನು ಅಸೀರಿನ ಚರಿತ್ರೆಯ ಭಾಗದಿಂದ ತೆಗೆಯಲಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಇದರ ಕುರಿತು ಹೀಗೆ ಹೇಳುತ್ತಾರೆ:

ಹಝ್ರತ್ ಉಸ್ಮಾನ್‌ರ(ರ) ಕೊಲೆಯಲ್ಲಿ ಭಾಗಿಯಾಗಿದ್ದ ಒಂದು ಸಂಘವೇ ಹಝ್ರತ್ ಉಸ್ಮಾನ್‌ರ(ರ) ಕೊಲೆಯ ಪ್ರತಿಕಾರವನ್ನು ಪಡೆಯಲಿಕ್ಕಾಗಿ ಯುದ್ಧ ಮಾಡಬೇಕೆಂದು ಹಝ್ರತ್ ಆಇಶರನ್ನು ಪ್ರೇರೇಪಿಸಿತ್ತು. ಹೀಗೆ ಹಝ್ರತ್ ಆಇಶ(ರ) ಯುದ್ಧದ ಘೋಷಣೆ ಮಾಡುತ್ತಾ ಸಹಾಬರನ್ನು ತನ್ನ ಸಹಾಯಕ್ಕಾಗಿ ಕರೆದರು. ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಸಹ ಅವರೊಂದಿಗೆ ಸೇರಿದರು. ಇದರ ಕಾರಣದಿಂದ ಹಝ್ರತ್ ಆಇಶ(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರರ(ರ) ಸೈನ್ಯ ಮತ್ತು ಹಝ್ರತ್ ಅಲಿಯ(ರ) ಸೈನ್ಯದ ನಡುವೆ ಯುದ್ಧ ನಡೆಯಿತು. ಎಂದರೆ ಹಝ್ರತ್ ಆಇಶರ(ರ) ಹಿರಿದಾದ ಸೈನ್ಯದಲ್ಲಿ ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಸಹ ಇದ್ದರು. ಹೀಗೆ ಹಝ್ರತ್ ಅಲಿ(ರ) ಮತ್ತು ಹಝ್ರತ್ ಆಇಶರ(ರ) ಮಧ್ಯ ಯುದ್ಧ ನಡೆಯಿತ್ತು. ಅದನ್ನು ಜಮಲ್ ಯುದ್ಧವೆಂದು ಕರೆಯಲಾಗಿದೆ. ಈ ಯುದ್ಧದ ಆರಂಭದಲ್ಲೇ ಹಝ್ರತ್ ಅಲಿಯ(ರ) ನಾಲಗೆಯಿಂದ ಹಝ್ರತ್ ಪೈಗಂಬರರ(ಸ) ಒಂದು ಭವಿಷ್ಯವಾಣಿಯನ್ನು ಆಲಿಸಿಕೊಂಡು ಹಝ್ರತ್ ಝುಬೇರ್(ರ) ಯುದ್ಧದಿಂದ ಬೇರ್ಪಟ್ಟು ನಿಂತಿದ್ದರು. ಹಝ್ರತ್ ಅಲಿಯ(ರ) ವಿರುದ್ಧ ಯುದ್ಧ ಮಾಡುವುದಿಲ್ಲವೆಂದು ಹಝ್ರತ್ ಝುಬೇರ್ ಶಪಥ ಮಾಡಿದ್ದರು. ಸಂಗತಿಯನ್ನು ಮನವರಿಕೆ ಮಾಡುವುದರಲ್ಲಿ ತಪ್ಪಾಗಿದೆ ಎಂದು ಅವರು ಸಮ್ಮತಿಸಿದರು. ಇನ್ನೊಂದು ಕಡೆ ಹಝ್ರತ್ ತಲ್‌ಹ(ರ) ಸಹ ತನ್ನ ಮರಣಕ್ಕೆ ಮುಂಚಿತವಾಗಿ ಹಝ್ರತ್ ಅಲಿಯ(ರ) ಬೈಅತ್ ಮಾಡಿದ್ದರು. ಕಳೆದ ಖುತ್ಬದಲ್ಲಿ ಇದರ ಬಗ್ಗೆ ಹೇಳಿದ್ದೆ. ವರದಿಗಳಲ್ಲಿ ಹೀಗೆ ಬಂದಿದೆ: ಅವರು ಗಾಯದ ನೋವಿನಿಂದ ನರಳುತ್ತಿದ್ದರು. ಒಬ್ಬ ವ್ಯಕ್ತಿ ಅವರ ಸಮೀಪದಿಂದ ಹಾದುಹೋಗುತ್ತಿದ್ದರು. ಯಾವ ಪಕ್ಷದವರಾಗಿದ್ದೀರಿ ಎಂದು ಹಝ್ರತ್ ತಲ್‌ಹ(ರ) ಅವರೊಡನೆ ಕೇಳಿದರು. ಹಝ್ರತ್ ಅಲಿಯ(ರ) ಪಕ್ಷದವನಾಗಿದ್ದೇನೆ ಎಂದು ಆ ವ್ಯಕ್ತಿ ಹೇಳಿದರು. ಆಗ ಹಝ್ರತ್ ತಲ್‌ಹ(ರ) ತನ್ನ ಕೈಯನ್ನು ಆ ವ್ಯಕ್ತಿಯ ಕೈಯಲ್ಲಿ ಇಟ್ಟುಕೊಂಡು ಹೀಗೆ ಹೇಳಿದರು: ನಿನ್ನ ಕೈ ಅಲಿಯ ಕೈಯಾಗಿದೆ. ನಾನು ನಿನ್ನ ಕೈಯ ಮೂಲಕ ಹಝ್ರತ್ ಅಲಿಗೆ ಪುನಃ ಬೈಅತ್ ಮಾಡುತ್ತೇನೆ. ಒಟ್ಟಿನಲ್ಲಿ, ಇತರ ಸಹಾಬರ ಭಿನ್ನಾಭಿಪ್ರಾಯಗಳು ಜಮಲ್ ಯುದ್ಧದ ಸಂದರ್ಭದಲ್ಲೇ ತೀರ್ಮಾನವಾಯಿತು.ಆದರೆ ಹಝ್ರತ್ ಮುಆವಿಯಾರ ಭಿನ್ನತೆ ಬಾಕಿಯಾಗಿ ಉಳಿದಿತ್ತು. ಅದು ಸಿಫ್ಫೀನ್ ಯುದ್ಧಕ್ಕೆ ಕಾರಣವಾಯಿತು. (ಖಿಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ–15, ಪುಟ–485–486)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಮತ್ತೆ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ(ರ) ಕೊಲೆಗಾರರ ಸಂಘ ವಿವಿಧ ದಿಕ್ಕುಗಳಲ್ಲಿ ಹರಡಿದ್ದುವು. ತಮ್ಮನ್ನು ತಾವೇ ಆರೋಪಗಳಿಂದ ಮುಕ್ತಗೊಳಿಸಲು ಆ ಸಂಘದವರು ಇತರರ ಮೇಲೆ ಆರೋಪ ಹೊರಿಸುತ್ತಿದ್ದರು. ಹಝ್ರತ್ ಅಲಿ(ರ) ಮುಸ್ಲಿಮರಿಂದ ಬೈಅತ್ ಪಡೆದಾಗ, ಅವರ ಮೇಲೆ ಆರೋಪ ಹೊರಿಸಲು ಅವರಿಗೆ ಉತ್ತಮ ಸಂದರ್ಭ ಸಿಕ್ಕಿತು. ಹಝ್ರತ್ ಅಲಿಯ(ರ) ಸುತ್ತಮುತ್ತ ಹಝ್ರತ್ ಉಸ್ಮಾನ್‌ರ ಕೊಲೆಗಾರರಲ್ಲಿ ಸ್ವಲ್ಪ ವ್ಯಕ್ತಿಗಳು ಒಟ್ಟುಗೂಡಿದ್ದರು ಎಂಬುದು ಸರಿಯೂ ಆಗಿತ್ತು. ಆದ್ದರಿಂದ ಅವರಿಗೆ ಹಝ್ರತ್ ಅಲಿಯ(ರ) ಮೇಲೆ ಆರೋಪ ಹೊರಿಸಲು ಉತ್ತಮ ಸಂದರ್ಭ ಸಿಕ್ಕಂತಾಯಿತು. ಹಝ್ರತ್ ಉಸ್ಮಾನ್‌ರ(ರ) ಕೊಲೆಗೆ ಪ್ರತಿಕಾರ ಪಡೆಯಲು ಯುದ್ಧ ಮಾಡುವಂತೆ ಘೋಷಿಸಲು ಹಝ್ರತ್ ಆಇಶರನ್ನು(ರ)ಮಕ್ಕದ ಕಡೆಗೆ ಹೋದ ಸಂಘ ಪ್ರೇರೇಪಿಸಿತು. ಹೀಗೆ ಅವರು ಯುದ್ಧದ ಘೋಷಣೆ ಮಾಡಿದರು ಮತ್ತು ಸಹಾಬಿಯರನ್ನು ತನ್ನ ಸಹಾಯಕ್ಕಾಗಿ ಕರೆದರು. ಹಝ್ರತ್ ಉಸ್ಮಾನ್‌ರ(ರ) ಕೊಲೆಗಾರರಿಂದ ಬೇಗನೇ ಪ್ರತಿಕಾರ ತೀರಿಸುವುದು ಎಂಬ ಶರತ್ತಿನೊಂದಿಗೆ ತಲ್‌ಹ(ರ) ಮತ್ತು ಝುಬೇರ್(ರ) ಹಝ್ರತ್ ಅಲಿಯ(ರ) ಕೈಯಲ್ಲಿ ಬೈಅತ್ ಪಡೆದಿದ್ದರು. ಬೇಗನೇ ಎಂಬುವುದರಿಂದ ಅವರ ಮನವರಿಕೆ ಮಾಡಿದ್ದ ಅರ್ಥವೂ ಯುಕ್ತಿಗೆ ವಿರುದ್ಧವೂ ಆಗಿತ್ತು ಮತ್ತದು ಸಂದರ್ಭೋಚಿತವೂ ಆಗಿರಲಿಲ್ಲ. ರಾಜ್ಯದ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿದ ನಂತರ ಕೊಲೆಗಾರರಿಗೆ ಶಿಕ್ಷೆ ನೀಡುವುದರ ಕಡೆಗೆ ಗಮನ ವಹಿಸಬೇಕೆಂದಾಗಿತ್ತು ಹಝ್ರತ್ ಅಲಿಯ(ರ) ಅಭಿಪ್ರಾಯ. ಏಕೆಂದರೆ ಇಸ್ಲಾಮಿನ ಸಂರಕ್ಷಣೆಗೆ ಪ್ರಥಮ ಆದ್ಯತೆ ನೀಡಬೇಕಾಗಿತ್ತು. ಕೊಲೆಗಾರರ ವಿಷಯದಲ್ಲಿ ತಡವಾದರೆ, ಯಾವುದೇ ಅಡ್ಡಿಯಾಗುತ್ತಿರಲಿಲ್ಲ. ಅದೇ ರೀತಿಯಲ್ಲಿ ಯಾರೆಲ್ಲ ಕೊಲೆಗಾರರಾಗಿದ್ದರು ಎಂಬುವುದರ ಬಗ್ಗೆ ಸಹ ಭಿನ್ನಾಭಿಪ್ರಾಯಗಳಿದ್ದುವು. ಅತ್ಯಂತ ಶೋಕದ ಮುಖ ಮಾಡಿಕೊಂಡು ಮೊತ್ತಮೊದಲು ಹಝ್ರತ್ ಅಲಿಯ(ರ) ಬಳಿಗೆ ಬಂದಿದ್ದ ಮತ್ತು ಇಸ್ಲಾಮಿನಲ್ಲಿ ಬಿರುಕಿನ ಸಾಧ್ಯತೆ ಬಗ್ಗೆ ಚಿಂತೆಯಿರುವುದಾಗಿ ಬಾಹ್ಯವಾಗಿ ಪ್ರಕಟಿಸುತ್ತಿದ್ದವರ ಬಗ್ಗೆ ಇವರೇ ಕಲಹಕ್ಕೆ ಕಾರಣಕರ್ತರು ಎಂದು ಹಝ್ರತ್ ಅಲಿಗೆ(ರ) ಸಹಜವಾಗಿಯೇ ಯಾವುದೇ ಸಂಶಯ ಉಂಟಾಗುತ್ತಿರಲಿಲ್ಲ. ಆದರೆ ಇತರ ಜನರಿಗೆ ಅವರ ಮೇಲೆ ಸಂಶಯವಿತ್ತು. ಹಝ್ರತ್ ಅಲಿಗೆ(ರ) ಸಂಶಯವಿರಲಿಲ್ಲ. ಈ ಭಿನ್ನಾಭಿಪ್ರಾಯದ ಕಾರಣದಿಂದ ಹಝ್ರತ್ ಅಲಿ(ರ) ತನ್ನ ಪ್ರತಿಜ್ಞೆಯಿಂದ ಹಿಂದೆ ಸರಿಯುತ್ತಿದ್ದಾರೆಂದು ತಲ್‌ಹ ಮತ್ತು ಝುಬೇರ್ ಭಾವಿಸಿದರು. ಏಕೆಂದರೆ ಅವರು ಒಂದು ಶರತ್ತಿನ ಮೇಲೆ ಬೈಅತ್ ಮಾಡಿದ್ದರು. ಆ ಶರತ್ತನ್ನು ಹಝ್ರತ್ ಅಲಿ(ರ) ಪೂರ್ತಿ ಮಾಡುತ್ತಿಲ್ಲವೆಂದು ಅವರು ಭಾವಿಸಿದ್ದರು. ಆದ್ದರಿಂದ ಅವರು ನಿಯಮ ಪರವಾಗಿ ತಮ್ಮನ್ನು ತಾವೇ ಬೈಅತಿನಿಂದ ಸ್ವತಂತ್ರರೆಂದು ಭಾವಿಸುತ್ತಿದ್ದರು. ಹಝ್ರತ್ ಆಇಶ(ರ) ಘೋಷಣೆ ಬಗ್ಗೆ ಅವರಿಗೆ ಗೊತ್ತಾದಾಗ, ಅವರು ಸಹ ಹಝ್ರತ್ ಆಇಶರೊಡನೆ(ರ) ಸೇರಿದರು ಮತ್ತು ಬಸ್ರಾದ ಕಡೆಗೆ ಹೋದರು. ಬಸ್ರಾದ ಜನರನ್ನು ಯುದ್ಧದಲ್ಲಿ ಭಾಗಿಯಾಗುವುದರಿಂದ ಬಸ್ರಾದ ಗವರ್ನರ್ ತಡೆದರು. ಆದರೆ ತಲ್‌ಹ ಮತ್ತು ಝುಬೇರ್ ನಿರ್ಬಂಧಿತರಾಗಿ ಮತ್ತು ಒಂದು ನಿಬಂಧನೆ ಇರಿಸಿಕೊಂಡು ಹಝ್ರತ್ ಅಲಿಯ(ರ) ಬೈಅತ್ ಮಾಡಿದ್ದರು ಎಂದು ಗೊತ್ತಾದಾಗ ಹೆಚ್ಚಿನ ಜನರು

ಯುದ್ಧದಲ್ಲಿ ಭಾಗವಹಿಸಲು ಸೈನ್ಯದಲ್ಲಿ ಸೇರಿದರು. ಹಝ್ರತ್ ಅಲಿಗೆ(ರ) ಈ ಸೈನ್ಯದ ಅರಿವಾದಾಗ ಅವರು ಸಹ ಒಂದು ಸೈನ್ಯವನ್ನು ತಯಾರು ಮಾಡಿದರು ಮತ್ತು ಬಸ್ರಾದ ಕಡೆಗೆ ರವಾನೆಯಾದರು. ಬಸ್ರಾಗೆ ತಲುಪಿದ ನಂತರ ಒಬ್ಬ ವ್ಯಕ್ತಿಯನ್ನು ಹಝ್ರತ್ ಆಇಶ(ರ), ತಲ್‌ಹ(ರ) ಮತ್ತು ಝುಬೇರರ(ರ) ಕಡೆಗೆ ಕಳುಹಿಸಿದರು. ಆ ವ್ಯಕ್ತಿ ಮೊದಲು ಹಝ್ರತ್ ಆಇಶರ(ರ) ಸನ್ನಿಧಿಯಲ್ಲಿ ಹಾಜರಾಗಿ ಅವರೊಡನೆ ಅವರ ಉದ್ದೇಶವೇನೆಂದು ಕೇಳಿದರು. ಹಝ್ರತ್ ಆಇಶ(ರ) ಹೇಳಿದರು: ನಮ್ಮ ಉದ್ದೇಶ ಕೇವಲ ಸುಧಾರಣೆಯಾಗಿದೆ. ಅನಂತರ ಆ ವ್ಯಕ್ತಿ ತಲ್‌ಹ(ರ) ಮತ್ತು ಝುಬೇರ್‌ರೊಡನೆ(ರ) ಕೇಳಿದರು: ನೀವೂ ಸುಧಾರಣೆಗಾಗಿ ಯುದ್ಧ ಮಾಡಲು ತಯಾರಾಗಿದ್ದೀರಾ? ಹೌದೆಂದು ಅವರು ಹೇಳಿದರು. ಎಂದರೆ ಸುಧಾರಣೆಗಾಗಿ. ಆ ವ್ಯಕ್ತಿ ಹೇಳಿದರು: ನಿಮ್ಮ ಉದ್ದೇಶ ಸುಧಾರಣೆ ಎಂದಾದರೆ, ನೀವೀಗ ಕೈಗೊಂಡಿರುವುದು ಅದಕ್ಕಿರುವ ಸರಿಯಾದ ಮಾರ್ಗವಲ್ಲ. ಇದರಿಂದ ಕೇವಲ ಕಲಹವುಂಟಾಗುವುದು. ಈಗ ದೇಶದ ಸ್ಥಿತಿ ಹೇಗಿದೆ ಎಂದರೆ, ಒಬ್ಬ ವ್ಯಕ್ತಿಯನ್ನು ನೀವು ಕೊಂದರೆ, ಸಾವಿರಾರು ಜನರು ಅವರ ಪರವಾಗಿ ನಿಲ್ಲುವರು. ಆ ಜನರನ್ನು ಎದುರಿಸಲು ಹೋದರೆ ಇನ್ನೂ ಹೆಚ್ಚಿನ ಜನರು ಅವರ ಸಹಾಯಕ್ಕಾಗಿ ನಿಲ್ಲುವರು. ಹೀಗೆ ಈ ಪರಂಪರೆ ಮುಂದುವರೆಯುವುದು. ಆದ್ದರಿಂದ ಸುಧಾರಣೆ ಏನೆಂದರೆ, ಮೊದಲು ದೇಶವನ್ನು ಒಗ್ಗಟ್ಟಿನ ಹಗ್ಗದಲ್ಲಿ ಕಟ್ಟಬೇಕು. ಅನಂತರ ಕಿಡಿಗೇಡಿಗಳಿಗೆ ಶಿಕ್ಷೆ ನೀಡಬೇಕು. ಇಲ್ಲದಿದ್ದರೆ, ಈ ಅಶಾಂತಿಯ ಸ್ಥಿತಿಯಲ್ಲಿ ಯಾರಿಗಾದರೂ ಶಿಕ್ಷೆಯನ್ನು ಕೊಡುವುದರಿಂದ ದೇಶವೂ ಇನ್ನೂ ಹೆಚ್ಚಿನ ಫಿತ್ನಕ್ಕೆ ಗುರಿಯಾಗುವುದು. ಸರ್ಕಾರ ಮೊದಲು ಸ್ಥಾಪಿತವಾದರೆ, ಅದು ತಪ್ಪುಗಾರರನ್ನು ಶಿಕ್ಷಿಸುವುದು. ಇದನ್ನು ಕೇಳಿದಾಗ ಅವರು ಹೇಳಿದರು: ಹಝ್ರತ್ ಅಲಿಯ(ರ) ಉದ್ದೇಶ ಇದೇ ಎಂದಾದರೆ, ಅವರು ಬರಲಿ. ನಾವು ಅವರೊಡನೆ ಸೇರಲು ತಯಾರಾಗಿದ್ದೇವೆ. ಇದರ ವಿವರವನ್ನು ಹಝ್ರತ್ ಅಲಿಗೆ(ರ) ತಿಳಿಸಲಾಯಿತು. ಯುದ್ಧ ಮಾಡುವುದು ಸರಿಯಲ್ಲ, ರಾಜಿ ಮಾಡಿಕೊಳ್ಳಬೇಕೆಂದು ಉಭಯ ಪಕ್ಷಗಳ ಪ್ರತಿನಿಧಿಗಳು ಪರಸ್ಪರ ಭೇಟಿಯಾಗಿ ತೀರ್ಮಾನಿಸಿದರು. ಅಷ್ಟರಲ್ಲಿ ಹಝ್ರತ್ ಅಲಿ(ರ) ಆ ಪ್ರದೇಶಕ್ಕೆ ತಲುಪಿದರು. ಅಲ್ಲಿ ಅವರು ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ತಲ್‌ಹರನ್ನು(ರ) ಭೇಟಿಯಾದರು. ಈ ಸುದ್ದಿ ಸಬಾಯಿಯರಿಗೆ, ಎಂದರೆ ಅಬ್ದುಲ್ಲಾಹ್ ಬಿನ್ ಸಬಾರ ಸಂಘದ ಜನರಿಗೆ ಮತ್ತು ಹಝ್ರತ್ ಉಸ್ಮಾನ್‌ರ(ರ) ಕೊಲೆಯಲ್ಲಿ ಭಾಗಿಯಾಗಿದ್ದ ಜನರಿಗೆ ತಲುಪಿದಾಗ ಅವರು ತುಂಬಾ ಭಯಗೊಂಡರು. ರಹಸ್ಯವಾಗಿ ಅವರ ಒಂದು ಸಂಘ ಸಮಾಲೋಚನೆಗಾಗಿ ಒಟ್ಟುಗೂಡಿದರು. ಮುಸ್ಲಿಮರು ಪರಸ್ಪರ ರಾಜಿಯಾದರೆ ನಮಗೆ ಅಪಾಯಕಾರಿಯಾದ ಸಂಗತಿಯಾಗಿದೆ, ಏಕೆಂದರೆ ಮುಸ್ಲಿಮರು ಪರಸ್ಪರ ಹೋರಾಟ ನಡೆಸುವ ತನಕ ಮಾತ್ರ ಹಝ್ರತ್ ಉಸ್ಮಾನ್‌ರ(ರ) ಕೊಲೆ ಮಾಡಿದ ಶಿಕ್ಷೆಯಿಂದ ಪಾರಾಗಲು ಸಾಧ್ಯ. ರಾಜಿಯಾದರೆ ಮತ್ತು ಶಾಂತಿ ಸ್ಥಾಪನೆಯಾದರೆ ನಮಗೆ ವಾಸಸ್ಥಳ ಇರಲಿಕ್ಕಿಲ್ಲ. ಆದ್ದರಿಂದ ಹೇಗಿದ್ದರು ರಾಜಿಯಾಗದಂತೆ ಮಾಡಬೇಕೆಂದು ಅವರು ಸಮಾಲೋಚನೆ ನಂತರ ತೀರ್ಮಾನಿಸಿದರು. ಹೇಗಿದ್ದರೂ ಹಝ್ರತ್ ಝುಬೇರ್(ರ) ಮತ್ತು ತಲ್‌ಹರನ್ನು(ರ)ಹಝ್ರತ್ ಅಲಿ(ರ) ಭೇಟಿಯಾಗಿ ಹೀಗೆ ಕೇಳಿದರು: ನೀವು ನನ್ನ ವಿರುದ್ಧ ಹೋರಾಡಲು ಸೈನ್ಯವನ್ನು ತಯಾರು ಮಾಡಿದ್ದೀರಿ. ಆದರೆ ಅಲ್ಲಾಹನ ಸನ್ನಿಧಿಯಲ್ಲಿ ಇರಿಸಲು ಏನಾದರೂ ಸಬೂಬು ಸಹ ತಯಾರು ಮಾಡಿದ್ದೀರ? ತ್ಯಾಗ ಮತ್ತು ಜೀವಾರ್ಪಣೆ ಮೂಲಕ ಸಿಕ್ಕಿದಂತಹ ಇಸ್ಲಾಮನ್ನು ನೀವೇಕೆ ನಿಮ್ಮ ಕೈಯಿಂದಲೇ ನಾಶಪಡಿಸಲು ಹೋಗುತ್ತಿದ್ದೀರಿ. ನಾನು ನಿಮ್ಮ ಸಹೋದರನಲ್ಲವೇ? ಹೀಗಿರುವಾಗ ಮೊದಲು ಮುಸ್ಲಿಮರು ಪರಸ್ಪರರನ್ನು ಕೊಲ್ಲುವುದು ಹರಾಂ ಎಂದು ನಿಷಿದ್ಧವೆಂದು ನಾವು ಅರಿತ್ತಿದ್ದೆವು. ಆದರೆ ಈಗ ಅದು ಹಲಾಲ್ ಆಯಿತೇ, ಅನುಮತನೀಯವಾಯಿತೇ? ಇದರ ಕುರಿತು ಏನಾದರೂ ಹೊಸ ಪಾಠ ಬಂದಿದ್ದರೆ ಹೇಳಬಹುದಾಗಿತ್ತು. ಹೊಸ ಸಂಗತಿ ಏನೂ ಇಲ್ಲದಿರುವಾಗ, ಈ ಹೋರಾಟದ ಆವಶ್ಯಕತೆಯೇನು? ಆಗ ಹಝ್ರತ್ ತಲ್‌ಹ(ರ) ಹೇಳಿದರು: ಹಝ್ರತ್ ಉಸ್ಮಾನ್‌ರನ್ನು(ರ) ಕೊಲ್ಲಲ್ಲು ನೀವು ಜನರನ್ನು ಪ್ರೇರೇಪಿಸಿದ್ದೀರಿ. ಹಝ್ರತ್ ಅಲಿ(ರ) ಹೇಳಿದರು: ಹಝ್ರತ್ ಉಸ್ಮಾನ್‌ರ(ರ) ಕೊಲೆಯಲ್ಲಿ ಭಾಗಿಯಾದವರ ಮೇಲೆ ನಾನು ಶಾಪ ಹಾಕುತ್ತೇನೆ. ಅನಂತರ ಹಝ್ರತ್ ಅಲಿ(ರ) ಹಝ್ರತ್ ಝುಬೇರ್‌ರೊಡನೆ(ರ) ಹೇಳಿದರು: ಅಲ್ಲಾಹನಾಣೆ, ನೀವು ಅಲಿಯ ವಿರುದ್ಧ ಯುದ್ಧ ಮಾಡುವಿರಿ ಮತ್ತು ನೀವು ತಪ್ಪುಗಾರರಾಗಿರುತ್ತೀರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದು ನಿಮಗೆ ನೆನಪಿಲ್ಲವೇ? ಇದನ್ನು ಕೇಳಿ ಹಝ್ರತ್ ಝುಬೇರ್(ರ) ತನ್ನ ಸೈನ್ಯದ ಕಡೆಗೆ ಮರಳಿ ಹೋದರು ಮತ್ತು ಹಝ್ರತ್ ಅಲಿಯ ವಿರುದ್ಧ ಖಂಡಿತ ಯುದ್ಧ ಮಾಡುವುದಿಲ್ಲವೆಂದು ಶಪಥ ಮಾಡಿದರು. ಸರಿಯಾದ ಸಂಗತಿಯೇನೆಂದು ಮನವರಿಕೆ ಮಾಡುವುದರಲ್ಲಿ ತಪ್ಪಾಯಿತು ಎಂದು ಸಮ್ಮತಿಸಿದರು. ಈಗ ಯುದ್ಧ ನಡೆಯುವುದಿಲ್ಲ. ಬದಲಿಗೆ ರಾಜಿಯಾಗುವುದು ಎಂಬ ವಾರ್ತೆ ಸೈನ್ಯದಲ್ಲಿ ಹರಡಿದಾಗ ಎಲ್ಲರೂ ಸಮಾಧಾನಗೊಂಡರು. ಆದರೆ ಗಲಭೆಗೋರರು ಬಹಳವಾಗಿ ಭಯಗೊಂಡರು. ಇಂತಹ ಸನ್ನಿವೇಶದಲ್ಲಿ ಪಿತೂರಿ ಉಂಟುಮಾಡಿದವರಿಗೆ ಗಾಬರಿ ಉಂಟಾಗುವುದು ಸಹಜವಾದ ಸಂಗತಿಯಾಗಿತ್ತು. ರಾತ್ರಿಯಾದಾಗ ಗಲಭೆಗಾರರು ರಾಜಿಯಾಗುವುದನ್ನು ತಡೆಯಲು ಯೋಜನೆ ಹಾಕಿದರು. ಉಭಯ ಸೈನ್ಯದಲ್ಲೂ ಗಲಭೆಗಾರರಾದ ಕಪಟವಿಶ್ವಾಸಿಗಳು ಸೇರಿಕೊಂಡಿದ್ದರು. ಹಝ್ರತ್ ಅಲಿಯ(ರ) ಸೈನ್ಯದಲ್ಲಿದ್ದ ಆ ಕಪಟವಿಶ್ವಾಸಿಗಳಾದ ಗಲಭೆಗಾರರು ಹಝ್ರತ್ ಆಇಶರ(ರ) ಸೈನ್ಯದ ಮೇಲೆ ರಾತ್ರಿ ಸಮಯದಲ್ಲಿ ಆಕ್ರಮಣ ನಡೆಸಿದರು. ಹಝ್ರತ್ ಆಇಶರ(ರ) ಸೈನ್ಯದಲ್ಲಿದ್ದ ಕಪಟವಿಶ್ವಾಸಿಗಳಾದ ಗಲಭೆಗಾರರು ಹಝ್ರತ್ ಅಲಿಯ(ರ) ಸೈನ್ಯದ ಮೇಲೆ ರಾತ್ರಿ ಸಮಯದಲ್ಲಿ ಹಲ್ಲೆ ನಡೆಸಿದರು. ಇದರಿಂದ ಪ್ರತಿಯೊಂದು ಪಕ್ಷದವರು ಎದುರಿನ ಪಕ್ಷ ರಾಜಿ ಮಾಡಿದ ನಂತರ ಮೋಸ ಮಾಡಿದೆ ಎಂದು ಭಾವಿಸಿದರು. ಸತ್ಯದಲ್ಲಿ ಇದು ಗಲಭೆಗಾರರ ಕುತಂತ್ರವಾಗಿತ್ತು. ಯುದ್ಧ ಶುರುವಾದಾಗ, ಬಹುಶಃ ಹಝ್ರತ್ ಆಇಶರ(ರ) ಮೂಲಕ ಈ ಫಿತ್ನ ದೂರವಾಗಬಹುದೆಂದು ಯೋಚಿಸಿಕೊಂಡು ಯಾರಾದರೂ ಇದರ ಬಗ್ಗೆ ಹಝ್ರತ್ ಆಇಶಗೆ(ರ) ತಿಳಿಸಲು ಹಝ್ರತ್ ಅಲಿ(ರ) ಹೇಳಿದರು. ಹೀಗೆ ಹಝ್ರತ್ ಆಇಶರ(ರ) ಒಂಟೆಯನ್ನು ಮುಂದೆ ಮಾಡಲಾಯಿತು. ಆದರೆ ಇದರ ಪರಿಣಾಮ ಇನ್ನೂ ಅಪಾಯಕಾರಿಯಾಯಿತು. ಗಲಭೆಗಾರರ ಕುತಂತ್ರ ಅವರಿಗೆಯೇ ತಿರುಗೇಟು ಆಗುತ್ತಿದೆ ಎಂದು ಅವರು ನೋಡಿದಾಗ, ಗಲಭೆಗಾರರು ಹಝ್ರತ್ ಆಇಶರ(ರ) ಒಂಟೆಗೆ ಬಾಣ ಹೂಡಲು ಶುರುಮಾಡಿದರು. ಹಝ್ರತ್ ಆಇಶ(ರ) ಜೋರಾಗಿ ಹೀಗೆ ಹೇಳಲು ಶುರುಮಾಡಿದರು: ಎಲೈ ಜನರೇ, ಯುದ್ಧವನ್ನು ಉಪೇಕ್ಷಿಸಿರಿ. ಅಲ್ಲಾಹನನ್ನು ಮತ್ತು ನ್ಯಾಯತೀರ್ಮಾನದ ದಿನವನ್ನು ನೆನಪಿಡಿರಿ. ಆದರೆ ಗಲಭೆಗಾರರು ಹಿಂದೆಸರಿಯಲಿಲ್ಲ. ಅವರು ಒಂಟೆಗೆ ಬಾಣ ಬೀಸುತ್ತಾ ಹೋದರು. ಬಸ್ರಾದ ಜನರು ಹಝ್ರತ್ ಆಇಶರ(ರ) ಸುತ್ತುಮುತ್ತಲು ಇದ್ದರು. ಉಮ್ಮುಲ್ ಮೂಮಿನೀನಾದ ಹಝ್ರತ್ ಆಇಶರ ವಿರುದ್ಧ ನಡೆಯುತ್ತಿರುವ ತುಂಟತನವನ್ನು ನೋಡಿಕೊಂಡು ಅವರಿಗೆ ಕೋಪಬಂತು. ಖಡ್ಗಗಳನ್ನು ಹೊರಗೆ ತೆಗೆದುಕೊಂಡು ಮುಂದಿರುವ ಸೈನ್ಯದ ಮೇಲೆ ಆಕ್ರಮಣ ನಡೆಸಿದರು. ಹೀಗೆ ಹಝ್ರತ್ ಆಇಶರ(ರ) ಒಂಟೆ ಯುದ್ಧದ ಕೇಂದ್ರಬಿಂಧುವಾಯಿತು. ಸಹಾಬರು ಮತ್ತು ದೊಡ್ಡ ದೊಡ್ಡ ಶೂರರಾದ ಯೋಧರು ಅದರ ಸುತ್ತ ಒಟ್ಟುಗೂಡಿದರು. ಒಬ್ಬರ ನಂತರ ಇನ್ನೊಬ್ಬರಂತೆ ಕೊಲ್ಲಲ್ಪಟ್ಟರು. ಆದರೆ ಅವರು ಒಂಟೆಯ ಲಗಾಮನ್ನು ಕೈಬಿಡಲಿಲ್ಲ. ಹಝ್ರತ್ ಝುಬೈರ್(ರ) ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಆದರೆ ಹಝ್ರತ್ ಝುಬೇರ್(ರ) ನಮಾಝ್ ನಿರ್ವಹಿಸುತ್ತಿದ್ದಾಗಅವರ ಹಿಂದಿನಿಂದ ಒಬ್ಬ ನತದೃಷ್ಟನು ಬಂದು ಅವರನ್ನು ಶಹೀದ್ ಮಾಡಿದರು. ಹಝ್ರತ್ ತಲ್‌ಹ(ರ) ಯುದ್ಧ ಮೈದಾನದಲ್ಲೇ ಗಲಭೆಗಾರರ ಕೈಯಿಂದ ಶಹೀದ್ ಆದರು. ಯುದ್ಧ ಕೊನೆಗೊಂಡಿರಲಿಲ್ಲ. ಹಝ್ರತ್ ಆಇಶರನ್ನು(ರ) ಅಲ್ಲಿಂದ ನೀಗಿಸುವ ತನಕ ಯುದ್ಧ ಕೊನೆಗೊಳ್ಳಲಿಕ್ಕಿಲ್ಲವೆಂದು ಗೊತ್ತಾದಾಗ, ಕೆಲವು ಜನರು ಹಝ್ರತ್ ಆಇಶರ(ರ) ಒಂಟೆಯ ಕಾಲನ್ನು ಮುರಿದರು ಮತ್ತು ಪಲ್ಲಕ್ಕಿಯನ್ನು ಎತ್ತಿಕೊಂಡು ನೆಲದಲ್ಲಿ ಇರಿಸಿದರು. ಹೀಗೆ ಯುದ್ಧ ಕೊನೆಗೊಂಡಿತ್ತು. ಈ ಘಟನೆಗಳನ್ನೆಲ್ಲ ಕಂಡು ಹಝ್ರತ್ ಅಲಿಯರ(ರ) ಮುಖ ದುಃಖದಿಂದ ಕೆಂಪಾಯಿತು. ಆದರೆ ಇದನ್ನೆಲ್ಲ ತಡೆಯಲು ಸಾಧ್ಯವಿರಲಿಲ್ಲ. ಯುದ್ಧ ಕೊನೆಗೊಂಡಾಗ ಕೊಲ್ಲಲ್ಪಟ್ಟವರ ನಡುವೆ ಹಝ್ರತ್ ತಲ್‌ಹರ(ರ) ಮೃತದೇಹವನ್ನು ಕಂಡಾಗ ಹಝ್ರತ್ ಅಲಿಗೆ(ರ) ತುಂಬ ದುಃಖವಾಯಿತು. ಈ ಯುದ್ಧದಲ್ಲಿ ಸಹಾಬಿಯರಕೈವಾಡ ಖಂಡಿತವಿರಲಿಲ್ಲವೆಂದು ಈ ಎಲ್ಲ ಘಟನೆಗಳಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಬದಲಿಗೆ ಈ ದುಷ್ಕೃತ್ಯವೂ ಹಝ್ರತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಿದ್ದವರದ್ದಾಗಿತ್ತು. ಹಝ್ರತ್ ತಲ್‌ಹ(ರ) ಮತ್ತು ಝುಬೇರ್(ರ) ಹಝ್ರತ್ ಅಲಿಯ(ರ) ಬೈಅತ್ ಮಾಡಿಯೇ ಮೃತಪಟ್ಟಿದ್ದರು. ಏಕೆಂದರೆ, ಅವರು ತಮ್ಮ ಉದ್ದೇಶದಿಂದ ಹಿಂದೆಸರಿದಿದ್ದರು ಮತ್ತು ಹಝ್ರತ್ ಅಲಿಗೆ(ರ) ನೆರವು ನೀಡುವುದಾಗಿ ಸಮ್ಮತಿಸಿದ್ದರು. ಆದರೆ ಕೆಲವು ಕಿಡಿಗೇಡಿಗಳ ಕೈಗಳಿಂದ ಕೊಲ್ಲಲ್ಪಟ್ಟರು. ಹೀಗೆ ಹಝ್ರತ್ ಅಲಿ(ರ) ಅವರಿಬ್ಬರ ಕೊಲೆಗಾರರನ್ನು ಶಪಿಸಿದರು. (ಅನ್ವಾರೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ–3, ಪುಟ–198–201)

ಜಮಲ್ ಯುದ್ಧ ಕೊನೆಗೊಂಡಾಗ ಹಝ್ರತ್ ಅಲಿ(ರ) ಹಝ್ರತ್ ಆಇಶರಿಗಾಗಿ(ರ) ಸವಾರಿಯ ಮತ್ತು ಯಾತ್ರೆಯ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದರು ಮತ್ತು ಹಝ್ರತ್ ಆಇಶರನ್ನು(ರ) ಬಿಟ್ಟುಬರಲು ಸ್ವತಃ ಅವರೇ ಹೋಗಿದ್ದರು. ಹಝ್ರತ್ ಆಇಶರೊಡನೆ(ರ) ಹೋಗಲಿರುವ ಜನರನ್ನು ಸಹ ರವಾನೆ ಮಾಡಿದ್ದರು. ಹಝ್ರತ್ ಆಇಶ(ರ) ರವಾನೆಯಾಗಬೇಕಾದ ದಿನ ಹಝ್ರತ್ ಅಲಿ(ರ) ಹಝ್ರತ್ ಆಇಶರ(ರ) ಬಳಿಗೆ ಹೋದರು, ಅವರ ಪರವಾಗಿ ನಿಂತರು ಮತ್ತು ಎಲ್ಲರೂ ಇರುವಾಗಲೇ ಹಝ್ರತ್ ಆಇಶ(ರ) ಜನರ ಮುಂದೆ ಬಂದು ಹೀಗೆ ಹೇಳಿದರು: ಹೇ ನನ್ನ ಮಕ್ಕಳೇ, ನಾವು ತೊಂದರೆ ಕೊಟ್ಟೆವು ಮತ್ತು ನಮ್ಮ ಅತಿರೇಕದ ವರ್ತನೆಗಳಿಂದ ಪರಸ್ಪರ ಬೇಸರಗೊಂಡೆವು.

ಇನ್ನು ಮುಂದೆ ನಮ್ಮ ಈ ಭಿನ್ನಾಭಿಪ್ರಾಯಗಳ ಕಾರಣದಿಂದಯಾವನೇ ವ್ಯಕ್ತಿ ಕೂಡ ಅನ್ಯೋನ್ಯ ಅತಿಕ್ರಮ ಮಾಡದಿರಲಿ. ಅಲ್ಲಾಹನಾಣೆ, ನನ್ನ ಮತ್ತು ಹಝ್ರತ್ ಅಲಿಯ(ರ) ನಡುವೆ ಆರಂಭದಿಂದಲೇ ಸಣ್ಣಪುಟ್ಟಗಾರ್ಹಿಕ ಕಾರ್ಯಗಳಿಗೆ ಹೊರತು ಯಾವುದೇ ಭಿನ್ನಾಭಿಪ್ರಾಯ ವಿದ್ದಿರಲಿಲ್ಲ. ಹಝ್ರತ್ ಅಲಿ(ರ) ನನ್ನ ಸತ್ಕರ್ಮಗಳ ಗಳಿಕೆಯ ಮಾರ್ಗವಾಗಿದ್ದಾರೆ. ಹಝ್ರತ್ ಅಲಿ(ರ) ಹೇಳಿದರು: ಹೇ ಜನರೇ, ಹಝ್ರತ್ ಆಇಶ(ರ) ಉತ್ತಮವಾದ ಮತ್ತು ಸತ್ಯವಾದ ಮಾತನ್ನಾಡಿದ್ದಾರೆ. ನನ್ನ ಮತ್ತು ಹಝ್ರತ್ ಆಇಶರ(ರ) ನಡುವೆ ಕೇವಲ ಈ ಭಿನ್ನಾಭಿಪ್ರಾಯ ಮಾತ್ರವಿತ್ತು. ಹಝ್ರತ್ ಆಇಶ(ರ) ಇಹಪರಲೋಕದಲ್ಲಿ ಹಝ್ರತ್ ಪೈಗಂಬರರ(ಸ) ಪರಿಶುದ್ಧ ಪತ್ನಿಯಾಗಿರುವರು. ಅನಂತರ ಹಝ್ರತ್ ಅಲಿ(ರ) ಹಝ್ರತ್ಆಇಶರ(ರ) ಜೊತೆಗೆ ಹಲವಾರು ಮೈಲುಗಳ ತನಕ ಹೋದರು. ಹಝ್ರತ್ಆಇಶರ(ರ) ಜೊತೆಗೆ ಹೋಗಿ ಒಂದು ದಿನದ ನಂತರ ಮರಳಿಬರಲು ಹಝ್ರತ್ ಅಲಿ(ರ) ತನ್ನ ಮಕ್ಕಳೊಡನೆ ಆದೇಶಿಸಿದರು. ನಾನೀಗ ಓದಿದ್ದು ತಬರಿಯ ಉಲ್ಲೇಖವಾಗಿದೆ.
(ತಾರೀಖ್ ಅತ್ತಿಬರಿ, ಸಂಪುಟ–3, ಪುಟ–60–61, ದಾರುಲ್ ಕುತುಬ್ ಇಲ್ಮಿಯ ಬೈರೂತ್, 1987)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ತಲ್ಹ(ರ) ಹಝ್ರತ್ ಪೈಗಂಬರರ(ಸ) ನಿಧನದ ನಂತರವೂ ಜೀವಂತವಾಗಿದ್ದರು. ಹಝ್ರತ್ ಉಸ್ಮಾನ್‌ರ(ರ) ಶಹಾದತಿನ ನಂತರ ಮುಸ್ಲಿಮರ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ, ಹಝ್ರತ್ ಉಸ್ಮಾನ್‌ರನ್ನು(ರ) ಕೊಂದವರಿಂದ ಪ್ರತಿಕಾರ ಪಡೆಯಬೇಕೆಂದು ಒಂದು ಪಕ್ಷದವರು ಹೇಳುತ್ತಿದ್ದರು. ಆ ಪಕ್ಷದ ಲೀಡರ್ ಹಝ್ರತ್ ತಲ್ಹ(ರ), ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಆಇಶ(ರ) ಆಗಿದ್ದರು. ಆದರೆ ಇನ್ನೊಂದು ಪಕ್ಷ ಹೀಗೆ ಹೇಳುತ್ತಿತ್ತು: ಮುಸ್ಲಿಮರ ನಡುವೆ ಬಿರುಕು ಉಂಟಾಗಿದೆ. ವ್ಯಕ್ತಿಗಳಂತು ಸಾಯುತ್ತಾ ಇರುತ್ತಾರೆ. ಇಸ್ಲಾಮಿನ ಪ್ರತಾಪ ಮತ್ತು ಅದರ ಶ್ರೇಷ್ಠತೆ ನೆಲೆನಿಲ್ಲುವಂತಾಗಲು ಮೊತ್ತಮೊದಲಿಗೆ ಎಲ್ಲ ಮುಸ್ಲಿಮರನ್ನು ಒಟ್ಟುಗೂಡಿಸಬೇಕು. ಇವರಿಂದ ಪ್ರತಿಕಾರ ನಂತರ ಪಡೆಯೋಣ. ಹೀಗೆ ಹೇಳುವವರ ಲೀಡರ್ ಹಝ್ರತ್ ಅಲಿ(ರ) ಆಗಿದ್ದರು. ಈ ಭಿನ್ನತೆ ಎಷ್ಟು ತೀವ್ರಗೊಂಡಿತ್ತೇನೆಂದರೆ, ಹಝ್ರತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಿದವರಿಗೆ ಹಝ್ರತ್ ಅಲಿ(ರ) ಅಭಯ ನೀಡಲು ಬಯಸುತ್ತಾರೆಂದು ಹಝ್ರತ್ ತಲ್ಹ(ರ), ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಆಯಿಶ(ರ) ಆರೋಪಿಸಿದರು. ಹಝ್ರತ್ ಅಲಿ(ರ) ಅವರ ಮೇಲೆ ಹೀಗೆ ಆರೋಪಿಸಿದರು: ಬೇಗನೇ ಪ್ರತಿಕಾರ ತೀರಿಸಬೇಕೆಂದು ಹೇಳುವ ಈ ಜನರು ತಮ್ಮ ವೈಯಕ್ತಿಕ ಉದ್ದೇಶಗಳಿಗೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಿದ್ದಾರೆ. ಇಸ್ಲಾಮಿನ ಏಳಿಗೆಯನ್ನು ಇವರು ದೃಷ್ಟಿಯಲ್ಲಿರಿಸುವುದಿಲ್ಲ. ಹೀಗೆ ಈ ಭಿನ್ನತೆ ತೀವ್ರವಾಗಿ ಪರಸ್ಪರ ಯುದ್ಧ ಸಹ ಶುರುವಾಯಿತು. ಅದರ ನೇತೃತ್ವವನ್ನು ಹಝ್ರತ್ ಆಇಶ(ರ) ವಹಿಸಿಕೊಂಡರು. ಅವರು ಒಂಟೆಯ ಮೇಲೆ ಸವಾರಿ ಮಾಡಿಕೊಂಡು ಯುದ್ಧ ಮಾಡಿಸುತ್ತಿದ್ದರು. ಹಝ್ರತ್ ತಲ್ಹ(ರ) ಮತ್ತು ಹಝ್ರತ್ ಝುಬೇರ್(ರ) ಸಹ ಈ ಹೋರಾಟದಲ್ಲಿ ಭಾಗಿಯಾಗಿದ್ದರು. ಉಭಯ ಪಕ್ಷಗಳ ನಡುವೆ ಯುದ್ಧ ಜಾರಿಯಲ್ಲಿದ್ದಾಗ ಒಬ್ಬ ಸಹಾಬಿ ಹಝ್ರತ್ ತಲ್ಹರ ಬಳಿಗೆ ಬಂದು ಹೀಗೆ ಹೇಳಿದರು: ಇಂತಿಂತಹ ಸಂದರ್ಭದಲ್ಲಿ ನಾನು ಮತ್ತು ನೀವು ಹಝ್ರತ್ ಪೈಗಂಬರರ(ಸ) ಸಭೆಯಲ್ಲಿ ಕುಳಿತುಕೊಂಡದ್ದು ನಿಮಗೆ ನೆನಪಿದೆಯೇ? ಆಗ ಹಝ್ರತ್ ಪೈಗಂಬರ್(ಸ) ಹೇಳಿದ್ದರು: ಹೇ ತಲ್ಹ, ಒಂದು ಸಮಯ ಬರುವುದು. ಆಗ ನೀನು ಒಂದು ಸೈನ್ಯದಲ್ಲಿ ಮತ್ತು ಅಲಿ ಮತ್ತೊಂದು ಸೈನ್ಯದಲ್ಲಿ ಇರುವರು. ಅದರಲ್ಲಿ ಅಲಿ ಸತ್ಯದ ಮಾರ್ಗದಲ್ಲಿಯೂ ನೀನು ತಪ್ಪಾದ ಹಾದಿಯಲ್ಲಿಯೂ ಆಗಿರುವುದು. ಇದನ್ನು ಕೇಳಿದಾಗ ಹಝ್ರತ್ ತಲ್ಹರ(ರ) ಕಣ್ತೆರೆಯಿತು. ಅವರು ಹೇಳಿದರು: ಹೌದು, ನನಗೆ ಈಗ ನೆನಪಾಯಿತು. ಅನಂತರ ಅವರು ಅದೇ ಕ್ಷಣದಲ್ಲಿ ಸೈನ್ಯದಿಂದ ಹೊರಟು ಯುದ್ಧದಿಂದ ದೂರಸರಿದರು. ಆಗ ಹಝ್ರತ್ ಅಲಿಯ(ರ) ಸಿಪಾಯಿ ಆಗಿದ್ದ ಒಬ್ಬ ನತದೃಷ್ಟ ವ್ಯಕ್ತಿ ಹಿಂದಿನಿಂದ ಬಂದು ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಶಹೀದ್ ಮಾಡಿದರು. ಹಿರಿದಾದ ಇನಾಮು ಲಭಿಸುವುದು ಎಂಬ ಪ್ರತೀಕ್ಷೆಯಿಂದ ಆ ಕೊಲೆಗಾರನಾದ ವ್ಯಕ್ತಿ ಓಡುತ್ತಾ ಹಝ್ರತ್ ಅಲಿ(ರ) ಇದ್ದ ಸ್ಥಳಕ್ಕೆ ಬಂದು ಹೇಳಿದನು: ಹೇ ಅಮೀರಲ್ ಮೂಮಿನೀನ್, ನಿಮ್ಮ ಶತ್ರು ಕೊಲ್ಲಲ್ಪಟ್ಟ ಬಗ್ಗೆ ನಿಮಗೆ ನಾನು ಸುವಾರ್ತೆ ನೀಡುತ್ತೇನೆ. ಯಾವ ಶತ್ರು ಎಂದು ಹಝ್ರತ್ ಅಲಿ(ರ) ಕೇಳಿದರು. ಅವನು ಹೇಳಿದನು: ಯಾ ಅಮೀರಲ್‌ಮೂಮಿನೀನ್ ನಾನು ತಲ್ಹರನ್ನು ಕೊಂದಿದ್ದೇನೆ. ಹಝ್ರತ್ ಅಲಿ(ರ) ಹೇಳಿದರು: ನೀನು ನರಕದಲ್ಲಿ ಹಾಕಲ್ಪಡುವೆ ಎಂಬ ಹಝ್ರತ್ ಪೈಗಂಬರರ(ಸ) ಸುವಾರ್ತೆಯನ್ನು ಸಹ ನಾನು ನಿನಗೆ ನೀಡುತ್ತೇನೆ. ಏಕೆಂದರೆ, ಹಝ್ರತ್ ಪೈಗಂಬರ್(ಸ) ಒಂದು ಸಲ, ನಾನು ಮತ್ತು ಹಝ್ರತ್ ತಲ್ಹ ಇದ್ದ ಸಭೆಯಲ್ಲಿ ಹೀಗೆ ಹೇಳಿದರು: ಹೇ ತಲ್ಹ, ಒಂದು ಬಾರಿ ನೀನು ಸತ್ಯ ಮತ್ತು ನ್ಯಾಯಕ್ಕಾಗಿ ನಿಂದನೆಯನ್ನು ಸಹಿಸುವೆ ಮತ್ತು ನಿನ್ನನ್ನು ಒಬ್ಬ ವ್ಯಕ್ತಿ ಕೊಲ್ಲುವನು. ಹೀಗೆ ಅಲ್ಲಾಹನು ಆ ವ್ಯಕ್ತಿಯನ್ನು ನರಕದಲ್ಲಿ ಹಾಕುವನು.
(ಅನ್ವಾರುಲ್ ಉಲೂಮ್, ಸಂಪುಟ–21, ಪುಟ–149–150)

ಸಿಫ್ಫೀನ್ ಯುದ್ಧ ಹಝ್ರತ್ ಅಲಿ(ರ) ಮತ್ತು ಅಮೀರ್ ಮುಆವಿಯಾರ(ರ) ನಡುವೆ ಹಿಜರೀ 37ರಲ್ಲಿ ನಡೆದಿತ್ತು ಎಂದು ಬರೆಯಲಾಗಿದೆ. ಸಿಫ್ಫೀನ್ ಎಂಬುದು ಸೀರಿಯ ಮತ್ತು ಇರಾಕಿನ ನಡುವೆ ಇರುವ ಪ್ರದೇಶವಾಗಿದೆ. ಹಝ್ರತ್ ಅಲಿ(ರ) ಕೂಫದಿಂದ ಸೈನ್ಯದೊಂದಿಗೆ ಹೊರಟು ಸಿಫ್ಫೀನ್ ತಲುಪಿದಾಗ, ಸಿರಿಯದ ಸೈನ್ಯಅಮೀರ್ ಮುಆವಿಯರ ನೇತೃತ್ವದಲ್ಲಿ ಮೊದಲೇಡೇರೆ ಹಾಕಿರುವುದನ್ನು ಕಂಡರು. ಅವರ ಒಂದು ಸಂಘ ಫರಾತ್ ನದಿಯ ದಡವನ್ನು ವಶಪಡಿಸಿಕೊಂಡಿದ್ದರು. 'ನಾವು ಯುದ್ಧ ಮಾಡಲು ಬಂದಿಲ್ಲ, ಬದಲಿಗೆ ಅಮೀರ್ ಮುಆವಿಯರೊಂದಿಗೆ ರಾಜಿ ಮಾಡಿಕೊಳ್ಳಲು ಬಂದಿದ್ದೇವೆ' ಎಂದು ಹಝ್ರತ್ ಅಲಿ(ರ) ಅವರಿಗೆ ಭರವಸೆ ಕೊಟ್ಟರು. ಆದಾಗ್ಯೂ ಅಮೀರ್ ಮುಆವಿಯ ರಾಜಿಮಾಡಿಕೊಳ್ಳಲು ಒಪ್ಪಲಿಲ್ಲ. ಶಾಮಿ ಸೈನ್ಯ ಹಝ್ರತ್ ಅಲಿಯ ಸೈನ್ಯವನ್ನು ಫರಾತ್ ನದಿಯಿಂದ ನೀರು ತೆಗೆಯುವುದರಿಂದ ತಡೆದರು. ಆಗ ಆಕ್ರಮಣ ನಡೆಸಲು ಹಝ್ರತ್ ಅಲಿ(ರ) ತನ್ನ ಸೈನ್ಯಕ್ಕೆ ಆದೇಶ ನೀಡಿತು. ಹೀಗೆ ಹಝ್ರತ್ ಅಲಿಯ ಸೈನ್ಯಕ್ಕೆ ಶಾಮಿನ ಸೈನ್ಯವನ್ನು ಸೋಲಿಸಿ ನದಿಯ ತನಕ ತಲುಪಲು ಸಾಧ್ಯವಾಯಿತು. ಫರಾತ್ ನದಿಯಿಂದ ನೀರು ತೆಗೆದುಕೊಂಡು ಹೋಗಲು ಶಾಮಿಯರಿಗೆ ಹಝ್ರತ್ ಅಲಿ(ರ) ಮುಕ್ತವಾದ ಅನುಮತಿ ಸಹ ನೀಡಿದರು. ಶಾಮಿಯರು ನೀರು ತೆಗೆಯುವುದರಿಂದ ತಡೆದಿದ್ದರು. ಆದರೆ ಹಝ್ರತ್ ಅಲಿ(ರ) ಅದನ್ನು ವಶಪಡಿಸಿಕೊಂಡಾಗ, ಶಾಮಿಯರನ್ನು ನೀರು ಪಡೆಯುವುದರಿಂದ ತಡೆಯಲಿಲ್ಲ. ಅನುಮತಿ ಕೊಟ್ಟರು. ಹಝ್ರತ್ ಉಸ್ಮಾನ್‌ರ(ರ) ಕೊಲೆಗಾರರನ್ನು ತನಗೆ ಒಪ್ಪಿಸಬೇಕೆಂದು ಅಮೀರ್ ಮುಆವಿಯಾ ಒತ್ತಾಯ ಪಡಿಸುತ್ತಿದ್ದರು. ಯುದ್ಧ ಪ್ರಾರಂಭವಾಗುವ ಸಾಧ್ಯತೆ ಕಂಡುಬಂದಾಗ ಉಭಯ ಪಕ್ಷಗಳ ಮೈತ್ರಿ ಪ್ರಿಯರು ಅದನ್ನು ತಡೆಯಲು ಪ್ರಯತ್ನಿಸಿದರು. ಯುದ್ಧದ ಆರಂಭ ಹಿಜರೀ 37ರಲ್ಲಿ ಆಯಿತು. ಯುದ್ಧಕ್ಕೆ ಮುಂಚಿತವಾಗಿ ಸಂಗರ್ಷಗಳು ಆಗುತ್ತಿದ್ದುವು. ಆದರೆ ಉಭಯ ಪಕ್ಷಗಳು ಈ ಯುದ್ಧದಿಂದ ಆಗಬಹುದಾದ ನಾಶಕಾರಿಯಾದ ಪರಿಣಾಮದಿಂದ ಹೆದರಿಕೊಂಡು ಯುದ್ಧ ಮಾಡುವುದರಿಂದ ಹಿಂದೆ ಸರಿಯುತ್ತಿದ್ದರು. ರಾಜಿಗೆ ಎಡೆ ಮಾಡಿಕೊಡುವ ಉದ್ದೇಶದಿಂದ, ನಿಷಿದ್ಧ ಮಾಡಲ್ಪಟ್ಟ ತಿಂಗಳಲ್ಲಿ ತಾತ್ಕಾಲಿಕ ಸಂಧಾನ ಮಾಡಿಕೊಳ್ಳಲು ಉಭಯ ಪಕ್ಷಗಳು ಒಪ್ಪಿಕೊಂಡವು. ಆದರೆ ಈ ಯೋಜನೆ ಫಲಕಾರಿಯಾಗಲಿಲ್ಲ. ಹೀಗೆ ಸಫರ್ ತಿಂಗಳ ಆರಂಭದಲ್ಲಿ ಪುನಃ ಯುದ್ಧದ ಘೋಷಣೆ ಮಾಡಲಾಯಿತು. ಯುದ್ಧವು ಕೆಲವು ಕಾಲ ಯಾವುದೇ ತೀರ್ಪು ಕಾಣದೇ ನಡೆಯುತ್ತಿರುವುದನ್ನು ನೋಡಿಕೊಂಡು ಹಝ್ರತ್ ಮುಆವಿಯಾರ ಧೈರ್ಯಗುಂದಿತು. ಈ ಭಯಾನಕ ಸ್ಥಿತಿಯಲ್ಲಿ ಪವಿತ್ರ ಖುರ್ಆನಿನ ಪ್ರತಿಯನ್ನು ಈಟಿಯ ತುದಿಯಲ್ಲಿಕಟ್ಟಿ ಎತ್ತಿ ತೋರಿಸಿಕೊಂಡು, ಈ ಗ್ರಂಥದ ಪ್ರಕಾರ ತೀರ್ಮಾನ ಮಾಡಲು ಹೇಳಬೇಕೆಂದು ಹಝ್ರತ್ ಅಮ್ರ್ ಬಿನ್ ಆಸ್(ರ) ಸಲಹೆ ನೀಡಿದರು. ಹಾಗೆಯೇ ಮಾಡಲಾಯಿತು. ಇದರಿಂದ ಹಝ್ರತ್ ಅಲಿಯ(ರ) ಜನರಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಈ ರೀತಿಯಲ್ಲಿ ತೀರ್ಮಾನ ಮಾಡಿಸಲು ಹೇಳುತ್ತಿರುವ ಬೇಡಿಕೆಯನ್ನು ರದ್ದು ಮಾಡಲು ಸಾಧ್ಯವಲ್ಲ ಎಂದು ಅವರು ಹೇಳಿದರು. ಹೀಗೆ ಹಝ್ರತ್ ಅಲಿ(ರ) ಮುಂದಿರುವ ಸೈನ್ಯದ ಸಂಘವನ್ನು ಮರಳಿ ಕರೆದರು ಮತ್ತು ಯುದ್ಧವನ್ನು ನಿಲ್ಲಿಸಲಾಯಿತು. ಹಝ್ರತ್ ಅಲಿಯ(ರ) ಸೈನ್ಯದ ಹೆಚ್ಚಿನವರು ಅಮೀರ್ ಮುಆವಿಯರ ಈ ಅಭಿಪ್ರಾಯವನ್ನು ಒಪ್ಪಿಕೊಂಡರು. ಉಭಯ ಪಕ್ಷಗಳು ಮಧ್ಯಸ್ಥರನ್ನು ಆಯ್ಕೆ ಮಾಡಿಕೊಂಡು ಆ ಇಬ್ಬರು ಮಧ್ಯಸ್ಥರು ಸೇರಿಕೊಂಡು ಪವಿತ್ರ ಖುರ್ಆನಿನ ನಿರ್ದೇಶನ ಪ್ರಕಾರ ಯಾವುದಾದರೂ ತೀರ್ಮಾನಕ್ಕೆ ಬರಬೇಕೆಂದು ಹೇಳಿದರು. ಚರಿತ್ರೆಯ ಪುಸ್ತಕಗಳಲ್ಲಿ ಈ ಘಟನೆಯನ್ನು ತಹ್‌ಕೀಂ ಎಂದು ಕರೆಯಲಾಗಿದೆ. ಅಂತೂ ಶಾಮಿಯರು ಹಝ್ರತ್ ಅಮ್ರ್ ಬಿನ್ ಆಸ್‌ರನ್ನು(ರ) ಆಯ್ಕೆ ಮಾಡಿದರು ಮತ್ತು ಹಝ್ರತ್ ಅಲಿ(ರ) ಹಝ್ರತ್ ಅಬೂ ಮೂಸಾ ಅಶ್‌ಅರೀರನ್ನು(ರ) ನೇಮಕ ಮಾಡಿದರು. ಕರಾರು ಪತ್ರದಲ್ಲಿ ಹಸ್ತಾಕ್ಷರ ಮಾಡಿದ ನಂತರ ಸೈನ್ಯಗಳು ಹೊರಟು ಹೋಯಿತು. ಇದು ಇಬ್ನು ಅಸೀರಿನ ಚರಿತ್ರೆಯ ಉಲ್ಲೇಖವಾಗಿದೆ.
(ಅಲ್‌ಕಾಮಿಲ್ ಫಿತ್ತಾರೀಖ್, ಇಬ್ನುಲ್ ಅಸೀರ್, ಸಂಪುಟ–3, ಪುಟ–161–201, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 2003) (ಲುಗಾತುಲ್ ಹದೀಸ್, ಸಂಪುಟ–2, ಪುಟ–608)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ಹೀಗೆ ಬರೆದಿದ್ದಾರೆ:

"ಈ ಯುದ್ಧದಲ್ಲಿ ಮುಆವಿಯಾರ ಸಂಗಡಿಗರು ಜಾಣತನ ತೋರಿಸಿದರು. ಅವರು ಈಟಿಯ ತುದಿಗೆ ಪವಿತ್ರ ಖುರ್ಆನಿನ ಪ್ರತಿಯನ್ನು ಕಟ್ಟಿ ಹೀಗೆ ಹೇಳಿದರು: ಪವಿತ್ರ ಖುರ್ಆನ್ ತೀರ್ಪು ನೀಡುವ ಸಂಗತಿಯನ್ನು

ನಾವು ಅಂಗೀಕರಿಸುವೆವು. ಈ ಉದ್ದೇಶಕ್ಕಾಗಿ ಮಧ್ಯಸ್ಥರನ್ನು ನಿಶ್ಚಯಿಸಬೇಕು. ಆಗ ಹಝ್ರತ್ ಉಸ್ಮಾನ್‌ರ ಕೊಲೆಯ ಸಂಚಿನಲ್ಲಿ ಭಾಗಿಯಾಗಿದ್ದ ಮತ್ತು ಕೊಲೆಯ ನಂತರ ರಕ್ಷಣೆ ಹೊಂದಲು ಬೇಗನೇ ಹಝ್ರತ್ ಅಲಿರೊಂದಿಗೆ(ರ) ಸೇರಿಕೊಂಡಿದ್ದ ವ್ಯಕ್ತಿಗಳು ಒತ್ತಾಯಪೂರ್ವಕವಾಗಿ ಹಝ್ರತ್ ಅಲಿಯೊಡನೆ(ರ) ಹೇಳಿದರು: ಅವರು ಸರಿಯಾಗಿ ಹೇಳುತ್ತಿದ್ದಾರೆ. ನೀವು ತೀರ್ಮಾನಕ್ಕಾಗಿ ಮಧ್ಯಸ್ಥರನ್ನು ನಿಶ್ಚಯಿಸಬೇಕು. ಹಝ್ರತ್ ಅಲಿ ಬಹಳವಾಗಿ ಹೀಗೆ ಮಾಡುವುದನ್ನು ನಿರಾಕರಿಸಿದರು. ಆದರೆ ಈ ಕಪಟವಿಶ್ವಾಸಿಗಳು ಮತ್ತು ಇವರಿಂದ ಪ್ರಭಾವಿತರಾದ ದುರ್ಬಲ ಜನರು ಮಧ್ಯಸ್ಥರನ್ನು ನಿಶ್ಚಯಿಸಲು ಹಝ್ರತ್ ಅಲಿಯನ್ನು(ರ) ಒತ್ತಾಯಪಡಿಸಿದರು. ಹೀಗೆ ಮುಆವಿಯರ ಕಡೆಯಿಂದ ಹಝ್ರತ್ ಅಮ್ರ್ ಬಿನ್ ಆಸ್ ಮತ್ತು ಹಝ್ರತ್ ಅಲಿಯ(ರ) ಕಡೆಯಿಂದ ಹಝ್ರತ್ ಅಬೂಮೂಸಾ ಅಶ್‌ಅರಿ ಮಧ್ಯಸ್ಥರಾಗಿ ನಿಶ್ಚಯಿಸಲ್ಪಟ್ಟರು. ಈ ತಹ್‌ಕೀಂ ಸತ್ಯದಲ್ಲಿ ಹಝ್ರತ್ ಉಸ್ಮಾನ್‌ರ(ರ) ಶಹಾದತಿನ ಘಟನೆಗೆ ಸಂಬಂಧಿಸಿ ಆಗಿತ್ತು. ಪವಿತ್ರ ಖುರ್‌ಆನಿನ ಪ್ರಕಾರ ಇದರ ಬಗ್ಗೆ ತೀರ್ಮಾನಆಗುವುದುಎಂದು ನಿಬಂಧನೆ ಮಾಡಲಾಗಿತ್ತು. ಎಂದರೆ ಹಝ್ರತ್ ಉಸ್ಮಾನ್‌ರ ಕೊಲೆಯ ಬಗ್ಗೆ ತೀರ್ಮಾನ ಮಾಡಲಾಗುವುದು ಮತ್ತು ಅವರನ್ನು ಹಿಡಿಯಲು ಅಥವಾ ಶಿಕ್ಷಿಸಲು ತೀರ್ಮಾನ ಮಾಡಲಿಕ್ಕಾಗಿ ಈ ತಹ್ಕೀಂ ಮಾಡಲಾಗಿತ್ತು. ಕೊಲೆಗಾರರು ಯಾರೇ ಆದರೂ ಅವರನ್ನು ಪವಿತ್ರ ಖುರ್‌ಆನಿನ ನಿಯಮ ಪ್ರಕಾರ ಶಿಕ್ಷಿಸಲಿಕ್ಕಾಗಿ ಮಾಡಲಾಗಿತ್ತು. ಆದರೆ ಹಝ್ರತ್ ಅಲಿ(ರ) ಮತ್ತು ಹಝ್ರತ್ ಮುಆವಿಯರನ್ನು ಅವರ ನೇತೃತ್ವದಿಂದ ವಜಾ ಮಾಡುವುದೇ ಉತ್ತಮವೆಂದು ಅಮ್ರ್ ಬಿನ್ ಆಸ್ ಮತ್ತು ಅಬೂ ಮೂಸಾ ಅಶ್‌ಅರಿ ಇಬ್ಬರೂ ಸಮಾಲೋಚಿಸಿ ತೀರ್ಮಾನಿಸಿದರು. ಹಝ್ರತ್ ಉಸ್ಮಾನ್‌ರ ಕೊಲೆಯ ಬಗ್ಗೆ ತೀರ್ಮಾನ ಮಾಡಲು ನಿಶ್ಚಯಿಸಲಾದ ಮಧ್ಯಸ್ಥರು ಆ ಕಾರ್ಯದ ಬಗ್ಗೆ ತೀರ್ಮಾನ ಮಾಡುವುದರ ಬದಲಿಗೆ ಇಬ್ಬರನ್ನು ಪದಚ್ಯುತಿಗೊಳಿಸಿದ ನಂತರ ಇದರ ಬಗ್ಗೆ ತೀರ್ಪು ನೀಡಲಾಗುವುದು ಎಂದು ತೀರ್ಮಾನಿಸಿದರು. ಏಕೆಂದರೆ ಇವರಿಬ್ಬರಿಂದಲೇ ಮುಸ್ಲಿಮರು ವಿಪತ್ತಿಗೆ ಸಿಲುಕಿದ್ದಾರೆಂದು ಅವರ ಭಾವಿಸಿದ್ದರು. ಅನಂತರ ಸ್ವತಂತ್ರವಾಗಿ ಮುಸ್ಲಿಮರಿಗೆ ತೀರ್ಮಾನ ಮಾಡುವ ಅಧಿಕಾರಕೊಟ್ಟು ಅವರು ಇಷ್ಟವಿದ್ದವರನ್ನು ಖಲೀಫ ಮಾಡಲಿ ಎಂದು ಹೇಳಿದರು. ಆದರೆ ಈ ಮಧ್ಯಸ್ಥರನ್ನು ಈ ಕೆಲಸಕ್ಕಾಗಿ ನಿಶ್ಚಯಿಸಲಾಗಿರಲಿಲ್ಲ. ಈ ಮಧ್ಯಸ್ಥರು ಯೋಚಿಸಲು ತೊಡಗಿದ ಈ ಸಂಗತಿಯೇ ತಪ್ಪಾಗಿತ್ತು. ಅಂತೂ ಇವರಿಬ್ಬರೂ ಈ ತೀರ್ಮಾನವನ್ನು ಘೋಷಿಸಲು ಒಂದು ಸಭೆಯ ಏರ್ಪಾಡು ಮಾಡಿದರು. ಹಝ್ರತ್ ಅಬೂಮೂಸಾ ಅಶ್‌ಅರಿಯೊಡನೆ ಹಝ್ರತ್ ಅಮ್ರ್ ಬಿನ್ ಆಸ್ ಹೀಗೆ ಹೇಳಿದರು. ಮೊದಲು ನಿಮ್ಮ ತೀರ್ಮಾನವನ್ನು ಘೋಷಿಸಿರಿ. ಅನಂತರ ನಾನು ಘೋಷಿಸುವೆನು. ಹಝ್ರತ್ ಅಲಿಯನ್ನು(ರ) ಖಿಲಾಫತಿನಿಂದ ಪದಚ್ಯುತಿಗೊಳಿಸುವುದಾಗಿ ಹಝ್ರತ್ ಅಬೂಮೂಸಾ ಅಶ್‌ಅರಿ(ರ) ಘೋಷಿಸಿದರು. ಅನಂತರ ಹಝ್ರತ್ ಅಮ್ರ್ ಬಿನ್ ಆಸ್ ನಿಂತರು ಮತ್ತು ಹೀಗೆ ಹೇಳಿದರು: ಹಝ್ರತ್ ಅಲಿಯನ್ನು ಅಬೂಮೂಸಾ ಪದಚ್ಯುತಿಗೊಳಿಸಿರುವರು. ನಾನು ಸಹ ಅವರ ಈ ತೀರ್ಮಾನವನ್ನು ಒಪ್ಪಿಕೊಳ್ಳುತೇನೆ ಮತ್ತು ಹಝ್ರತ್ ಅಲಿಯನ್ನು(ರ) ಖಿಲಾಫತಿನಿಂದ ವಜಾಗೊಳಿಸುತ್ತೇನೆ. ಆದರೆ ಮುಆವಿಯರನ್ನು ನಾನು ವಜಾಗೊಳಿಸುವುದಿಲ್ಲ. ಬದಲಿಗೆ ಅಧಿಕಾರದಲ್ಲೇ ನೆಲೆನಿಲ್ಲಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಮ್ರ್ ಬಿನ್ ಆಸ್ ಸ್ವತಃ ಸಾತ್ವಿಕರಾದ ವ್ಯಕ್ತಿಯಾಗಿದ್ದರು. ಆದರೆ ಆ ಸಂದರ್ಭದಲ್ಲಿ ಅವರು ಹೀಗೆ ಏಕೆ ವರ್ತಿಸಿದರು ಎಂಬುದರ ಬಗ್ಗೆ ನಾನೀಗ ಚರ್ಚಿಸುವುದಿಲ್ಲ. ಅದೊಂದು ಬೇರೆ ವಿಷಯವಾಗಿದೆ. ಹೇಗಿದ್ದರೂ ಅವರು ಒಳ್ಳೆಯವರಾಗಿದ್ದರೂ ಹೇಗೋ ಜನರ ಮಾತುಗಳಿಂದ ಪ್ರಭಾವಿತರಾದರು. ಹೇಗಿದ್ದರೂ ಅವರ ಈ ತೀರ್ಮಾನ ತಪ್ಪಾಗಿತ್ತು. ಹೀಗೆ ತೀರ್ಮಾನವಾದಾಗ, ಹಝ್ರತ್ ಮುಆವಿಯಾರ ಸಂಗಡಿಗರು ಹೀಗೆ ಗುಲ್ಲೆಬ್ಬಿಸಲು ಶುರುಮಾಡಿದರು: ಮಧ್ಯಸ್ಥರು ಹಝ್ರತ್ ಅಲಿಯ(ರ) ಬದಲಿಗೆ ಹಝ್ರತ್ ಮುಆವಿಯರ ಪರವಾಗಿ ತೀರ್ಮಾನ ಮಾಡಿದ್ದಾರೆ. ಇದು ಸರಿಯಾದ ತೀರ್ಮಾನವಾಗಿದೆ. ಆದರೆ ಹಝ್ರತ್ ಅಲಿ(ರ) ಈ ತೀರ್ಮಾನವನ್ನು ಒಪ್ಪಲಿಲ್ಲ ಮತ್ತು ಹೀಗೆ ಹೇಳಿದರು: ಮಧ್ಯಸ್ಥರನ್ನು ಈ ಉದ್ದೇಶಕ್ಕಾಗಿ ನಿಶ್ಚಯಿಸಲಾಗಿರಲಿಲ್ಲ. ಮಾತ್ರವಲ್ಲ ಅವರ ತೀರ್ಪು ಪವಿತ್ರ ಖುರ್‌ಆನಿನ ಆಜ್ಞೆ ಪ್ರಕಾರವೂ ಆಗಿರಲಿಲ್ಲ. ನಾನು ಅದನ್ನು ಯಾವುದೇ ಸ್ಥಿತಿಯಲ್ಲೂ ಅಂಗೀಕರಿಸುವುದಿಲ್ಲ. ಆಗ ಹಝ್ರತ್ ಅಲಿಯೊಡನೆ(ರ) ಮಧ್ಯಸ್ಥರನ್ನು ನಿಶ್ಚಯಿಸಲು ಒತ್ತಾಯ ಪಡಿಸಿದ್ದ ಕಪಟ ವಿಶ್ವಾಸಿಯಾದ ಸಂಗಡಿಗನು ಹೀಗೆ ಹೇಳಲು ಶುರುಮಾಡಿದನು: ತೀರ್ಮಾನವನ್ನು ಒಪ್ಪುವುದಿಲ್ಲವಾದರೆ ಮಧ್ಯಸ್ಥರನ್ನು ಏಕೆ ನಿಶ್ಚಯಿಸಲಾಯಿತು. ಧಾರ್ಮಿಕ ವಿಷಯದಲ್ಲಿ ಮಧ್ಯಸ್ಥರನ್ನು ನಿಶ್ಚಯಿಸುವುದು ಸರಿಯೂ ಅಲ್ಲ. ಇದಕ್ಕೆ ಉತ್ತರ ಕೊಡುತ್ತಾ ಹಝ್ರತ್ ಅಲಿ(ರ) ಹೇಳಿದರು: ಮೊದಲ ಸಂಗತಿಯೇನೆಂದರೆ, ತೀರ್ಮಾನ ಪವಿತ್ರ ಖುರ್‌ಆನ್ ಪ್ರಕಾರವಾಗಿರುವುದು ಎಂದು ಒಪ್ಪಂದದಲ್ಲಿ ಇತ್ತು. ಆದರೆ ಅದರ ಪ್ರಕಾರ ಅವರು ನಡೆಯಲಿಲ್ಲ. ಪವಿತ್ರ ಖುರ್‌ಆನ್ ಪ್ರಕಾರ ತೀರ್ಮಾನ ಮಾಡಲಾಗಿಲ್ಲ. ಎರಡನೇ ಸಂಗತಿಯೇನೆಂದರೆ, ಮಧ್ಯಸ್ಥರನ್ನು ನಿನ್ನ ಒತ್ತಾಯದ ಕಾರಣದಿಂದ ನಿಶ್ಚಯಿಸಲಾಗಿತ್ತು. ಈಗ ಏಕೆ ಮಧ್ಯಸ್ಥರನ್ನು ನಿಶ್ಚಯಿಸಲಾಗಿತ್ತು ಎಂದು ನೀನೇ ಕೇಳುತ್ತಿದ್ದಿಯ. ಅವನು ಹೇಳಿದನು: ನಾವು ಹೇಳಿದ್ದು ನಮ್ಮ ತಪ್ಪು. ಆದರೆ ನೀವು ಅದನ್ನು ಏಕೆ ಒಪ್ಪಿಕೊಂಡಿರಿ. ಇದರ ಅರ್ಥವೇನೆಂದರೆ, ನಾವು ಸಹ ಪಾಪಿಗಳಾದವು ನೀವು ಸಹ ನಮ್ಮಂತೆ ಪಾಪಿಯಾಗಿದ್ದೀರಿ. ನಾವಿಬ್ಬರೂ ಈಗ ಸಮವಾಗಿದ್ದೇವೆ. ನೀವು ಸಹ ತಪ್ಪು ಮಾಡಿದ್ದೀರಿ ಮತ್ತು ನಾವು ಸಹ ತಪ್ಪು ಮಾಡಿದ್ದೇವೆ. ಈಗ ನಾವು ತಪ್ಪಿನಿಂದ ಪಶ್ಚಾತ್ತಾಪ ಮಾಡುತ್ತೇವೆ. ಆದ್ದರಿಂದ ನೀವು ಸಹ ತೌಬ ಮಾಡಿರಿ, ಪಶ್ಚಾತ್ತಾಪ ಮಾಡಿರಿ. ನೀವು ಮಾಡಿದ್ದು ಸರಿಯಲ್ಲವೆಂದು ಸಮ್ಮತಿಸಿರಿ. ಇದರಿಂದ ಅವನ ಉದ್ದೇಶವೇನಾಗಿತ್ತೆಂದರೆ, ಹಝ್ರತ್ ಅಲಿ(ರ) ತೌಬ ಮಾಡದಿದ್ದರೆ, ಹಝ್ರತ್ ಅಲಿ(ರ) ಇಸ್ಲಾಮಿಗೆ ವಿರುದ್ಧವಾದ ಒಂದು ಸಂಗತಿಯನ್ನು ಮಾಡಿದ್ದರು ಎಂದು ಹೇಳಿ ಅವನಗೆ ಬೈಅತಿನಂದ ಹೊರಗೆ ಹೋಗಬಹುದಾಗಿತ್ತು. ಇನ್ನು ಹಝ್ರತ್ ಅಲಿ(ರ) ತಾನು ತಪ್ಪು ಮಾಡಿದ್ದೇನೆ ಎಂದು ಹೇಳಿ ತೌಬ ಮಾಡಿದರೆ, ಆಗಲೂ ಅವರು ಖಿಲಾಫತ್ ಅಸಿಂಧುವಾಗುವುದು ಅಥವಾ ರದ್ದಾಗುವುದು ಏಕೆಂದರೆ ಇಷ್ಟು ದೊಡ್ಡ ತಪ್ಪು ಮಾಡುವ ವ್ಯಕ್ತಿ ಹೇಗೆ ಖಲೀಫರಾಗಿ ನಿಲ್ಲಲು ಸಾಧ್ಯವೆಂದು ಹೇಳುವನು. ಅವನ ಈ ಮಾತನ್ನು ಕೇಳಿದಾಗ, ಹಝ್ರತ್ ಅಲಿ(ರ) ಹೇಳಿದರು: ನಾನು ಯಾವುದೇ ತಪ್ಪು ಮಾಡಿಲ್ಲ. ಯಾವ ಸಂಗತಿಗಾಗಿ ಮಧ್ಯಸ್ಥರನ್ನು ನಿಶ್ಚಯಿಸಲಾಗಿತ್ತೋ ಆ ಸಂಗತಿಗಾಗಿ ಮಧ್ಯಸ್ಥರನ್ನು ನಿಶ್ಚಯಿಸುವುದು ಇಸ್ಲಾಮಿನ ಶರೀಅತ್ ಪ್ರಕಾರ ಅನುಮತನೀಯವಾದ ಸಂಗತಿಯಾಗಿದೆ. ಆದರೆ ಮಧ್ಯಸ್ಥರನ್ನು ನಿಶ್ಚಯಿಸುವಾಗ, ತೀರ್ಮಾನ ಪವಿತ್ರ ಖುರ್‌ಆನ್ ಮತ್ತು ನಬಿವಚನ ಪ್ರಕಾರವಾಗಿರುವುದು ಎಂಬ ಶರತ್ತನ್ನು ನಿಶ್ಚಯಿಸಲಾಗಿತ್ತು. ಹಾಗಾದರೆ ಮಾತ್ರ ಅದನ್ನು ಅಂಗೀಕರಿಸುವೆನು ಇಲ್ಲದಿದ್ದರೆ ಅಂಗೀಕರಿಸುವುದಿಲ್ಲ ಎಂದು ನಾನು ಹೇಳಿದ್ದೆ. ಆದರೆ ಈ ಮಧ್ಯಸ್ಥರು ಈ ಶರತ್ತನ್ನು ಗಮನದಲ್ಲಿಡಲಿಲ್ಲ. ಮಾತ್ರವಲ್ಲ ಯಾವ ವಿಷಯಕ್ಕಾಗಿ ಅವರನ್ನು ಮಧ್ಯಸ್ಥರನ್ನಾಗಿ ನಿಶ್ಚಯಿಸಲಾಗಿತ್ತೋ ಅದರ ಬಗ್ಗೆ ಅವರು ತೀರ್ಮಾನ ಸಹ ಮಾಡಲಿಲ್ಲ. ಆದ್ದರಿಂದ ಅವರ ತೀರ್ಮಾನವನ್ನು ಅಂಗೀಕರಿಸಲು ನನ್ನನ್ನು ನಿರ್ಬಂಧಿಸುವಂತಿಲ್ಲ. ಆದರೆ ಹಝ್ರತ್ ಅಲಿಯ(ರ) ಈ ಸಮರ್ಥನೆಯನ್ನು ಅವನು ಸಮ್ಮತಿಸಲಿಲ್ಲ ಮತ್ತು ಬೈಅತಿನಿಂದ ಬೇರ್ಪಟ್ಟುಕೊಂಡು ಖವಾರಿಜ್ ಎಂದು ಕರೆಯಲ್ಪಟ್ಟನು. ಖಲೀಫರನ್ನು ಅನುಸರಿಸಬೇಕಾದ ಆವಶ್ಯಕತೆಯಿಲ್ಲ ಮತ್ತು ಹೆಚ್ಚಿನ ಮುಸ್ಲಿಮರ ತೀರ್ಮಾನದ ಪ್ರಕಾರ ನಡೆಯಲಾಗುವುದೆಂಬ ವಾದವನ್ನು ಅವನು ಮಂಡಿಸಿದನು. ಏಕೆಂದರೆ ಯಾವನಾದರೂ ಒಬ್ಬ ವ್ಯಕ್ತಿಯನ್ನು ಅನುಸರಿಸಬೇಕೆಂದು ಹೇಳುವುದು **ಲಾ ಹುಕ್ಮ ಇಲ್ಲಲ್ಲಾಹ್**ದ ವಿರುದ್ಧವಾಗಿದೆ ಎಂದು ಅವನು ವಾದಿಸಿದನು.

(ಖಿಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ–15, ಪುಟ–486–488)

ನೆಹರ್‌ವಾನ್ ಯುದ್ಧ ಹಿಜರೀ 38ರಲ್ಲಿ ಹಝ್ರತ್ ಅಲಿ(ರ) ಮತ್ತು ಖವಾರಿಜ್‌ರ ನಡುವೆ ನಡೆದಿತ್ತು. ನೆಹರ್‌ವಾನ್ ಎಂಬುದು ಬಗ್‌ದಾದ್ ಮತ್ತು ವಾಸ್ತ ನಡುವೆ ಇರುವ ಪ್ರದೇಶವಾಗಿದೆ. (ಮುಜಮುಲ್ ಬಲದಾನ್, ಸಂಪುಟ–5, ಪುಟ–375, ದರುಲ್ ಕುತುಬ್ ಇಲ್‌ಮಿಯ ಬೈರೂತ್)

ಇಬ್ನು ಅಸೀರಿನ ಚರಿತ್ರೆಯ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ: ಸಿಫ್ಫೀನ್ ಯುದ್ಧದ ಸಮಯದಲ್ಲಿ ಉಂಟಾದ ಸಂಗತಿಯನ್ನು ಬಗೆಹರಿಸಲಿಕ್ಕಾಗಿ ಹಝ್ರತ್ ಅಲಿಯ(ರ) ಕಡೆಯಿಂದ ಹಝ್ರತ್ ಅಬೂಮೂಸಾ ಅಶ್‌ಅರಿ ಮತ್ತು ಅಮೀರ್ ಮುಆವಿಯಾ ಕಡೆಯಿಂದ ಹಝ್ರತ್ ಅಮ್ರ್ ಬಿನ್ ಆಸ್ ಮಧ್ಯಸ್ಥರಾಗಿ ನಿಶ್ಚಯಿಸಲ್ಪಟ್ಟರು. ಚರಿತ್ರೆಯ ಪುಸ್ತಕದಲ್ಲಿ ಈ ಘಟನೆಯನ್ನು ತಹ್‌ಕೀಂ ಎಂದು ಕರೆಯಲಾಗಿದೆ. ತಹ್‌ಕೀಮಿನ ವಿಷಯದಲ್ಲಿ ಹಝ್ರತ್ ಅಲಿಯೊಂದಿಗೆ(ರ) ಅವರ ಸೈನ್ಯದಒಂದು ವಿಭಾಗಕ್ಕೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಅವರು ಬಂಡಾಯವೇಳುತ್ತಾ ಬೇರ್ಪಟ್ಟು ಖವಾರಿಜ್ ಎಂದು ಕರೆಯಲ್ಪಟ್ಟರು. ಈ ಖವಾರಿಜಿಯರು ತಹ್‌ಕೀಂ ಪಾಪವೆಂದು ಹೇಳಿಕೊಂಡು ಹಝ್ರತ್ ಅಲಿಯೊಡನೆ ತೌಬ ಮಾಡಲು ಮತ್ತು ಖಿಲಾಫತಿನಿಂದ ಪದಚ್ಯುತಿಗೊಳ್ಳಲು ಆಗ್ರಹಿಸಿದರು. ಹಝ್ರತ್ ಅಲಿ(ರ) ಅದನ್ನು ನಿರಾಕರಿಸಿದರು. ಹಝ್ರತ್ ಅಲಿ(ರ) ಅಮೀರ್ ಮುಆವಿಯರ ವಿರುದ್ಧ ಹೋರಾಡಲು ಪುನಃ ಸಿರಿಯಾದ ಕಡೆಗೆ ಹೋಗುವ ತಯಾರಿಯಲ್ಲಿ ನಿರತರಾಗಿದ್ದರು. ಆ ವೇಳೆ ಖವಾರಿಜ್‌ಗಳು ಕಿಡಿಗೇಡಿತನದ ಕೆಲಸಗಳನ್ನು ಶುರುಮಾಡಿದ್ದರು. ಅವರು ಅಬ್ದುಲ್ಲಾಹ್ ಬಿನ್ ವಹಬ್‌ರನ್ನು ಇಮಾಂ ಮಾಡಿದರು ಮತ್ತು ಕೂಫದಿಂದ ನೆಹರ್‌ವಾನ್ ಕಡೆಗೆ ಹೋದರು. ಖವಾರಿಜ್‌ಗಳು ಬಸ್ರದಲ್ಲೂ ತನ್ನ ಕೂಟವನ್ನು ಒಟ್ಟುಗೂಡಿಸಿದರು. ಅನಂತರ ನೆಹರ್‌ವಾನನಲ್ಲಿ ಅಬ್ದುಲ್ಲಾಹ್ ಬಿನ್ ವಹಬ್‌ರ ಸೈನ್ಯದೊಂದಿಗೆ ಬಂದು ಸೇರಿದರು. ಹಝ್ರತ್ ಪೈಗಂಬರರ(ಸ) ಒಬ್ಬ ಸಹಾಬಿಯಾದ ಅಬ್ದುಲ್ಲಾಹ್ ಬಿನ್ ಖಬ್ಬಾಬ್‌ರನ್ನು ಹಝ್ರತ್ ಅಲಿಯ

ಪರವಾಗಿ ನಿಂತ ಕಾರಣದಿಂದ ಶಹೀದ್ ಮಾಡಲಾಯಿತು. ಹಝ್ರತ್ ಅಲಿಗೆ(ರ) ಇದರ ಬಗ್ಗೆ ಗೊತ್ತಾದಾಗ, ತನಿಖೆಗಾಗಿ ಹಾರಿಸ್ ಬಿನ್ ಮುರ್ರರನ್ನು ಕಳುಹಿಸಿದರು. ರಾಯಭಾರಿಯಾಗಿ ಅವರನ್ನು ಕಳುಹಿಸಲಾಗಿತ್ತು. ಖ಼ವಾರಿಜ್‌ಗಳು ಅವರನ್ನೂ ಶಹೀದ್ ಮಾಡಿದರು. ಈ ಸ್ಥಿತಿಯನ್ನು ಕಂಡು ಹಝ್ರತ್ ಅಲಿ(ರ) ಸಿರಿಯಕ್ಕೆ ಹೋಗುವುದನ್ನು ಬಿಟ್ಟುಕೊಂಡು, ಅಲ್ಲಿಗೆ ಹೋಗಲಿಕ್ಕಾಗಿ ತಯಾರು ಮಾಡಲಾದ ಸುಮಾರು 65 ಸಾವಿರದಷ್ಟು ಸೈನಿಕರದಂಡಿನೊಂದಿಗೆ ಖ಼ವಾರಿಜಿಯರ ವಿರುದ್ಧ ಹೋರಾಡಲು ಹೊರಟರು. ಹಝ್ರತ್ ಅಲಿ(ರ) ನೆಹರ್‌ವಾನ್ ಎಂಬ ಪ್ರದೇಶಕ್ಕೆ ತಲುಪಿದಾಗ ಖ಼ವಾರಿಜಿಯರನ್ನು ರಾಜಿಮಾಡಿಕೊಳ್ಳಲು ಆಮಂತ್ರಿಸಲಾಯಿತು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗೆ ಹಝ್ರತ್ ಅಲಿ(ರ) ಧ್ವಜವನ್ನು ಕೊಟ್ಟರು. ಯಾರು ಈ ಧ್ವಜದ ಕೆಳಗೆ ಬರುತ್ತಾರೋ ಅವರೊಡನೆ ಯುದ್ಧ ಮಾಡಲಾಗುವುದಿಲ್ಲ ಎಂದು ಹೇಳಲಾಯಿತು. ಈ ಘೋಷಣೆಯನ್ನು ಕೇಳಿಕೊಂಡು ನಾಲ್ಕು ಸಾವಿರದಷ್ಟು ಸಂಖ್ಯೆಯಲ್ಲಿದ್ದ ಖ಼ವಾರಿಜ್‌ಗಳಲ್ಲಿ ನೂರುಜನರು ಹಝ್ರತ್ ಅಲಿಯೊಡನೆ ಸೇರಿದರು ಮತ್ತು ದೊಡ್ಡ ಸಂಖ್ಯೆಯಲ್ಲಿ ಹಲವು ಜನರು ಕೂಫದ ಕಡೆಗೆ ಮರಳಿ ಹೋದರು. ಕೇವಲ ಒಂದು ಸಾವಿರದ ಎಂಟು ನೂರರಷ್ಟು ಜನರ ಸೈನ್ಯ ಅಬ್ದುಲ್ಲಾಹ್ ಬಿನ್ ವಹಬ್ ಖ಼ಾರ್ಜಿಯ ನೇತೃತ್ವದಲ್ಲಿ ಮುಂದಕ್ಕೆ ಧಾವಿಸಿತು. ಹಝ್ರತ್ ಅಲಿಯ(ರ) 65 ಸಾವಿರದಷ್ಟು ಜನರ ಸೈನ್ಯದೊಡನೆ ಯುದ್ಧ ನಡೆಯಿತು. ಅದರಲ್ಲಿ ಎಲ್ಲ ಖ಼ವಾರಿಜ್‌ಗಳು ಕೊಲ್ಲಲ್ಪಟ್ಟರು. ಒಂದು ವರದಿಯ ಪ್ರಕಾರ ಖ಼ವಾರಿಜರಲ್ಲಿ ಹತ್ತಕ್ಕಿಂತ ಕಡಿಮೆ ವ್ಯಕ್ತಿಗಳು ಬಚಾವು ಆದರು. ಹಝ್ರತ್ ಅಲಿಯ(ರ) ಸೈನ್ಯದಿಂದ ಏಳು ವ್ಯಕ್ತಿಗಳು ಹುತಾತ್ಮರಾದರು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–3, ಪುಟ–212–223, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ತಾರೀಖುಲ್ ಮಸ್‌ಊದ್, ಭಾಗ–2, ಪುಟ–342, ನಫೀಸ್ ಅಕಾಡಮಿ ಕರಾಚಿ, ನವೆಂಬರ್ 1985)

ಹಝ್ರತ್ ಉಮ್ಮರ ಬಿನ್ತ್ ಅಬ್ದುರ್ರಹ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ಬಸ್ರಾದ ಕಡೆಗೆ ರವಾನೆಯಾಗುವಾಗ, ಬೀಳ್ಕೊಡಲಿಕ್ಕಾಗಿ ಹಝ್ರತ್ ಪೈಗಂಬರರ(ಸ) ಪತ್ನಿಯಾದ ಹಝ್ರತ್ ಉಮ್ಮೇ ಸಲ್ಮಾರ(ರ) ಬಳಿಗೆ ಹೋದರು. ಅವರು ಹಝ್ರತ್ ಅಲಿಯೊಡನೆ(ರ) ಹೇಳಿದರು: ನೀವು ಅಲ್ಲಾಹನ ಸಂರಕ್ಷಣೆಯೊಂದಿಗೆ ಹೊರಡಿರಿ. ಅಲ್ಲಾಹನಾಣೆ, ಖಂಡಿತವಾಗಿಯೂ ನೀವು ಸತ್ಯದಲ್ಲಿದ್ದೀರಿ ಮತ್ತು ಸತ್ಯ ನಿಮ್ಮೊಂದಿಗೆ ಇದೆ. ಹಝ್ರತ್ ಪೈಗಂಬರ್(ಸ) ನಮ್ಮೊಡನೆ ಮನೆಯಲ್ಲೇ ಇರಲು ಆದೇಶಿಸಿದ್ದರು. ಆದ್ದರಿಂದ ನನಗೆ ಅಲ್ಲಾಹನು ಮತ್ತು ಅವನ ಪೈಗಂಬರರ(ರ) ಅವಿಧೇಯತ್ವದ ಭಯವಿಲ್ಲದಿರುತ್ತಿದ್ದರೆ, ನಾನು ನಿಮ್ಮೊಂದಿಗೆ ಬರುತ್ತಿದ್ದೆ. ಆದ್ದರಿಂದ ಖಂಡಿತವಾಗಿಯೂ ನಾನು ನನಗೆ ಅತಿ ಪ್ರಿಯನಾದ ಮತ್ತು ನಾನು ನನ್ನ ಜೀವಕ್ಕಿಂತಲೂ ಪ್ರೀತಿಸುವ ನನ್ನ ಮಗನನ್ನು ನಿಮ್ಮೊಂದಿಗೆ ಕಳುಹಿಸುತ್ತೇನೆ. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಸಂಪುಟ–3, ಪುಟ–129, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್–4611, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹೇಗಿದ್ದರೂ ಇವರ ಬಗ್ಗೆಗಿನ ಪ್ರಸ್ತಾಪ ಬರುವ ವಾರಗಳಲ್ಲಿ ಮುಂದುವರೆಯುವುದು. **ಇನ್ಶಾ ಅಲ್ಲಾಹ್.**

ಇಂದು ಸಹ ನಾನು ಪಾಕಿಸ್ತಾನ ಮತ್ತು ಅಲ್ಜೀರಿಯಾದ ಅಹ್ಮದಿಯರಿಗಾಗಿ ದುಆ ಮಾಡಲು ಹೇಳಬಯಸುತ್ತೇನೆ. ಅಲ್ಜೀರಿಯಾ ಬಗ್ಗೆ ಒಂದು ಸಂತೋಷದಾಯಕ ವಾರ್ತೆ ಏನೆಂದರೆ, ಕಳೆದ ಎರಡು ಮೂರು ದಿನಗಳಲ್ಲಿ ಸುಳ್ಳು ಆರೋಪಗಳಿಗೆ ಗುರಿಯಾದ ಹಲವಾರು ಅಹ್ಮದಿಯರನ್ನು ಎರಡು ವಿವಿಧ ನ್ಯಾಯಾಲಯಗಳು ಆರೋಪಗಳಿಂದ ಮುಕ್ತಗೊಳಿಸಿವೆ. ಅಲ್ಲಾಹನು ನೀತಿವಂತರಾದ ನ್ಯಾಯಾಧೀಶರಿಗೆ ಅದರ ಪ್ರತಿಫಲ ನೀಡಲಿ. ಅಹ್ಮದಿಯರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಮಾಡುವ ಸರ್ಕಾರದ ಇತರ ವ್ಯವಸ್ಥೆ ಮತ್ತು ನ್ಯಾಯಾಲಗಳಿಗೆ ನೀತಿಯಿಂದ ತೀರ್ಪು ಮಾಡಲು ಸೌಭಾಗ್ಯ ನೀಡಲಿ.

ಪಾಕಿಸ್ತಾನದ ಕೆಲವು ಆಫೀಸರರು ಮತ್ತು ಮುನ್ಸಿಫ್ ನ್ಯಾಯದಿಂದ ದೂರ ಹೋಗುತ್ತಿದ್ದಾರೆ. ತಮ್ಮ ಅಧಿಕಾರವನ್ನು ಅನ್ಯಾಯವಾಗಿ ಉಪಯೋಗಿಸುತ್ತಿದ್ದಾರೆ. ಹೃದಯಗಳ ದ್ವೇಷ ಮತ್ತು ಹಗೆಯನ್ನು ಹೋಗಲಾಡಿಸಿ ಕಾರ್ಯಗಳನ್ನು ನೋಡಲು ಅವರಿಗೆ ಅಲ್ಲಾಹನು ಸೌಭಾಗ್ಯ ನೀಡಲಿ. ಯಾರ ಸುಧಾರಣೆಯನ್ನು ಅಲ್ಲಾಹನು ವಿಧಿಸಿಲ್ಲವೋ ಅವರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ. ಅಲ್ಲಾಹನು ಅಹ್ಮದಿಯರಿಗೆ ಪಾಕಿಸ್ತಾನದಲ್ಲಿ ಶಾಂತಿ ಮತ್ತು ಸಮಾಧಾನದ ಸ್ಥಿತಿ ಉಂಟುಮಾಡಲಿ.

ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ **ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ್‌ನೀ ವನ್ಸುರ್‌ನೀ ವರ್‌ಹಮ್‌ನೀ** ಎಂಬ ದುಆವನ್ನು ಅಧಿಕವಾಗಿ ಮಾಡಿರಿ.**ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಝುಬಿಕ ಮಿನ್ ಶುರೂರಿಹಿಂ** ಎಂಬ ದುಆ ಸಹ ಹೆಚ್ಚಾಗಿ ಮಾಡಿರಿ. ಅಲ್ಲಾಹನಂದ ಕ್ಷಮೆ ಯಾಚನೆ ಕಡೆಗೆ ಹೆಚ್ಚು ಗಮನವಹಿಸಬೇಕು. ದುರೂದ್ ಪ್ರಾರ್ಥನೆ ಕಡೆಗೆ ಸಹ ಗಮನವಹಿಸಿರಿ. ಈಗಿನ ಸ್ಥಿತಿಯಲ್ಲಿ ಅದರ ತುಂಬಾ ಆವಶ್ಯಕತೆಯಿದೆ. ನಾನು ಹೇಳಿದಂತೆ ನಫ್ಲ್ ನಮಾಝ್‌ಗಳನ್ನು ಸಹ ನಿರ್ವಹಿಸಿರಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ.

ಇಂದು ಸಹ ನಮಾಝಿನ ನಂತರ ಕೆಲವು ಜನಾಝಗಳನ್ನು ನಿರ್ವಹಿಸುವೆನು. ಮೊದಲಿನ ಜನಾಝ ಖೈರ್‌ಪೂರಿನ ಸನ್ಮಾನ್ಯ ಅಬ್ಬಾಸ್ ಬಿನ್ ಅಬ್ದುಲ್‌ಖಾದಿರ್ ಸಾಹಿಬ್‌ರ ಪತ್ನಿಯಾದ ಹಿಂದ ಅಬ್ಬಾಸ್ ಸಾಹಿಬರದ್ದಾಗಿದೆ. ಸೆಪ್ಟೆಂಬರ್ 29ರಂದು 91ನೇ ವಯಸ್ಸಿನಲ್ಲಿ ನಿಧನಾರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರ ತಂದೆಯಾದ ಡಾಕ್ಟರ್ ಮುಹಮ್ಮದ್ ಇಬ್ರಾಹೀಂ ಸಾಹಿಬ್‌ರು ಕಿಂಗ್ ಎಡ್ವರ್ಡ್ ಮೆಡಿಕಲ್ ಕಾಲೇಜ್‌ನಲ್ಲಿ 1926ರಲ್ಲಿ ಕಲಿಯುತ್ತಿರುವಾಗ, ಅವರ ಒಬ್ಬ ಅಹ್ಮದಿ ಸಹಪಾಠಿಯಿಂದ ಪ್ರಭಾವಿತರಾಗಿ ತನ್ನ ಪತ್ನಿಯೊಂದಿಗೆ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಕೈಯಲ್ಲಿ ಬೈಅತ್ ಮಾಡಿ ಅಹ್ಮದಿಯ್ಯತ್ತಿಗೆ ಪ್ರವೇಶಿಸಿದ್ದರು. ದಿವಂಗತರಾದ ಹಿಂದ ಸಾಹಿಬರ ಮದುವೆ ಪ್ರೊಫೆಸರ್ ಅಬ್ಬಾಸ್ ಬಿನ್ ಅಬ್ದುಲ್‌ಖಾದಿರ್ ಸಾಹಿಬ್‌ರೊಂದಿಗೆ 1951ರಲ್ಲಿ ನಡೆದಿತ್ತು. ಅವರ ಪತಿಯಾದ ಅಬ್ಬಾಸ್ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಹಝ್ರತ್ ಮೌಲಾನಾ ಅಬ್ದುಲ್ ಮಾಜಿದ್ ಸಾಹಿಬ್‌ರ ಮೊಮ್ಮಗನಾಗಿದ್ದರು ಮತ್ತು ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿರ(ರ) ಪತ್ನಿಯ ಹಿರಿಯ ಸಹೋದರನಾದ ಪ್ರೊಫೆಸರ್ ಅಬ್ದುಲ್‌ಖಾದಿರ್ ಸಾಹಿಬ್‌ರ ಮಗನಾಗಿದ್ದರು. 1974ರಲ್ಲಿ ದಿವಂಗತರ ಪತಿಯಾದ ಪ್ರೊಫೆಸರ್ ಅಬ್ದುಲ್‌ಖಾದಿರ್ ಸಾಹಿಬ್‌ರನ್ನು ಖೈರ್‌ಪೂರಿನಲ್ಲಿ ಶಹೀದ್ ಮಾಡಲಾಗಿತ್ತು. ಅದರ ನಂತರ ದಿವಂಗತರಾದ ಹಿಂದ ಸಾಹಿಬರು ಬಹಳ ಸಹನೆಯಿಂದ ಇದ್ದರು. ಯಾವುದೇ ಅಸಹನೆಯನ್ನು ತೋರಿಸಿರಲಿಲ್ಲ ಮತ್ತು ಅಲ್ಲಾಹನ ಇಚ್ಛೆಯಲ್ಲಿ ತೃಪ್ತರಾಗಿದ್ದರು. ಅವರ ಪತಿ ಶಹೀದ್ ಆದಾಗ ಅಹ್ಮದಿಯೇತರಾದ ಅವರ ಚಿಕ್ಕಮರ ಮಗನು ಸಂತಾಪ ಸೂಚಿಸುತ್ತಾ ಬರೆದ ಪತ್ರದಲ್ಲಿ ಹೀಗೆ ಬರೆದಿದ್ದರು: ಅಬ್ಬಾಸ್ ಬಹಳ ತುಂಬ ವ್ಯಕ್ತಿಯಾಗಿದ್ದರು. ಅವರ ಮರಣ ಸನ್ಮಾರ್ಗದಲ್ಲಿ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಆಗ ಹಿಂದ ಸಾಹಿಬರು ಅವರಿಗೆ ಹೀಗೆ ಜವಾಬು ಬರೆದರು: ಯಾವ ಮಾರ್ಗದಲ್ಲಿ ನನ್ನ ಪತಿ ಜೀವ ನೀಡಿದ್ದರೋ ಅದು ಸನ್ಮಾರ್ಗದ ಮಾರ್ಗವಾಗಿದೆ ಎಂಬುವುದರಿಂದ ನನಗೆ ಹೆಮ್ಮೆಯಿದೆ.

ದಿವಂಗತರಾದ ಹಿಂದ ಸಾಹಿಬರ ಕಲಿಕೆಯ ಕಾಲದಲ್ಲಿನ ಆಪ್ತ ಗೆಳತಿಯಾದ ಶಫೀಕ ಸಾಹಿಬ ನಂತರದ ಕಾಲದಲ್ಲಿ ಜನರಲ್ ಝಿಯಾಲ್‌ಹಖ್ಖ್ ಸಾಹಿಬ್‌ರ ಪತ್ನಿಯಾಗಿದ್ದರು. ಪತಿಯಾದ ಝಿಯಾಲ್ ಹಖ್ಖ್ ಅಧ್ಯಕ್ಷನಾದ ನಂತರ ಒಂದು ಸಲ ಆ ಗೆಳತಿ ಹೀಗೆ ಹೇಳಿದರು: ಎಲ್ಲರೂ ನನ್ನನ್ನು ಭೇಟಿಯಾಗಲು ಬರುತ್ತಾರೆ. ಆದರೆ ನನ್ನ ಗೆಳತಿಯಾದ ಹಿಂದ ಬರುವುದೇ ಇಲ್ಲ. ಹೀಗೆ ಹೇಳಿದ್ದ ಬಗ್ಗೆ ಹಿಂದ ಸಾಹಿಬರಿಗೆ ಗೊತ್ತಾದಾಗ ಅವರು ಹೇಳಿದರು: ನನ್ನ ಪ್ರಿಯ ಇಮಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಮತ್ತು ಅವರ ಜಮಾಅತಿನೊಡನೆ ಶತ್ರುತ್ವ ಹೊಂದಿರುವ ವ್ಯಕ್ತಿಯ ಪತ್ನಿಯನ್ನು ಭೇಟಿಯಾಗಲು ನನಗೆ ಯಾವುದೇ ಆಸೆಯಿಲ್ಲ. ಅನಂತರವೂ ಎಂದಿಗೂ ಝಿಯಾಲ್ ಹಖ್ಖಿನ ಪತ್ನಿಯನ್ನು ಭೇಟಿಯಾಗಿರಲಿಲ್ಲ. ದಿವಂಗತರಾದ ಹಿಂದ ಸಾಹಿಬರು ಹಲವಾರು ಉತ್ತಮ ಸ್ವಭಾವಗುಣವನ್ನು ಹೊಂದಿದ್ದರು. ಬಹಳವಾಗಿ ಶುಚಿತ್ವವನ್ನು ಇಷ್ಟಪಡುತ್ತಿದ್ದರು. ಕ್ರಮಬದ್ಧತೆಯುಳ್ಳವರಾಗಿದ್ದರು. ಬಹಳ ಸಾತ್ವಿಕ ಮತ್ತು ನಿಷ್ಠಾವಂತ ಸ್ತ್ರೀಯಾಗಿದ್ದರು. ನಮಾಝ್ ಮತ್ತು ಉಪವಾಸವನ್ನು ಯಾವಾಗಲೂ ಬಹಳ ಕ್ರಮಬದ್ಧವಾಗಿ ನಿರ್ವಹಿಸುತ್ತಿದ್ದರು. ಮಕ್ಕಳಿಗೂ ಅದರ ಅಭ್ಯಾಸವನ್ನು ಮಾಡಿಸಿದ್ದರು. ಚಂದಾ ನೀಡುವುದರಲ್ಲಿಯೂ ತಡಮಾಡುತ್ತಿರಲಿಲ್ಲ. ದಾನಧರ್ಮಗಳನ್ನು ಮಾಡಲು ಸದಾ ತಯಾರಿರುತ್ತಿದ್ದರು. ರಮಝಾನಿನ ತಿಂಗಳಲ್ಲಿ ದಿನಾಲೂ ಹಲವು ಜನರಿಗೆ ಉಪವಾಸ ತೆರೆಯಲು ತನ್ನ ಮನೆಯಲ್ಲಿ ವ್ಯವಸ್ಥೆ ಮಾಡುತ್ತಿದ್ದರು. ಖಿಲಾಫತಿನೊಂದಿಗೆ ಅಪಾರವಾದ ಸಂಬಂಧ ಮತ್ತು ಪ್ರೇಮವಿತ್ತು. ತನ್ನ ಕೈಬರಹದಿಂದಲೇ ನನಗೆ ನಿಯತವಾಗಿ ಪತ್ರ ಬರೆಯುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಹೆಚ್ಚಾಗಿ ಓದುತ್ತಿದ್ದರು. ಜಮಾಅತಿನ ಇತರ ಪುಸ್ತಕಗಳನ್ನು ಮತ್ತು ಅಲ್‌ಫಝ್ಲ್ ಪತ್ರಿಕೆಯನ್ನು ಕೊನೆ ವಯಸ್ಸಿನಲ್ಲೂ ಓದುತ್ತಿದ್ದರು. 2006ರಲ್ಲಿ ಅವರ ಕಿರಿಯ ಮಗಳಾದ ಡಾಕ್ಟರ್ ಆಮಿರ ತನ್ನ ಎರಡು ಮಕ್ಕಳು ಸಮೇತ ಒಂದು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು. ಈ ದುಃಖವನ್ನು ಬಹಳ ಧೈರ್ಯದಿಂದ ಸಹಿಸಿದ್ದರು. ಸಹನೆ ತೋರಿಸುವುದರಲ್ಲಿ ಮಾದರಿಯಾಗಿದ್ದರು. ಎಲ್ಲ ಆಪ್ತ ಸಂಬಂಧಿಕರು ಮತ್ತು ಅವರನ್ನು ಭೇಟಿಯಾಗುವ ಎಲ್ಲರೂ ಅವರ ಹಲವಾರು ಸ್ವಭಾವ ವೈಶಿಷ್ಟ್ಯಗಳ ಕಾರಣದಿಂದ ಅವರನ್ನು ತುಂಬ ಪ್ರೀತಿಸುತ್ತಿದ್ದರು. ಅಹ್ಮದಿಯೇತರ

ಸಹೋದರರೊಂದಿಗೂ ಅವರಿಗೆ ಪ್ರೀತಿಯ ಸಂಬಂಧವಿತ್ತು. ದಿವಂಗತರು ಮೂರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಅವರು ಅಮೇರಿಕ, ಕೆನಡಾ ಮತ್ತು ನಾರ್ವೆಯಲ್ಲಿ ನೆಲೆಸಿರುವರು. ಅಲ್ಲಾಹನು ಅವರ ಎಲ್ಲ ಮಕ್ಕಳಿಗೂ ಮೊಮ್ಮಕ್ಕಳಿಗೂ ದಿವಂಗತರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಇರಾಕಿನ ರಿಝ್ವಾನ್ ನಈಮಿ ಸಾಹಿಬ್‌ರದ್ದಾಗಿದೆ. ನವೆಂಬರ್ 13ರಂದು ಎಪ್ಪತ್ತನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರ ಮಗನಾದ ಮುಸ್ತಫಾ ನಈಮಿ ಸಾಹಿಬ್‌ರು ಬರೆಯುತ್ತಾರೆ: ನನ್ನ ತಂದೆ ಕನಸಿನಲ್ಲಿ ಹಝ್ರತ್ ಸಯ್ಯದ್ ಅಬ್ದುಲ್ ಖಾದಿರ್ ಜೀಲಾನಿಯನ್ನು ನೋಡಿದ್ದರು. ಅವರು ತನ್ನ ಪಾದರಕ್ಷೆಯನ್ನು ನನ್ನ ತಂದೆಗೆ ನೀಡಿದ್ದಾಗಿ ಕಂಡಿದ್ದರು. ಸಯ್ಯದ್ ಅಬ್ದುಲ್‌ಖಾದಿರ್ ಜೀಲಾನಿಯ ಪಾದರಕ್ಷೆಯನ್ನು ಧರಿಸಲು ನನಗೆ ಯಾವ ಅರ್ಹತೆಯಿದೆ ಎಂದು ಹೇಳಿ ಅದನ್ನು ಧರಿಸುವುದರಿಂದ ಹಿಂದೆಸರಿದರು. ಆದರೆ ಸಯ್ಯದ್ ಅಬ್ದುಲ್‌ಖಾದಿರ್ ಜೀಲಾನಿ ಒತ್ತಾಯಪಡಿಸಿದಾಗ ತಂದೆಯವರು ಪಾದರಕ್ಷೆಯನ್ನು ಧರಿಸಿದರು. ಅನಂತರ ಸಯ್ಯದ್ ಅಬ್ದುಲ್‌ಖಾದಿರ್ ಜೀಲಾನಿ(ರಹ್) ಒಬ್ಬ ವ್ಯಕ್ತಿ ಮತ್ತು ಅವರ ಜಮಾಅತಿನ ಬಗ್ಗೆ ಸೂಚಿಸುತ್ತಾ ಅದರಲ್ಲಿ ಸೇರಲು ಉಪದೇಶಿಸಿದರು. ಅನಂತರ ರಿಝ್ವಾನ್ ಅಮೀನಿ ಸಾಹಿಬ್‌ರು ಕನಸಿನಲ್ಲಿ ಹಝ್ರತ್ ಪೈಗಂಬರರನ್ನು(ಸ) ಸಹ ಭೇಟಿಯಾದರು. ಕೆಲವು ವರ್ಷಗಳ ನಂತರ ಎಂ.ಟಿ.ಎ.ಮೂಲಕ ಅವರಿಗೆ ಜಮಾಅತಿನ ಪರಿಚಯವಾಯಿತು. ಆಗ ರಿಝ್ವಾನ್ ಸಾಹಿಬ್‌ರು ಹೇಳಿದರು: ಕನಸಿನಲ್ಲಿ ಹಝ್ರತ್ ಪೈಗಂಬರರ(ಸ) ಭೇಟಿಯಿಂದ ಹಝ್ರತ್ ಸತ್ಯಸಂಧ ಸೇವಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಬರುವಿಕೆ ಉದ್ದೇಶಿಸಲಾಗಿತ್ತು ಮತ್ತು ಯಾವ ವ್ಯಕ್ತಿ ಮತ್ತು ಯಾವ ಜಮಾಅತಿನ ಬಗ್ಗೆ ಕನಸಿನಲ್ಲಿ ಶೇಖ್ ಅಬ್ದುಲ್‌ಖಾದಿರ್ ಜೀಲಾನ(ರಹ್) ಸೂಚನೆ ನೀಡಿದ್ದರೋ ಅದರಿಂದ ಹಝ್ರತ್ ಖಲೀಫತುಲ್ ಮಸೀಹ್‌ರನ್ನು ಮತ್ತು ಅವರ ಜಮಾಅತನ್ನು ಉದ್ದೇಶಿಸಲಾಗಿತ್ತು. ಹೀಗೆ ಅವರು 2012ರಲ್ಲಿ ಬೈಅತ್ ಮಾಡಿದರು. ದಿವಂಗತರು ಬಹಳ ಸಾತ್ವಿಕರು, ಒಳ್ಳೆಯವರು ಮತ್ತು ತನ್ನ ಸಂಬಂಧಿಕರನ್ನು ಹಾಗೂ ಬಡವರನ್ನು ಸಹಾಯ ಮಾಡುವವರಾಗಿದ್ದರು. ತಬ್ಲೀಗ್ ಮಾಡಲು ಬಹಳ ಆಸಕ್ತಿ ಹೊಂದಿದ್ದರು. ದುರ್ಬಲ ಆರೋಗ್ಯ ಮತ್ತು ಜನರ ವಿರೋಧವಿದ್ದರೂ ತಮ್ಮ ಪ್ರದೇಶದಲ್ಲಿ ಅಹ್ಮದಿಯ್ಯತಿನ ತಬ್ಲೀಗ್ ಮಾಡುತ್ತಿದ್ದರು. ಬೈಅತ್ ಮಾಡಿ ಜಮಾಅತಿನಲ್ಲಿ ಸೇರಲು ತಮ್ಮ ಕುಟುಂಬದರೊಡನೆ ಯಾವಾಗಲೂ ಹೇಳುತ್ತಿದ್ದರು. ಅವರ ಮಗನು, ಪತ್ನಿ ಮತ್ತು ಪತ್ನಿಯ ಸಹೋದರನು ಸಹ ಈಗ ಬೈಅತ್ ಮಾಡಿರುವರು. ಅಲ್ಲಾಹನು ಅವರಿಗೆ ಸ್ಥಿರಚಿತ್ತತೆ ನೀಡಲಿ ಮತ್ತು ದಿವಂಗತರ ಒಳಿತುಗಳನ್ನು ಜಾರಿಯಲ್ಲಿರಿಸಲು ಅವರೆಲ್ಲರಿಗೂ ಸೌಭಾಗ್ಯ ನೀಡಲಿ. ದಿವಂಗತರ ಪದವಿಗಳನ್ನು ಅಲ್ಲಾಹನು ಉನ್ನತಗೊಳಿಸಲಿ.

ಮುಂದಿನ ಜನಾಝ ಸರ್‌ಗೋದ ಜಿಲ್ಲೆಯ ಹಜ್‌ಕ ಪಟ್ಟಣದ ಸನ್ಮಾನ್ಯ ಮಲಿಕ್ ಅಲಿ ಮುಹಮ್ಮದ್ ಸಾಹಿಬ್‌ರದ್ದಾಗಿದೆ. ಅವರು ಕೆನ್ಯಾದ ಮುಬಲ್ಲಿಗಾದ ಮುಹಮ್ಮದ್ ಅಫ್‌ಝಲ್ ಝಫರ್ ಸಾಹಿಬ್‌ರ ತಂದೆಯಾಗಿದ್ದರು. ಆಗಸ್ಟ್ 20ಕ್ಕೆ 90ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

1974ರಲ್ಲಿ ಅಲ್ಲಾಹನ ಮಾರ್ಗದಲ್ಲಿ ಸೇರೆಯಾಳು ಆಗುವ ಸೌಭಾಗ್ಯ ಲಭಿಸಿತ್ತು. ಜಮಾಅತಿನ ಕಾರ್ಯಕರ್ತರನ್ನು, ವಖ್ಫೇ ಝಿಂದಗೀಯರನ್ನು, ಮುಬಲ್ಲಿಗರನ್ನು ಮತ್ತು ಮುಅಲ್ಲಿಮರನ್ನು ಬಹಳ ಗೌರವಿಸುತ್ತಿದ್ದರು. ದಿವಂಗತರು ತಹಜ್ಜುದ್ ನಿರ್ವಹಿಸುವವರೂ ಉಪವಾಸ, ನಮಾಝ್‌ಗಳನ್ನು ಸರಿಯಾಗಿ ಪಾಲಿಸುವವರೂ ಅತಿಥಿ ಸತ್ಕಾರಿಯೂ ಆಗಿದ್ದರು. ಬಡವರಿಗೆ ನೆರವು ನೀಡುವವರೂ ಸಹನೆ ಮತ್ತು ಕೃತಜ್ಞತೆಯುಳ್ಳವರು ಹಾಗೂ ಕುಟುಂಬ ಸಂಬಂಧವನ್ನು ನೆಲೆನಿಲ್ಲಿಸುವವರೂ ಆಗಿದ್ದರು. ಒಬ್ಬ ಒಳ್ಳೆಯ ಸಾತ್ವಿಕ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಪವಿತ್ರ ಖುರ್‌ಆನಿನ ತಿಲಾವತ್ ನಿಯತವಾಗಿ ಮಾಡುತ್ತಿದ್ದರು. ಅವರಿಗೆ ಹಲವಾರು ಮಕ್ಕಳನ್ನು ಪವಿತ್ರ ಖುರ್‌ಆನ್ ಕಲಿಸಲು ಸೌಭಾಗ್ಯ ಲಭಿಸಿತ್ತು. ದಿವಂಗತರು ಮೂರು ಪುತ್ರರನ್ನು ಮತ್ತು ಹನ್ನೊಂದು ಪೌತ್ರರನ್ನು ಅಗಲಿರುವರು. ನಾನು ಹೇಳಿದಂತೆ ಸನ್ಮಾನ್ಯ ಮುಹಮ್ಮದ್ ಅಫ್‌ಝಲ್ ಝಫರ್ ಸಾಹಿಬ್‌ರು ಈಗ ಮುಬಲ್ಲಿಗ್ ಎಂಬ ನೆಲೆಯಲ್ಲಿ ಕೆನ್ಯಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ತನ್ನ ತಂದೆಯ ಜನಾಝದಲ್ಲಿ ಹಾಜರಾಗಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೆ ಸಹನೆ ಮತ್ತು ಧೈರ್ಯ ನೀಡಲಿ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಲಾಹೋರಿನ ಇಹ್‌ಸಾನ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಅವರು ಸನ್ಮಾನ್ಯ ಶಫ್‌ಕತ್ ಮಹ್ಮೂದ್ ಸಾಹಿಬ್‌ರ ಮಗನಾಗಿದ್ದರು.ಜೂಲಾಯಿ 27ರಂದು 35ನೇ ವಯಸ್ಸಿನಲ್ಲಿ ಕರೋನ ವೈರಸ್ಸಿನ ಕಾರಣದಿಂದ ನಿಧನರಾದರು.**ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಗುಜ್‌ರಾತಿನ ಗೋಲೇಕಿಯ ಹಝ್ರತ್ ಮೌಲವಿ ನೂರುದ್ದೀನ್ ಅಜ್ಮಲ್ ಸಾಹಿಬ್‌ರ ಮೊಮ್ಮಗರಾಗಿದ್ದರು. ಗುಜ್‌ರಾನ್‌ವಾಲದ ಇರ್ಶಾದ್ ಅಹ್ಮದ್ ಸಾಹಿಬ್‌ರ ಮಗಳ ಮಗನಾಗಿದ್ದರು. ಲಾಹೋರಿನ ರಚ್‌ನಾ ಟೌನಿನಲ್ಲಿ ಕಳೆದ ಎರಡು ವರ್ಷಗಳಿಂದ ಜಮಾಅತಿನ ಸದರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಅದಲ್ಲದೇ ದೆಹಲಿ ಗೇಟ್ ಇಮಾರತಿನಲ್ಲಿ ಸೆಕ್ರೆಟರಿ ನೌಮುಬಾಈನ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ತಬ್ಲೀಗ್ ಮಾಡುವ ತುಂಬಾ ಆಸಕ್ತಿ ಹೊಂದಿದ್ದರು. ಅಲ್ಲಾಹನ ಅನುಗ್ರಹದಿಂದ ಅವರಿಗೆ 8 ವ್ಯಕ್ತಿಗಳನ್ನು ಬೈಅತ್ ಮಾಡಿಸಲಿ ಸೌಭಾಗ್ಯ ಲಭಿಸಿತ್ತು. ದಿವಂಗತರು ಪತ್ನಿಯನ್ನಲ್ಲದೇ ಇಬ್ಬರು ಪುತ್ರರಾದ 6 ವಯಸ್ಸಿನ ಹನಾನ್ ಅಹ್ಮದ್ ಮಸ್ರೂರ್ ಮತ್ತು 3 ವಯಸ್ಸಿನ ಮಬೀನ್ ಅಹ್ಮದ್ ತಾಹಿರ್ ಹಾಗೂ ಐದು ವಯಸ್ಸಿನ ಮಗಳಾದ ಸಾಇರಾ ಅಹ್ಮದ್‌ರನ್ನು ಮತ್ತು ತಂದೆ ತಾಯಂದಿರು, ಮೂವರು ಸಹೋದರರು ಹಾಗೂ ಇಬ್ಬರು ಸಹೋದರಿಯರನ್ನು ಅಗಲಿರುವರು. ಅಲ್ಲಾಹನು ಅವರೆಲ್ಲರಿಗೂ ಸಹನೆ ಮತ್ತು ಧೈರ್ಯವನ್ನು ಪ್ರದಾನ ಮಾಡಲಿ. ಅಲ್ಲಾಹನೇ ಈ ಮಕ್ಕಳ ಸಂರಕ್ಷಕನಾಗಲಿ ಮತ್ತು ಅವರೆಲ್ಲರಿಗೂ ದಿವಂಗತರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ ಹಾಗೂ ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್‌ರ ಕಿರಿಯ ಮಗನಾದ ಸನ್ಮಾನ್ಯ ರಿಯಾಝುದ್ದೀನ್ ಸಾಹಿಬ್‌ರದ್ದಾಗಿದೆ. ಮೇ 27ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಹಝ್ರತ್ ಮಿಯಾಂ ಮುಹಮ್ಮದ್ ಸಿದ್ದೀಖ್ ಸಾಹಿಬ್‌ರ ಮೊಮ್ಮಗನ ಮಗನೂ ಹಝ್ರತ್ ಮಿಯಾಂ ಇಮಾಮುದ್ದೀನ್ ಸಾಹಿಬ್ ಸೇಖ್‌ವಾನಿಯ ಮೊಮ್ಮಗನೂ ಹಝ್ರತ್ ಖಾಜಾ ಉಬೈದುಲ್ಲಾಹ್ ಸಾಹಿಬ್‌ರ ಮಗಳ ಮಗನೂ ಮತ್ತು ಹಝ್ರತ್ ಮೌಲಾನಾ ಜಲಾಲುದ್ದೀನ್ ಶಮ್ಸ್ ಸಾಹಿಬ್‌ರ ಮಗನೂ ಆಗಿದ್ದರು. ಇವರೆಲ್ಲರೂ ಸಹಾಬಿಯರು ಆಗಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಇಬ್ಬರು ಪುತ್ರಿಯರನ್ನು ಮತ್ತು ಒಬ್ಬ ಪುತ್ರನನ್ನು ಅಗಲಿರುವರು. ಅವರ ಪತ್ನಿ ಮೊದಲೇ ನಿಧನರಾಗಿದ್ದರು. ಅಲ್ಲಾಹನು ಅವರ ಮಕ್ಕಳಿಗೆ ಸಹನೆ ಮತ್ತು ಧೈರ್ಯವನ್ನು ಪ್ರದಾನ ಮಾಡಲಿ. ದಿವಂಗತರೊಂದಿಗೆ ಅಲ್ಲಾಹನು ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಹೋದರರಾದ ಮುನೀರುದ್ದೀನ್ ಶಮ್ಸ್ ಸಾಹಿಬ್‌ರು ಹೇಳುತ್ತಾರೆ: ದಿವಂಗತರು ಹಲವಾರು ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದರು. ನಮಾಝನ್ನು ಸರಿಯಾಗಿ ನಿರ್ವಹಿಸುತ್ತಿದ್ದರು. ಮಕ್ಕಳೊಡನೆ ಯಾವಾಗಲೂ ನಮಾಝ್ ಬಗ್ಗೆ ಉಪದೇಶಿಸುತ್ತಿದ್ದರು. ಖಿಲಾಫತಿನೊಂದಿಗ ಅಪಾರವಾದ ಪ್ರೇಮವಿತ್ತು. ಮನೆಯಲ್ಲಿ ಸದಾ ಖಿಲಾಫತಿನೊಂದಿಗೆ ಸಂಬಂಧದ ಮಾತುಗಳು ನಡೆಯುತ್ತಿದ್ದುವು. ಕಳೆದ ಎರಡು ವರ್ಷಗಳಿಂದ ರೋಗಾವಸ್ಥೆಯ ದಿನಗಳಲ್ಲಿ ನನ್ನನ್ನು ಭೇಟಿಯಾಗಲು ಬರುತ್ತಿದ್ದರು. ರೋಗಿಯಾಗಿದ್ದರೂ ಬಹಳ ಸಹನೆ, ಧೈರ್ಯ ಮತ್ತು ಹಸನ್ಮುಖರಾಗಿ ಮಾತನಾಡುತ್ತಿದ್ದರು. ಮಕ್ಕಳ ಬಗ್ಗೆ ಚಿಂತಿಸುತ್ತಿದ್ದರು, ತನ್ನ ಬಗ್ಗೆ ಯಾವುದೇ ಚಿಂತೆಯಿದ್ದಿರಲಿಲ್ಲ. ಸದಾ ಹಸನ್ಮುಖರಾಗಿರುತ್ತಿದ್ದರು, ಎಲ್ಲರೊಡನೆ ಸೇರಿಕೊಂಡಿರುತ್ತಿದ್ದರು, ಎಲ್ಲರ ದುಃಖ ಸುಖಗಳಲ್ಲಿ ಜೊತೆಗೆ ಇರುತ್ತಿದ್ದರು ಎಂದು ಇವರ ಬಗ್ಗೆ ಎಲ್ಲರೂ ಹೇಳುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಪದವಿಗಳನ್ನು ಉನ್ನತಗೊಳಿಸಲಿ. ಆಮೀನ್

*****************

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಗುರಿಯಾಗಿರುತ್ತಾರೆಂದರೆ ಅವರಿಗೆ ನಮ್ಮಲ್ಲಿಯೇ ಒಬ್ಬ ಸುಧಾರಕ ಇದ್ದಾನೆಂಬುದನ್ನು ನಂಬಲಿಕ್ಕಾಗುವುದಿಲ್ಲ. ಅವರು ಭಾವಿಸುವುದೇನೆಂದರೆ ಅವರನ್ನು ಸುಧಾರಿಸಲು, ಪ್ರಗತಿಪಡಿಸಲು ಹೊರಗಿನಿಂದ ಯಾರೊಬ್ಬರು ಬರಬೇಕು ಎಂದು. ಅದೇ ವ್ಯವಸ್ಥೆ ಇಂದು ಮುಸಲ್ಮಾನರದ್ದಾಗಿದೆ ಅವರು ಹೇಳುವುದು ಹಝ್ರತ್ ಈಸಾ(ಅ) ಅವರೇ ಆಕಾಶದಿಂದ ಇಳಿದು ಬಂದು ನಮಗೆ ಈ ಹೀನ ಸ್ಥಿತಿಯಿಂದ ಮತ್ತು ಅವನತಿಯಿಂದ ಪಾರು ಮಾಡುವರು ಎಂದು. ನಮಗೆ ಪರಿಹಾರ ಒದಗಿಸಿಕೊಡುವಂತಹ ವ್ಯಕ್ತಿ ನಮ್ಮಲ್ಲಿ ಹುಟ್ಟಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಗತಿಸಿ ಹೋದ ಸಮುದಾಯಗಳಿಗೆ ಮತ್ತು ಇವರಿಗೆ ಎಷ್ಟೊಂದು ಸಾಮ್ಯತೆ ಇದೆ. ಅದೇ ಖಿನ್ನತೆ ಮತ್ತು ಅದೇ ಚಿಕಿತ್ಸಾ ವಿಧಾನ. ಆ ಸಮುದಾಯದ ಜನರು ಅವರಲ್ಲಿ ಯಾವ ಚೈತನ್ಯವು ಇಲ್ಲ. ಅವರ ಭಾವನೆ ಎಂದರೆ ಬೇರೆಯವರ ಸಹಾಯವಿಲ್ಲದೇ ಏನು ಮಾಡಲು ಸಾಧ್ಯವಿಲ್ಲ. ಹೀಗಿರುವಾಗ ಅವರಿಂದಲೇ ಅವರ ಒಬ್ಬ ಸಹೋದರ ದಾವೆ ಹೂಡಿದನು. ನಾನು ನಿಮ್ಮ ಚಿಕಿತ್ಸೆ ಮಾಡುವೆನು ಮತ್ತು ಪ್ರಗತಿಪಥ ತೋರಿಸುವೆನು. ಆಗ ಅವರು ಅಚ್ಚರಿಪಟ್ಟರು. ಯಾವ ಮಾತು ಅಸಾಧ್ಯವಾಗಿತ್ತೋ ಅದನ್ನು ಸಾಧಿಸಲು ಹೇಗೆ ಇವನು ದಾವೆ ಮಾಡಿದನು ಎಂದು ಆಶ್ಚರ್ಯಚಕಿತರಾದರು.

ಅವರು ಅಚ್ಚರಿಪಡಲು ಇನ್ನೊಂದು ಕಾರಣವೇನೆಂದರೆ ಆ ದಾವೆದಾರನು ಹೇಳುತ್ತಿದ್ದ. ನಾನು ನಿಮಗೆ ಎಚ್ಚರಿಸಲು ಬಯಸುತ್ತೇನೆ. ಅಂದರೆ ಕೆಲ ಹಳೆಯ ಮಾತುಗಳನ್ನು ಬಿಟ್ಟುಬಿಡಿರಿ ಮತ್ತು ಕೆಲ ಹೊಸ ಮಾತುಗಳನ್ನು ಸ್ವೀಕರಿಸಲು ಸಿದ್ಧರಾಗಿ, ಪ್ರವಾದಿಗಳ ಈ ಮಾತು ಪ್ರಸಕ್ತ ವ್ಯವಸ್ಥೆ (ಧರ್ಮಪದ್ಧತಿ) ಯನ್ನು ಬಿಡಿರಿ ಮತ್ತು ಹೊಸ ವ್ಯವಸ್ಥೆ (ಧರ್ಮಪದ್ಧತಿ)ಗೆ ಸಿದ್ಧರಾಗಿ ಎಂದಾಗ ಎಂದಿನಂತೆ ಅವರಿಗೆ ಆಶ್ಚರ್ಯವಾಗುತ್ತದೆ. ಅವಿಶ್ವಾಸಿಗಳ ಈ ಎರಡೂ ಮಾತುಗಳು ವಿರೋಧಭಾಸದ್ದಾಗಿದೆ. ಒಂದೆಡೆ ಅವರಲ್ಲಿ ಎಷ್ಟೊಂದು ಕೀಳರಿಮೆ ಮನೆ ಮಾಡಿಕೊಂಡಿದೆ ಎಂದರೆ ಅವರು ಭಾವಿಸುವುದು ನಮ್ಮಲ್ಲಿ ಸುಧಾರಕರಾಗಿ ಯಾರೊಬ್ಬರು ಬರಲು ಸಾಧ್ಯವೇ ಇಲ್ಲ. ಇನ್ನೊಂದೆಡೆ ನಮ್ಮ ಧರ್ಮಪದ್ಧತಿಯನ್ನು ನೀವು ಏಕೆ ಬದಲಿಸುತ್ತಿದ್ದೀರಿ. ಇದು ಅವನತಿಗೆ ಗುರಿಯಾದ ಸಮುದಾಯಗಳ ಸ್ಥಿತಿಯಾಗಿರುತ್ತದೆ ಅವರು ಬಯಸುವುದೇನೆಂದರೆ ಏನು ಬಿಡಲು ಬಾರದು ಮತ್ತು ಏನೂ ಮಾಡಕೂಡದು. ಒಬ್ಬ ವ್ಯಕ್ತಿಯು ಹೊರಗಿನಿಂದ ಬಂದು ಅವರ ಪ್ರಸಕ್ತ ವ್ಯವಸ್ಥೆಯನ್ನು ಬದಲಿಸದೇ ಅವರಿಗೆ ಪ್ರಗತಿಪಥ ತೋರಿಸಬೇಕು. ಅವರು ಶಿಕ್ಷಣ ಪಡೆಯುವ ಅವಶ್ಯಕತೆ ಇರಬಾರದು. ಶ್ರಮಪಡುವ ಅವಶ್ಯಕತೆ ಇರಬಾರದು. ಯಾವುದು ಕೆಡುಕುಗಳನ್ನು ಬಿಡಬಾರದು. ಬದಲು ಒಬ್ಬ ವ್ಯಕ್ತಿ ಹೊರಗಿನಿಂದ ಬರಬೇಕು ಮತ್ತು ಎಲ್ಲರಿಗೂ ಹೊಡೆದು ಹಾಕಬೇಕು. ಏನೂ ಮಾಡದೆ ಅವರಿಗೆ ಎಲ್ಲವೂ ಸಿಗುವಂತಾಗಬೇಕು. ಇಷ್ಟು ಯೋಚನೆ ಮಾಡುವುದಿಲ್ಲ. ಅವರಿದ್ದ ವ್ಯವಸ್ತೆಯೇ ಚೆನ್ನಾಗಿರುತ್ತಿದ್ದರೆ ಅವರಿಗೆ ಏಕೆ ಅವಮಾನ ಮತ್ತು ಅವನತಿ ದೊರಕುತಿತ್ತು? ಆದುದರಿಂದ ಅವರ ಪ್ರಸಕ್ತ ವ್ಯವಸ್ಥೆ ಬದಲಿಸಿಯೇ ಸುಧಾರಣೆ ಆಗಲು ಸಾಧ್ಯ. (ತಫ್ಸೀರ್ ಕಬೀರ್ ಸಂಪುಟ 3, ಪುಟ 16, ಮುದ್ರಣ ಖಾದಿಯಾನ್ 2010)

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಥವಾ ಆರ್ಯ, ಯಹೂದಿ, ಬ್ರಾಹ್ಮಣ ಯಾರೇ ಆಗಿರಲಿ ಅವರೆಲ್ಲರಿಗೆ ಇದು ಸುಸಂದರ್ಭವಾಗಿದೆ. ಅವರು ನನ್ನ ಎದುರು ಪ್ರತಿಪಾದಿಸಲಿ, ಅವರು ಅಗೋಚರ ಮಾಹಿತಿ ಪಡೆಯುವವರಾದರೆ ನಾನು ದೇವವಾಣಿ ಪಡೆದು ಹೇಳುತ್ತೇನೆ. ನನ್ನ ಎಲ್ಲಾ ಜಡ ಆಸ್ತಿಗಳು ಅದು ಹತ್ತು ಸಾವಿರ ರುಪಾಯಿಯ ಸಮೀಪವಾಗಿರಬಹುದು. ಅವನಿಗೆ ಅರ್ಪಿಸುವೆನು. ಅಥವಾ ಆತನಿಗೆ ತೃಪ್ತಿ ಆಗುವ ರೀತಿಯಲ್ಲಿ ದಂಡ ನೀಡಲು ಸಿದ್ಧನಿರುವೆನು. ನನ್ನ ದೇವನ ಸಾಕ್ಷ್ಯವಹಿಸಿ ಹೇಳುವೆನು. ಕಿಂಚಿತ್ತೂ ಲೋಪ ಮಾಡೆನು ನನಗೆ ಮರಣ ದಂಡನೆ ನೀಡಿದರೂ ನಾನು ಅದನ್ನು ಮನಃಪೂರ್ವಕವಾಗಿ ಸ್ವೀಕರಿಸುವೆನು. ನಾನು ಮನಃಪೂರಕವಾಗಿ ಹೇಳುವೆನು ನಾನು ಸತ್ಯವನ್ನೇ ಹೇಳುತ್ತಿದ್ದೇನೆ ಎಂದು ಅಲ್ಲಾಹನು ಸಹ ಅರಿಯುವವನಾಗಿದ್ದಾನೆ. ಇದರಲ್ಲಿ ಯಾರಿಗಾದರೂ ಸಂಶಯವಿದ್ದರೆ ಅವರು ಸ್ವಯಂ ಉತ್ತಮ ಯೋಜನೆ ಮಂಡಿಸಲಿ. ನಾನು ಅದನ್ನು ಸ್ವೀಕರಿಸುವೆನು. ನಾನು ಎಂದೂ ಅದನ್ನು ಉಪೇಕ್ಷಿಸುವುದಿಲ್ಲ. ನಾನು ಸುಳ್ಳುಗಾರನಾಗಿದ್ದರೆ ಯಾವುದೇ ಭಯಂಕರವಾದ ಶಿಕ್ಷೆಯಿಂದ ವಿನಾಶಗೊಳ್ಳುವುದೇ ಲೇಸು ಎಂದು ಭಾವಿಸುತ್ತೇನೆ. ನಾನು ಸತ್ಯವಂತನಾಗಿ ಬಯಸುವುದೇನೆಂದರೆ ಯಾರೂ ನನ್ನಿಂದ ನಾಶ ಹೊಂದಬಾರದು. ಓ ಪಾದರಿ ಸಾಹೇಬರುಗಳೇ!! ಯಾರು ಇಮ್ಮ ಸಮುದಾಯದಲ್ಲಿ ಉನ್ನತ ಸ್ಥಾನ ಹೊಂದಿರುವರೋ ನಿಮಗೆ ಅಲ್ಲಾಹನಿಗೆ ಸಾಕ್ಷಿ ವಹಿಸಿ ಹೇಳುತ್ತೇನೆ. ಇತ್ತ ಕಡೆ ಗಮನವಹಿಸಿರಿ. ನಿಮ್ಮಲ್ಲಿ ಲವಲೇಶವೂ ಆ ಸತ್ಯವಂತನಾದ ಮನುಷ್ಯನು ಅವನ ಹೆಸರು ಏಸುಮಸೀಹ್ ಎಂದಾಗಿದೆ. ನಾನು ನಿಮಗೆ ಆಣೆ ಮಾಡಿ ಹೇಳುವೆನು. ನನ್ನ ಎದುರಿಗೆ ನಿಲ್ಲಿರಿ. ಆ ಮಸೀಹನನ್ನು ಮರಿಯಮ್‌ನ ಉದರದಿಂದ ಜನ್ಮ ನೀಡಿದ ಆ ದೇವನ ಆಣೆ, ಆತನು ಇಂಜೀಲ್ ಗ್ರಂಥವನ್ನು ಅವತರಿಸಿದನು, ಮಸೀಹನನ್ನು ಮರಣ ನೀಡಿ ಮತ್ತೆ ಮರಣ ಹೊಂದಿದವರಲ್ಲಿ ಸೇರಿಸಿಲ್ಲ. ಬದಲು ತನ್ನ ಜೀವಂತ ಸಮುದಯವಾದ ಇಬ್ರಾಹಿಂ, ಮೂಸ, ಯಹ್ಯಾ ಮತ್ತು ಇತರ ಪ್ರವಾದಿಗಳಲ್ಲಿ ಸೇರಿಸಿದನು. ಆಗ ಜಿವಂತಗೊಳಿಸಿ ಅವರ ಬಳಿಯೇ ಆಕಾಶದಲ್ಲಿ ಕರೆಸಿಕೊಂಡನು. ಅದರ ಮುಂಚೆ ಜೀವಂತ ಎಂದು ಭಾವಿಸಿದರು. ನನ್ನ ಎದುರು ಸ್ಪರ್ಧಿಸಲು ನಿಲ್ಲಿರಿ. ಸತ್ಯವು ನಿಮ್ಮ ಪರವಾಗಿದ್ದರೆ ಮತ್ತು ಸತ್ಯವಾಗಿಯೂ ಮಸೀಹನು ದೇವನೇ ಆಗಿದ್ದರೆ ನೀವೇ ವಿಜಯವಾಗುವಿರಿ, ಅಲ್ಲ ಅವರದ್ದು ಏನಿಲ್ಲವಾದರೆ, ಸತ್ಯವಿಶ್ವಾಸದ ದೃಷ್ಟಾಂತಗಳು ನಮ್ಮಲ್ಲಿಲ್ಲ ಎಂದು ಒಪ್ಪಿಕೊಳ್ಳುವವರಾದರೆ ಬನ್ನಿ ಇಸ್ಲಾಮ್ ಸ್ವೀಕರಿಸುವ ಶರತ್ತಿನ ಮೇಲೆ ಬಂದು ಅಲ್ಲಾಹನ ದೃಷ್ಟಾಂತಗಳನ್ನು ಕಾಣಲಿ ಮತ್ತು ನಿಮ್ಮಲ್ಲಿರುವ ಹೆಸರಾಂತ ಮುಖಂಡರು, ತನ್ನ ಸಮುದಾಯದ ಗಣ್ಯ ಆದರಣೀಯ ವ್ಯಕ್ತಿಗಳು ಅವರೆಲ್ಲರೂ ಅಥವಾ ಅವರಲ್ಲಿ ಯಾರೊಬ್ಬರು ನನ್ನ ಎದುರಿಗೆ ಬರಲಿ, ನನ್ನನ್ನು ಎದುರಿಸಲು ಹಿಂಜರಿಯುವವರಾದರೆ ಕೇವಲ ತನ್ನ ಕಡೆಯಿಂದ ಇಷ್ಟು ಭರವಸೆಯನ್ನಾದರೂ ನೀಡಲಿ. ನಾನು ಮನುಷ್ಯನಿಂದ ಆಗದಂತಹ ಕಾರ್ಯವನ್ನು ನೋಡುವವನಾದರೆ ವಿಶ್ವಸ ತರುವೆನು. ಇಸ್ಲಾಮ್ ಸ್ವೀಕರಿಸುವೆನು, ನನ್ನಿಂದ ಯಾವುದಾದರೂ ದೃಷ್ಟಾಂತ ನೋಡ ಬಯಸುವವರಾಗಲಿ, ಹನ್ನೆರಡು ಸಾಕ್ಷಿಗಳು, ಕ್ರೈಸ್ತ, ಮುಸಲ್ಮಾನ, ಹಿಂದೂ ಅಂದರೆ ನಾಲ್ಕು ಕ್ರೈಸ್ತರು, ನಾಲ್ಕು ಮುಸಲ್ಮಾನರು, ನಾಲ್ಕು ಹಿಂದೂಗಳು, ಆಣೆವಹಿಸಿ ಒಂದು ಜಾಹೀರಾತು ಪ್ರಕಟಪಡಿಸಲಿ. ಒಂದು ಜಾಹಿರಾತು ನನಗೂ ನೀಡಲಿ, ಒಂದು ವೇಳೆ ಅಲ್ಲಾಹನು ಯಾವುದೇ ಅದ್ಭುತವಾದ ಕಾರ್ಯ ದೃಷ್ಟಾಂತ ಪ್ರಕಟಪಡಿಸಲಿಲ್ಲವಾದರೆ ಅದು ಮಾನವ ಶಕ್ತಿಯಿಂದ ವಿಹಿತರಾಗಿರಬೇಕು. ಆಗ ತಡ ಮಾಡದೇ ಇಸ್ಲಾಂ ಸ್ವೀಕರಿಸುವಂತಾಗಲಿ, ಸ್ವೀಕರಿಸಲಿಲ್ಲವಾದರೆ ಮತ್ತೆ ಎರಡನೆಯ ದೃಷ್ಟಾಂತ ಇದಾಗಿರುವುದು. ನಾನು ನನ್ನ ಪ್ರಭುವಿನಿಂದ ಬಯಸುವೆನು ಒಂದು ವರ್ಷದ ಒಳಗೆ ಇಂತಹ ವ್ಯಕ್ತಿಯ ಮೇಲೆ ಶಿಕ್ಷೆಯನ್ನು ಅವತರಿಸಲಿ. ಉದಾಹರಣೆಗೆ ಕುಷ್ಟರೋಗ ಅಥವಾ ಅಂಧತ್ವ ಅಥವಾ ಮರಣ, ಈ ಪ್ರಾರ್ಥನೆ ಸ್ವೀಕೃತಗೊಂಡಿಲ್ಲವೆಂದರೆ ಆದರೂ ಸಹ ಯಾವುದೇ ದಂಡಕ್ಕೆ ಸಿದ್ಧರಾಗಲು ತಯಾರಾಗುವೆನು. ಇದೇ ಶರತ್ತು ಆರ್ಯ ಸಾಹೇಬರುಗಳಿಗೆ ಬಯಸುವೆನು. ಅವರು ವೇದಳನ್ನು ದೇವರ ಗ್ರಂಥ ಎಂದು ಭಾವಿಸುವುದುದಾದರೆ ಮತ್ತು ನಮ್ಮ ಪವಿತ್ರ ಗ್ರಂಥ ದೇವಗ್ರಂಥವನ್ನು ಮನುಷ್ಯನ ಮಿಥ್ಯ ಸೃಷ್ಟಿ ಎಂದು ಭಾವಿಸುವುದಾದರೆ ಅವರು ನನ್ನ ಎದುರಿಗೆ ಪ್ರತಿಪಾದಿಸಲಿ ಮುಂದೆ ಬರಲಿ, ಆದರೆ ನೆನಪಿಸಿರಿ. ಅವರು ನನ್ನ ಎದುರು ಪರಾಜಿತರಾಗುವರು. ಅವರಲ್ಲಿ ನಾಸ್ತಿಕತೆ ಮತ್ತು ಮಿತಿ ಮೀರಿದ ಮೊಸಗಾರಿಕೆ ಇದೆ, ಆದರೆ ಅಲ್ಲಾಹನು ಅವರಿಗೆ ಸಾಬೀತು ಮಾಡಿ ತೋರಿಸುವನು. ನಾನಿದ್ದೇನೆ ಎಂದು ನನ್ನ ಎದುರು ಪ್ರತಿಪಾದಿಸಲು ಬಾರದಿದ್ದರೆ ಏಕಪಕ್ಷೀಯವಾಗಿ ಯಾವುದೇ ಶರತ್ತುಗಳಲ್ಲದೆ ನನ್ನಿಂದ ನೋಡಲಿ. ನಾನು ದೇವನೆಡೆಯಿಂದ ಬಂದವನೆಂದು ಹೇಳಲು ಸಾಕಾಗಬಹುದು, ಯಾವುದೇ ದೃಷ್ಟಾಂತ ನೋಡದ ಆರ್ಯನೊಬ್ಬನು ತಡಮಾಡದೇ ಮುಸ್ಲಿಮನಾಗಲಿಲ್ಲ ಎಂದರೆ ನಾನು ಅವನ ಮೇಲೆ ಶಾಪ ಹಾಕುವೆನು. ಅವನು ಒಂದು ವರ್ಷ ತನಕ ಕುಷ್ಟ ರೋಗ ಅಥವಾ ಅಂಧತ್ವ ಅಥವಾ ಮರಣದಂತಹ ಆಪತ್ತುಗಳಿಗೆ ಗುರಿಯಾಗಲಿಲ್ಲ ಎಂದಾದರೆ ಯಾವುದೇ ಶಿಕ್ಷೆ ಅನುಭವಿಸಲು ನಾನು ಸಿದ್ಧನಿದ್ದೇನೆ. ಬೇರೆಯವರಿಗೂ ಇದೇ ಶರತ್ತುಗಳಾಗಿವೆ. ಈಗಲೂ ಸಹ ನನ್ನೆಡೆ ಗಮನಹರಿಸಲಿಲ್ಲ ಎಂದರೆ ಅವರ ಮೇಲೆ ನ್ಯಾಯ ಪೂರ್ತಿಗೊಂಡಿದೆ. (ಆಯಿನ ಕಮಾಲಾತೆ ಇಸ್ಲಾಂ ರೂಹಾನಿ ಖಝಾಈನ್ ಸಂಪುಟ–5, ಪುಟ–272–278)

ಮುಂದೆ ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ರವರಿಂದ ಪ್ರಸ್ತುತಪಡಿಸಿದ ಇನ್ನೊಂದು ಬಹುಮಾನದ ಪಂಥ್ವನ ನಾವು ಓದುಗರಲ್ಲಿ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅಂತೂ ಎಲ್ಲ ಜ್ಞಾನಗಳು ಲೋಕದಲ್ಲಿ ಒಂದರ ನಂತರ ಮತ್ತೊಂದು ಪ್ರಕಟವಾದದ್ದು, ಪವಿತ್ರ ಖುರ್‌ಆನಿನ ದೆಸೆಯಿಂದಾಗಿ ಮತ್ತು ಅದರ ಪರವಾಗಿ ಅಲ್ಲಾಹನು ಉಂಟು ಮಾಡಿದನು. ಈ ಜ್ಞಾನಿಗಳು ಬರುತ್ತಿರಲಿಲ್ಲವಾದರೆ ಪವಿತ್ರ ಖುರ್‌ಆನಿನ ವಾಸ್ತವ ಮತ್ತು ಅದರ ಮಹಾನತೆ ಜನರು ಪೂರ್ಣ ರೀತಿಯಲ್ಲಿ ತಿಳಿಯಲು ಅಸಮರ್ಥರಾಗುತ್ತಿದ್ದರು. ಅದೇ ಗತಿ ಅರ್ಥಶಾಸ್ತ್ರದ್ದಾಗಿದೆ. ಅಲ್ಲಾಹನು ಅದನ್ನು ಖುರ್‌ಆನ್‌ನಿಂದ ತಿಳಿಯಲು ಅರ್ಥಶಾಸ್ತ್ರದ ವ್ಯಾಖ್ಯಾನ ಲೋಕಕ್ಕೆ ನೀಡಿದನು. ಒಟ್ಟಿನಲ್ಲಿ ವ್ಯಾಕರಣವಾಗಲಿ, ಇತಿಹಾಸವಾಗಲಿ, ಸಾಹಿತ್ಯವಾಗಲಿ, ಕವನ, ಧರ್ಮಪದ್ಧತಿ, ತತ್ವಗಳೆಲ್ಲವೂ ಖುರ್‌ಆನ್‌ನ ಸೇವೆಗೋಸ್ಕರ ಬಂದುದಾಗಿವೆ ಇಲ್ಲವಾಗಿದ್ದಲ್ಲಿ ಅರಬರಂತೂ ಅಜ್ಞಾನಿಗಳಾಗಿದ್ದರು. ಅವರಿಗೆ ಯಾವ ಜ್ಞಾನದ ಕಡೆಯೂ ಲಕ್ಷ್ಯವಿರಲಿಲ್ಲ. ಅವರು ಲಕ್ಷ್ಯವಹಿಸಿದ್ದರು. ಪವಿತ್ರ ಖುರ್‌ಆನ್‌ನ ಮೇಲೆ ವಿಶ್ವಾಸ ಹೊಂದಿದ್ದಾಗ ಮತ್ತೆ ಪವಿತ್ರ ಖುರ್‌ಆನ್‌ನನ್ನು

ಲೋಕಕ್ಕೆ ತಿಳಿಸಲು ಅವರಿಗೆ ಇನ್ನಿತರ ಜ್ಞಾನಗಳು ಕಲಿಯಬೇಕಾಯಿತು. ಈಗ ಉಳಿದದ್ದನ್ನೂ ಲೋಕವು ಪವಿತ್ರ ಖುರ್‌ಆನ್‌ನಿಂದಲೇ ಎಲ್ಲ ಜ್ಞಾನಗಳು ಕಲಿತಿದೆ. ಏಕೆಂದರೆ ಆ ಎಲ್ಲ ಜ್ಞಾನಗಳು ಅರಬರ ಕೊಡುಗೆಯಾಗಿವೆ. ಮತ್ತೆ ಅರಬರಿಂದ ಬಾಕಿ ಲೋಕಕ್ಕೆ ಬಂದುದಾಗಿದೆ.

ಒಟ್ಟಿನಲ್ಲಿ ಯೂರೋಪಿಯನ್ನರ ಬಳಿ ಯಾವ ಒಂದು ವಸ್ತುವು ಇರಲಿಲ್ಲ. ಅವರು ಏನೆಲ್ಲ ಕಲಿತಿದ್ದಾರೋ ಅದು ಸ್ಪೇನ್ ಮುಸ್ಲಿಮರಿಂದ ಕಲಿತಿದ್ದಾರೆ. ಸ್ಪೇನ್‌ನಿಂದ ಕಲಿತದ್ದೆಲ್ಲ ಸಿರಿಯಾದಿಂದ ಮತ್ತು ಸಿರಿಯಾ ಕಲಿತದ್ದು ಪವಿತ್ರ ಖುರ್‌ಆನ್‌ನಿಂದ, ಆದುದರಿಂದ ಸ್ಪಷ್ಟವಾಗುತ್ತದೆ. ಲೋಕದಲ್ಲಿ ಯಾವುದೆಲ್ಲ ಜ್ಞಾನಗಳು ಬಂದಿವೆ ಅವು ಪವಿತ್ರ ಖುರ್‌ಆನ್‌ನ ಮಾಧ್ಯಮದಿಂದ, ಈಗ ಅಂತ್ಯ ದಿನಗಳವರೆಗೆ ಎಷ್ಟೆಲ್ಲ ಲೇಖನಿಗಳು ನಡೆಯುವುದು ಅವೆಲ್ಲ ಪವಿತ್ರ ಖುರ್‌ಆನ್‌ನ ಸೇವೆಗೋಸ್ಕರ ಮತ್ತು ಅದರ ಶಿಕ್ಷಣ ಪ್ರಸಾರಕ್ಕಾಗಿ ನಡೆಯುವುದು. ಇಂದು ಯೂರೋಪಿನಲ್ಲಿ ಎಷ್ಟೆಲ್ಲ ಗ್ರಂಥಗಳು ಬರುತ್ತಿವೆ. ಅವೆಲ್ಲ **"ಅಲ್ಲಮ ಬಿಲ್ ಖಲಮ್"** ಪರಿಣಾಮವಾಗಿವೆ. ಮತ್ತು ಅಲ್ಲಾಹನ ಈ ಭವಿಷ್ಯವಾಣಿ ಲೇಖನಿಯಿಂದ ಪವಿತ್ರ ಖುರ್‌ಆನ್ ಪ್ರಸಾರ ಮಾಡುವುದು, ಅದರ ಸಾಕ್ಷ್ಯವಾಗಿದೆ. ಅರಬರು ಎಲ್ಲ ವಿಧದ ಜ್ಞಾನಗಳಿಂದ ಅಜ್ಞಾನಿಯಾಗಿದ್ದರು. ಆದರೆ ಪವಿತ್ರ ಖುರ್‌ಆನ್‌ನ ಮೇಲೆ ವಿಶ್ವಾಸ ತಂದ ಮೇಲೆ ಇಡೀ ಲೋಕಕ್ಕೆ ಮಾರ್ಗದರ್ಶಕರಾದರು. ಯಾವ ತತ್ವಜ್ಞಾನದ ಮೇಲೆ ಯೂರೋಪಿಯನ್ನರಿಗೆ ಇಂದು ಬಹಳ ಗರ್ವವಿದೆ. ಅದು ಅರಬರದ್ದೇ ಕೊಡುಗೆಯಾಗಿದೆ.

ಅದರಲ್ಲಿ ಯಾವ ಸಂಶಯವೂ ಇಲ್ಲ. ಜ್ಞಾನಗಳು ಯಾವಾಗಲೂ ಪ್ರಗತಿ ಹೊಂದುತ್ತಿರುತ್ತವೆ. ಒಂದು ಪೀಳಿಗೆಯ ನಂತರ ಇನ್ನೊಂದು ಪೀಳಿಗೆಗೆ ಪ್ರಯತ್ನಪಡುತ್ತದೆ. ಅದರ ಶೈಕ್ಷಣಿಕ ಸ್ಥಾನ ಮೊದಲಿನಿಂದ ಎತ್ತರಗೊಳ್ಳುತ್ತದೆ. ಆದರೆ ಅದಾದ ನಂತರವೂ ಬೀಜ ತನ್ನ ಅಸ್ತಿತ್ವದಲ್ಲಿ ಹೊಂದಿರುವ ಪ್ರಾಮುಖ್ಯತೆಯನ್ನು ಯಾರು ಅಲ್ಲಗಳೆಯುವಂತಿಲ್ಲ. ಗಿಡವು ಎಷ್ಟೆಲ್ಲ ಅಗಲ ಚಾಚಿದರೂ, ದೊಡ್ಡದಾದರೂ ಬೀಜದ ಪ್ರಾಮುಖ್ಯತೆ ನಿರಾಕರಿಸುವಂತಿಲ್ಲ. ಅದೇ ರೀತಿ ಜ್ಞಾನಿಗಳು ಎಷ್ಟೇ ಅಭಿವೃದ್ಧಿ ಸಾಧಿಸಿದರೂ ಅದರ ಶ್ರೇಯಸ್ಸು ಮುಸ್ಲಿಮರಿಗೆ ಹೋಗುತ್ತದೆ. ಮತ್ತು ಮುಸ್ಲಿಮರ ಶಿರವು ಪವಿತ್ರ ಖುರ‌ಆನ್‌ನ ಮುಂದೆ ಬಾಗಿರುತ್ತದೆ. ಏಕೆಂದರೆ ಆ ಗ್ರಂಥವೇ ಈ ಘೋಷಣೆ ಸಾರಿದ್ದು. 'ಅಲ್ಲಮ ಬಿಲ್‌ಖಲಮ್" ಈಗ ಲೋಕಕ್ಕೆ ಲೇಖನಿಯಿಂದ ಜ್ಞಾನಗಳನ್ನು ಕಲಿಸುವ ಸಮಯ ಬಂದಿದೆ. ಆದ್ದರಿಂದ ಅದು ವಾಸ್ತವವಾಗಿದೆ. ಲೋಕವು ಪವಿತ್ರ ಖುರ್‌ಆನ್‌ನಿಂದಲೇ ಎಲ್ಲಾ ಜ್ಞಾನಗಳನ್ನು ಕಲಿತಿವೆ. ಪವಿತ್ರ ಖುರ್‌ಆನ್ ಅವತರಿಸುತ್ತಿರಲಿಲ್ಲವಾದರೆ ಲೋಕವು ಅಂಧಕಾರದ ಗೂಡಾಗುತ್ತಿತ್ತು. ಅಜ್ಞಾನತೆ ಮತ್ತು ಬರ್ಬರತೆಯ ದೃಶ್ಯಗಳನ್ನು ಪ್ರಸ್ತುತಪಡಿಸುತ್ತಿತ್ತು. ಇದು ಖುರ್‌ಆನ್‌ನ ಉಪಕಾರವಾಗಿದೆ. ಅದು ಲೋಕವನ್ನು ಅಂಧಕಾರದಿಂದ ತೆಗೆದು ಜ್ಞಾನದ ಮೈದಾನದಲ್ಲಿ ತಂದು ನಿಲ್ಲಿಸಿದೆ. (ತಫ್ಸೀರ್‌ಕಬೀರ್, ಸಂಪುಟ–9, ಸೂರಃ ಅಲ್‌ಅಲಖ್, ಪುಟ–271–274)

* ಅನಂತರ ಅಖೀಝುಂ ಅದ್‌ನಾನ್ ಕಲೀಮ್ "ಖುರ್‌ಆನ್ ಜ್ಞಾನದ ಉದಾಹರಣೆಗಳು" ಎಂಬ ವಿಷಯದ ಬಗ್ಗೆ ಕೆಳಗಿನ ವಿಷಯ ಪ್ರಸ್ತುತಪಡಿಸಿದರು.

ಪ್ರೀತಿಯ ಸಹೋದರರೇ! ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ಜ್ಞಾನಗಳು ಅಡಗಿವೆ. ಪವಿತ್ರ ಖುರ್‌ಆನ್ ಅದರ ಮೇಲೆ ಚಿಂತನೆ ಮಾಡಲು ಪ್ರೇರೇಪಿಸುತ್ತದೆ. ಉದಾಹರಣೆಗೆ ಅರೂಮ್ ಅಧ್ಯಾಯದ 22 ರಿಂದ 25 ವಚನಗಳಲ್ಲಿ ಅಲ್ಲಾಹನು ಹೇಳಿದನು. "ನಿಶ್ಚಯವಾಗಿಯೂ ಚಿಂತನಶೀಲರಿಗೆ ಅದರಲ್ಲಿ ದೃಷ್ಟಾಂತಗಳಿವೆ. ಮತ್ತೆ ಹೇಳಿದನು. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ. ಮತ್ತೆ ನುಡಿದನು. ಆಲಿಸುವವರಿಗೆ ಅದರಲ್ಲಿ ನಿಜವಾಗಿ ದೃಷ್ಟಾಂತಗಳಿವೆ. ಅದೇ ರೀತಿ ಹೇಳಿದನು. ಮನವರಿಕೆ ಮಾಡುವ ಜನರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.

ಈಗ ಈ ವಿನೀತನು ಸಂದರ್ಭೋಚಿತವಾಗಿ ನಿಮ್ಮ ಮುಂದೆ ಖುರ್‌ಆನ್ ಜ್ಞಾನಗಳಿಂದ ಕೆಲವು ಉದಾಹರಣೆಗಳನ್ನು, ಖುರ್‌ಆನ್ ಅದರ ಮೇಲೆ ಚಿಂತನೆ ನಡೆಸಲು ಉಪದೇಶ ನೀಡುತ್ತದೆ, ಪ್ರಸ್ತುತಪಡಿಸುತ್ತೇವೆ.

ಇಂದಿನಿಂದ ಹದಿನಾಲ್ಕು ನೂರು ವರ್ಷಗಳ ಹಿಂದೆ ಪವಿತ್ರ ಖುರ್‌ಆನ್‌ನ ಈ ಬ್ರಹ್ಮಾಂಡದ ಸೃಷ್ಟಿಯ ಕುರಿತು (ಅದನ್ನು big Bow theory ಎನ್ನಲಾಗುತ್ತದೆ) ಬ್ರಹ್ಮಾಂಡದ ಪ್ರತಿ ಕ್ಷಣ ಹೋಗುತ್ತ ಇದೆ. ಅದೇ ರೀತಿ Galaxies, ನಕ್ಷತ್ರ, ಗ್ರಹಗಳ, ಸೂರ್ಯ, ಚಂದ್ರ, ಇತ್ಯಾದಿಗಳ ಕುರಿತು ಎಂತಹ ಮಾಹಿತಿಗಳನ್ನು ಒದಗಿಸಿದೆ ಎಂದರೆ ಆಧುನಿಕ ಸಂಶೋಧನಕಾರರಿಗೆ ಅದು ಸಹಾಯಕವಾಯಿತು. ಇನ್ನು ಎಷ್ಟೋ ಮಾಹಿತಿಗಳಿವೆ. ಅದನ್ನು ಇನ್ನೂ ಅರಿಯಲಾಗಲಿಲ್ಲ. ಅಲ್ಲಾಹನು ಅತ್ತಕ್‌ವೀರ್ ಅಧ್ಯಾಯದ 12ನೇ ವಚನದಲ್ಲಿ ಈ ಭವಿಷ್ಯವಾಣಿ ನುಡಿದನು. ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲದಲ್ಲಿ Astronomy (ರಾಶೀಫಲ ಶಾಸ್ತ್ರ) ಜ್ಞಾನವು ಬಹಳ ಪ್ರಗತಿ ಹೊಂದುವುದು, ಹೇಳಿದನು. ಆಕಾಶದ ಚರ್ಮ ಸುಲಿಯಲ್ಪಡುವುದು."

Astronomy ವಿಷಯದ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ನೂರಾರು ವಚನಗಳಿವೆ. ಅವು ನಮಗೆ ಹೆಚ್ಚಿನ ಸಂಶೋಧನೆ ನಡೆಸಲು ಪ್ರೇರಕವಾಗಿವೆ. ಆಕಾಶದಂತೆ ಭೂಮಿಯ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ವಚನಗಳಿವೆ. ಭೂಮಿಯ ರಚನೆ, ಭೂಮಿಯ ಮೇಲೆ ಪರ್ವತಗಳ ಸ್ಥಾಪನೆ, ನೀರು ಮತ್ತು ಮೋಡಗಳ ನಿಯಮ ಗಿಡಗಳ ಬಿತ್ತನೆ, ಪ್ರಾಣಿಗಳ ಮತ್ತು ಪಕ್ಷಿಗಳ ಹುಟ್ಟುವಿಕೆ, ಒಟ್ಟಿನಲ್ಲಿ ಭೂಮಿಯ ಸಂಬಂಧ Geology ಜೊತೆಯಲ್ಲಿ ಇನ್ನಿತರ ಹಲವು ಜ್ಞಾನಗಳು ಉದಾಹರಣೆಗೆ Hydmology, Zoology, Oceanology, Botony, ಇತ್ಯಾದಿ ಪಡೆಯಲು ಮತ್ತು ಅದರ ಮೇಲೆ ಚಿಂತನೆ ನಡೆಸಲು ಪವಿತ್ರ ಖುರ್‌ಆನ್ ಪದೇ ಪದೇ ಕರೆ ನೀಡುತ್ತದೆ.

ಅದೇ ರೀತಿ ಅಲ್ಲಾಹನು ಇನ್‌ಫಿತಾನ್ ಅಧ್ಯಾಯದಲ್ಲಿ 5ನೇ ವಚನದಲ್ಲಿ ಈ ಭವಿಷ್ಯವಾಣಿ ನೀಡಿದ್ದಾನೆ. ಅಂತ್ಯ ಕಾಲದಲ್ಲಿ Arcilology ಯಲ್ಲೂ ತುಂಬಾ ಪ್ರಗತಿ ಸಾಧಿಸುವರು. ಉದಾಹರಣೆಗೆ ಹೇಳಿದನು. ಸಮಾಧಿಗಳು ತೆರೆಯಲ್ಪಡುವುದು. ಅದಲ್ಲದೇ Egyptology ಯ ಕುರಿತು ಅಸಂಖ್ಯಾತ ವಚನಗಳಿವೆ. ಅವು ನನಗೆ ಇತಿಹಾಸವನ್ನು ಅಧ್ಯಯನ ಮಾಡಲು ಪ್ರೇರಣೆ ನೀಡುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಮನುಷ್ಯನ ಜನ್ಮ ಮತ್ತು ಜನ್ಮ ಸಂಬಂಧಿ ಹಂತಗಳ ಕುರಿತು ವಚನಗಳಿವೆ. ವಿಶೇಷವಾಗಿ Embrogology ಕುರಿತು ಮಾಹಿತಿ ನೀಡಲಾಗಿದೆ. ಇಂದು ಸಹ ಈ ಕ್ಷೇತ್ರದ ತಜ್ಞರು ಅವರಿಗೆ ದೇವನ ಮೇಲೆ ವಿಶ್ವಾಸವಿರಲಿಲ್ಲ. ಪವಿತ್ರ ಖುರ್‌ಆನ್‌ನ ಮಾಹಿತಿಗಳ ಮೇಲೆ ಅಚ್ಚರಿಪಡುತ್ತಾರೆ. ಹದಿನೈದು ನೂರು ವರ್ಷಗಳ ಹಿಂದೆ ಈ ಮಾಹಿತಿಗಳು ಹೇಗೆ ದೊರೆತವು ಎಂದು. ಈ ವಚನಗಳು ನಮಗೆ ನಿಶ್ಚಯವಾಗಿಯೂ ಈ ಕ್ಷೇತ್ರಗಳ ಮೇಲೆ ಅಧ್ಯಯನ ನಡೆಸಲು ಆಹ್ವಾನಿಸುತ್ತಿವೆ.

ಸಮಯಾಭಾವದಿಂದಾಗಿ ಕೆಲವೊಂದು ಜ್ಞಾನಗಳ ಬಗ್ಗೆ ಮಾತ್ರ ಬೆಳಕು ಚೆಲ್ಲಲು ಸಾಧ್ಯವಾಯಿತು. ಅದಾಗ್ಯೂ ಖುರ್‌ಆನ್‌ನಲ್ಲಿ ಎಲ್ಲ ಆಧ್ಯಾತ್ಮಿಕ ಜ್ಞಾನಗಳ ಜೊತೆಯಲ್ಲಿ ಲೌಕಿಕ ಜ್ಞಾನಗಳ ಮೂಲವೂ ಅದರಲ್ಲಿದೆ. ಅಲ್ಲಾಹನ ನಮಗೆ ಅವನ ದೃಷ್ಟಾಂತಗಳ ಮೇಲೆ ಚಿಂತನೆ ನಡೆಸಲು ಭಾಗ್ಯ ದಯಪಾಲಿಸಲಿ.

* ಅನಂತರ ಅಖೀಝುಂ ಹಸನ್ ಅಹ್ಮದ್ 'ಖುರ್‌ಆನ್ ಮತ್ತು ವಿಜ್ಞಾನ, ವಿಷಯದ ಮೇಲೆ ಕೆಳಗಿನ ಪ್ರಬಂಧ ಪ್ರಸ್ತುತಪಡಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ.

"ಖುರ್‌ಆನ್ ಜನರನ್ನು ವಿಜ್ಞಾನದ ಶಿಕ್ಷಣ ಪಡೆಯಲು ತಡೆಯಲಿಲ್ಲ. ಬದಲು **"ಖುಲಿನ್‌ಝುರು ಮಾಝಾ ಫಿಸ್ಸಮಾವಾತಿ ವಲ್ ಅರ್ಧಿ"** (ಯೂನುಸ್–102) ಆಕಾಶ ಭೂಮಿ ಸೃಷ್ಟಿಗಳ ಮೇಲೆ ಚಿಂತಿಸಿರಿ. ಆಕಾಶವೆಂದರೆ ಆಕಾಶಕ್ಕೆ ಸಂಬಂಧಿಸಿದ ಜ್ಞಾನ ಮತ್ತು ಭೂಮಿ ಎಂದರೆ ಭೂಮಿಗೆ ಸಂಬಂಧಿಸಿದ Geology, Biology, Achiology, ಭೌತಶಾಸ್ತ್ರ ಇತ್ಯಾದಿ ಜ್ಞಾನಗಳು ಸೇರಿವೆ. ಅಲ್ಲಾಹನ ದೃಷ್ಟಿಯಲ್ಲಿ ಇವೆಲ್ಲ ಜ್ಞಾನ ಪಡೆಯುವುದು ಧರ್ಮಕ್ಕೆ ವಿರುದ್ಧವಾಗಿರುತ್ತಿದ್ದರೆ ಖುರ್‌ಆನ್ ಎಂದೂ ಈ ಜ್ಞಾನಗಳನ್ನು ಪಡೆಯಲು ಪ್ರೇರೇಪಿಸುತ್ತಿರಲಿಲ್ಲ. ಆದರೆ ಅದರ ಬದಲು ಅದು ಹೇಳುವುದು ಅವಶ್ಯವಾಗಿ ಚಿಂತನೆ ಮಾಡಿರಿ. ಆ ಜ್ಞಾನಗಳನ್ನು ಪಡೆಯಿರಿ, ಸಂಶೋಧನೆ ನಡೆಸಿರಿ. ಏಕೆಂದರೆ ಅದು ತಿಳಿದಿದೆ, ಜ್ಞಾನದಲ್ಲಿ ಪ್ರಗತಿ ಆಗುವಷ್ಟು ಸತ್ಯಸಾಕ್ಷ್ಯಗಳು ಬಯಲಾಗುವುದು ಎಂದು. ಪವಿತ್ರ ಖುರ್‌ಆನ್‌ನ ಈ ವಚನವು ವಿಜ್ಞಾನದತ್ತ ಗಮನ ಸೆಳೆಯುತ್ತದೆ. ಹೇಳಿದನು; ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಮತ್ತು ರಾತ್ರಿ ಹಗಲುಗಳ ರೂಪಾಂತರದಲ್ಲಿ ನಿಜವಾಗಿಯೂ ಬುದ್ಧಿಶಾಲಿಗಳಿಗೆ ದೃಷ್ಟಾಂತಗಳಿವೆ. ಆ ದೃಷ್ಟಾಂತಗಳ ಮಾಧ್ಯಮವಾಗಿ ಅವರು ಈ ಫಲಿತಾಂಶ ಪಡೆಯುವರು. ನೀನು ಇವನ್ನೆಲ್ಲ ವ್ಯರ್ಥವಾಗಿ ಸೃಷ್ಟಿಸಲಿಲ್ಲ. (ಆಲಿ–ಇಮ್‌ರಾನ್: 191–192) ನೀಡಿದೆ. ವಸ್ತುಗಳ ಉಪಯೋಗಳು ಮತ್ತು ಯಾವ ವಸ್ತುವು ವ್ಯರ್ಥವಾಗಿ ಸೃಷ್ಟಿಸಲಿಲ್ಲವೆಂಬುದು ಸಂಶೋಧನೆಯಿಲ್ಲದೆ ಹೇಗೆ ತಿಳಿಯುತ್ತಿತ್ತು. ಆದುದರಿಂದ ಖುರ್‌ಆನ್ ವಸ್ತುಗಳ ಗುಣಗಳ ಬಗ್ಗೆ ಜ್ಞಾನ ನಿಡಿದೆ. ಜೊತೆಯಲ್ಲಿ ಈ ಸ್ವರ್ಣಮಯ ತತ್ವವು ಕಲಿಸಿದೆ. ಯಾವ ವಸ್ತುವನ್ನು ಸಹ ವ್ಯರ್ಥ ಎಂದು ತಿಳಿಯದಿರಿ. ನಾವು ಯಾವ ವಸ್ತುವನ್ನು ವ್ಯರ್ಥವಾಗಿ ಸೃಷ್ಟಿಸಲಿಲ್ಲ, ಅಂದರೆ ದೀರ್ಘವಾದ ಸಂಶೋಧನೆ ನಡೆಸಲು ಮತ್ತು ಫಲಿತಾಂಶಕ್ಕಾಗಿ ಅವಸರ ಪಡೆಯದಿರಲು ಉಪದೇಶ ನೀಡಿದೆ. ಆದುದರಿಂದ ಇಸ್ಲಾಂ ವಿಜ್ಞಾನದೆಡೆ ಗಮನ ಸೆಳೆಯುತ್ತದೆ ಮತ್ತು ವಿಜ್ಞಾನದ ಅವಿಷ್ಕಾರಗಳು ಇಸ್ಲಾಮಿಗೆ ಸಹಾಯಕವಾಗಿರುತ್ತವೆ. **(ಅನ್ವಾರುಲ್ ಉಲೂಮ್, ಸಂಪುಟ–9, ಪುಟ–501–503)**

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 28 January 2021, Issue No. 04

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**31 ಮೇ 2015 (ಭಾನುವಾರ)**

ಹುಝೂರ್ (ಅಬಿಅ) ಮುಂಜಾನೆ ನಾಲ್ಕೂವರೆ ಗಂಟೆಗೆ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ನಂತರ ಲಂಡನ್ ಕೇಂದ್ರದಿಂದ ಹಾಗೂ ಲೋಕದಾದ್ಯಂತ ವಿವಿಧ ಜಮಾಅತುಗಳಿಂದ ಬಂದ ಅಂಚೆಗಳು, ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು.

ಜರ್ಮನಿ ಜಮಾಅತುಗಳಿಂದಲೂ ದಿನನಿತ್ಯ ನೂರಾರು ಪತ್ರಗಳು ಬರುತ್ತವೆ. ಈ ಪತ್ರಗಳು ಉರ್ದು, ಇಂಗ್ಲೀಷ್ ಮತ್ತು ಜರ್ಮನ್ ಭಾಷೆಗಳಲ್ಲಿರುತ್ತವೆ. ಜೊತೆ ಜೊತೆಯಲ್ಲಿ ಅದರ ಅನುವಾದ ಮಾಡಲಾಗುತ್ತದೆ ಮತ್ತು ಇವೆಲ್ಲ ಪತ್ರಗಳನ್ನು ಹುಜೂರ್ ಪರಿಶೀಲಿಸಿ ನಿರ್ದೇಶನಗಳನ್ನು ನೀಡುತ್ತಾರೆ.

**ವೈಯಕ್ತಿಕ ಹಾಗೂ ಕುಟುಂಬ ಭೇಟಿಗಳು:**

ಕಾರ್ಯಕ್ರಮದನ್ವಯ ಹನ್ನೊಂದೂವರೆ ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬಗಳ ಹಾಗೂ ವೈಯಕ್ತಿಕ ಭೇಟಿಗಳನ್ನು ಪ್ರಾರಂಭಿಸಿದರು. 111 ಕುಟುಂಬಗಳ 163 ಜನರು ಹಾಗೂ 35 ಜನರು ವೈಯಕ್ತಿಕ ಭೇಟಿಯ ಭಾಗ್ಯ ಪಡೆದರು.

ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ವಿವಿಧ 45 ಜಮಾಅತುಗಳಿಂದ ಬಂದಿದ್ದರು. ಇಂದು ಸಹ ಕೆಲವು ಜಮಾಅತುಗಳಿಂದ ಬಂದ ಕುಟುಂಬಗಳು ಬಹು ದೀರ್ಘವಾದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ಇಮಾಮರ ದರ್ಶನ ಪಡೆಯಲು ಬಂದು ತಲುಪಿದರು.

ಕಾಸಿಲ್‌ನಿಂದ ಬಂದ ಕುಟುಂಬಗಳು 200 ಕಿ.ಮೀ., AACHEN ನಿಂದ ಬಂದವರು 267 ಕಿ.ಮೀ, DUSSELDORE ನಿಂದ ಬಂದವರು 230 ಕಿ.ಮೀ, HANNOVER ಯಿಂದ ಬಂದವರು 350 ಕಿ.ಮಿ ಮತ್ತು ಮ್ಯಾನಿಖ್‌ನಿಂದ ಬಂದ ಕುಟುಂಬಗಳು 350 ಕಿ.ಮೀ ನಷ್ಟು ದೀರ್ಘವಾದ ಪ್ರಯಾಣ ಬೆಳೆಸಿ ಬಂದು ತಲುಪಿದ್ದರು.

ಇವೆಲ್ಲ ಕುಟುಂಬಗಳು ತಮ್ಮ ಪ್ರೀತಿಯ ಇಮಾಮರ ಜೊತೆ ಭಾವಚಿತ್ರಗಳನ್ನು ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಆತ್ಮೀಯವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು. ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು.

ಭೇಟಿಗಳ ಈ ಕಾರ್ಯಕ್ರಮ ಎರಡು ಗಂಟೆಯವರೆಗೆ ನಡೆಯಿತು. ಅನಂತರ ಹುಝೂರ್ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ವಾಖಿಫೀನ್ ನೌ ಮಕ್ಕಳ ಜೊತೆ ಹುಝೂರರ ವಿಶೇಷ ಕ್ಲಾಸ್**

ಇಂದು ವಾಖಿಫಿನ್ ನೌ ಬಾಲಕ ಮತ್ತು ವಾಖಿಫಾತ್ ನೌ ಬಾಲಕಿಯರ ಹುಝೂರರ ಜೊತೆ ಪ್ರತ್ಯೇಕ ಕಾರ್ಯಕ್ರಮವಿತ್ತು.

ಮೊದಲ ಕಾರ್ಯಕ್ರಮ ವಾಖಿಫೀನೇ ನೌ ಬಾಲಕರದ್ದಾಗಿತ್ತು. ಅದರ ವ್ಯವಸ್ಥೆ ಮಸೀದಿಯ ಪುರುಷರ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

6 ಗಂಟೆಗೆ ಹುಝೂರ್ ವಾಖಿಫೀನ್ ನೌ ಕ್ಲಾಸ್‌ಗೆ ಆಗಮಿಸಿದರು. ಈ ಕ್ಲಾಸ್‌ನಲ್ಲಿ 14 ರಿಂದ 16 ವರ್ಷ ವಯಸ್ಸಿನ ಸುಮಾರು 250 ವಾಖಿಫೀನ್ ನೌ ಮಕ್ಕಳು ಭಾಗವಹಿಸಿದ್ದರು.

ಈ ಕ್ಲಾಸ್‌ನ ಶೀರ್ಷಿಕೆ "ಪವಿತ್ರ ಖುರ್‌ಆನಿನ ಜ್ಞಾನ" ಎಂದಾಗಿತ್ತು. ಈ ಕಾರ್ಯಕ್ರಮದ ಪ್ರಾರಂಭವು ಪವಿತ್ರ ಖುರ್‌ಆನ್‌ನ ಪಠಣದಿಂದಾಯಿತು. ಅದನ್ನು "ಅಝೀಝುಂ ಮುಖಝುಮ್ ಅಹ್ಮದ್ ಅಲ್-ಅಲದ್ ಅಧ್ಯಾಯದ ಮೊದಲ ಆರು ವಚನಗಳನ್ನು ಪಠಿಸುವ ಮೂಲಕ ನೆರವೇರಿಸಿದರು. ಅದರ ಉರ್ದು ಅನುವಾದ ಅಝೀಝುಂ ಜಾಝೀಬ್ ಅಹ್ಮದ್ ಪ್ರಸ್ತುತಪಡಿಸಿದರು.

ಅನಂತರ ಹಝ್ರತ್ ರಸೂಲುಲ್ಲಾಹ್(ಸ) ರವರ ಒಂದು ಹದೀಸ್ ಮತ್ತು ಅದರ ಅನುವಾದ ಅಝೀಝುಂ ಮಾಹಿದ್ ಹುಸೇನ್ ಓದಿ ಹೇಳಿದರು. ಅನಂತರ ಅಝೀಝುಂ ಅರ್‌ಸಲಾನ್ ಅಹ್ಮದ್ ಖಾನ್ ಮಲ್ಫೂಝಾತ್ ಹಝ್ರತ್ ಮಸೀಹ್ ಮೌಊದ್(ಅ)ರವರ ಕೆಳಗಿನ ಅಧ್ಯಾಪನೆಗಳಿಂದ ಪ್ರಸ್ತುತಪಡಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ನಾನು ಆಧುನಿಕ ಶಿಕ್ಷಣದ ವಿರುದ್ಧವಿರುವ ಮೌಲ್ವಿಗಳನ್ನು ತಪ್ಪಿತಸ್ಥರೆಂದು ಭಾವಿಸುತ್ತೇನೆ. ಅವರು ವಾಸ್ತವದಲ್ಲಿ ತಮ್ಮ ತಪ್ಪುಗಳನ್ನು ಹಾಗೂ ದೌರ್ಬಲ್ಯಗಳನ್ನು ಮುಚ್ಚಲು ಹೀಗೆ ಮಾಡುತ್ತಾರೆ. ಅವರ ಮನಸ್ಸುಗಳಲ್ಲಿ ಈ ತಪ್ಪು ಕಲ್ಪನೆಗಳು ಮನೆ ಮಾಡಿವೆ. ಆಧುನಿಕ ಶಿಕ್ಷಣದಿಂದ ಇಸ್ಲಾಮ್ ಧರ್ಮದ ಬಗ್ಗೆ ಸಂಶಯಗಳಿಗೆ ಗುರಿಯಾಗಿ ದೂರವಾಗುವರು ಮತ್ತು ಬುದ್ಧಿ ಹಾಗೂ ವಿಜ್ಞಾನ, ಇಸ್ಲಾಮ್‌ನಿಂದ ತದ್ವಿರುದ್ಧವಾಗಿವೆ. ಸ್ವಯಂ ಆ ತತ್ವಗಳ ದುರ್ಬಲತೆಗಳನ್ನು ಎತ್ತಿ ಹಿಡಿಯುವ ಸಾಮರ್ಥ್ಯ ಹೊಂದಿರುವುದಿಲ್ಲ. ತನ್ನ ದೌರ್ಬಲ್ಯಗಳನ್ನು ಮುಚ್ಚಿಸಲು ಈ ತರಹದ ಮಾತುಗಳನ್ನು ಆಡುತ್ತಾರೆ. ಆಧುನಿಕ ಶಿಕ್ಷಣದ ಪಡೆಯುವುದು ನಿಷಿದ್ಧ ಎಂದು ಸಾರುತ್ತಾರೆ."

"ಆದುದರಿಂದ ಧರ್ಮದ ಸೇವೆಗೋಸ್ಕರ ಮತ್ತು ಧರ್ಮದ ಮೌಲ್ಯಗಳನ್ನು ಎತ್ತಿಹಿಡಿಯುವುದಕ್ಕೋಸ್ಕರ ಆಧುನಿಕ ಶಿಕ್ಷಣವನ್ನು ಪಡೆಯಲು ಪ್ರಯತ್ನ ಮಾಡಿರಿ. ಆದರೆ ನನ್ನ ಅನುಭವದಿಂದ ಎಚ್ಚರಿಸ ಬಯಸುತ್ತೇನೆ. ಯಾರು ಈ ಶಿಕ್ಷಣವನ್ನು ಏಕಮಾತ್ರ ಎಂದು ಭಾವಿಸಿ ನೆಚ್ಚಿಕೊಂಡಿದ್ದಾರೆ ಮತ್ತು ಯಾವ ಸಂತ ಸಜ್ಜನರ ಬಳಿ ಅವರಿಗೆ ಕುಳಿತುಕೊಳ್ಳುವ ಅವಕಾಶ ದೊರೆಯಲಿಲ್ಲ. ಸ್ವಯಂ ಅವರೊಳಗೆ ಅಲ್ಲಾಹನ ಪ್ರಕಾಶ ಹೊಂದಿರಲಿಲ್ಲ. ಸಾಮಾನ್ಯವಾಗಿ ಅಂತಹವರು ಎಡವಿಬಿದ್ದಿದ್ದಾರೆ. ಮತ್ತು ಇಸ್ಲಾಮ್ ಧರ್ಮದಿಂದ ದೂರವಾಗಿದ್ದಾರೆ. ಆ ಆಧುನಿಕ ಶಿಕ್ಷಣಗಳನ್ನು ಧರ್ಮ ಶಿಕ್ಷಣಕ್ಕೆ ಅಧೀನಗೊಳಿಸುವ ಬದಲು ಆಧುನಿಕ ಶಿಕ್ಷಣವೇ ಮೇಲೆಂದು ಭಾವಿಸಿ ತನ್ನದೇ ಅಹಂಭಾವದಲ್ಲಿ ಧರ್ಮ ಮತ್ತು ದೇಶ ಸೇವಕರಾಗಿದ್ದೇವೆ ಎಂದು ತಿಳಿದುಕೊಂಡಿದ್ದಾರೆ. ಆದರೆ ನೆನಪಿಡಿರಿ. ದೈವಿಕ ಪ್ರಕಾಶ ಉಳ್ಳವರಿಗೆ ಮಾತ್ರ ಧರ್ಮ ಸೇವೆ ಮಾಡಲು ಸಾಧ್ಯ."

**(ಮಲ್ಫೂಝಾತ್ ಸಂಪುಟ-1, ಪುಟ-43)**

* ಅನಂತರ ಹಝ್ರತ್ ಮಸೀಹ್ ಮೌಊದ್(ಅ) ರವರ ಕವನ ಸಂಗ್ರಹದಿಂದ, ಅಯ್ ಅಝೀಝೋಂ! ಸುನೋ ಕೆ ಬೇ ಖುರ್‌ಆನ್ ಹಖ್ ಕೋ ಮಿಲ್ತಾ ನಹೀ ಕಭೀ ಇಂಸಾನ್ ಕವನ ಕೇಳಿ ಹುಝೂರ್ ಹೇಳಿದರು. "ಜರ್ಮನಿಯಲ್ಲಿ ಹುಟ್ಟಿದ್ದೀರಿ. ಉರ್ದು ಇಲ್ಲಿ ಕಲಿತಿರುವಿರಿ, 'ಮಾಶಾಅಲ್ಲಾಹ್! ಜರ್ಮನಿಯಲ್ಲೂ ಮಧುರ ಧ್ವನಿಗಳು ಬರುತ್ತಿವೆ.

* ಅನಂತರ ಅಝೀಝುಂ ಸಬೀಹ್ ಅಹ್ಮದ್ ಸಾದಿಖ್ "ಖುರ್‌ಆನಿನ ಶಿಕ್ಷಣಗಳು" ಶೀರ್ಷಿಕೆಯ ಮೇಲೆ ಕೆಳಗಿನ ವಿಷಯ ಪ್ರಸ್ತುತಪಡಿಸಿದರು

ಪವಿತ್ರ ಖುರ್‌ಆನಿನ ವಹ್ಯಿ (ದೇವವಾಣಿ) ಯ ಪ್ರಾರಂಬ ಈ ವಚನಗಳಿಂದಾಯಿತು. ಅದರ ಅನುವಾದ ಈಗಾಗಲೇ ಕೇಳಿದ್ದೀರಿ ಇದು ಮೊಟ್ಟ ಮೊದಲ ವಹ್ಯಿ (ದೇವವಾಣಿ) ಆಗಿತ್ತು. ಅದು ನಮ್ಮ ಪ್ರೀತಿಯ ನೇತಾರ ಹಝ್ರತ್ ಮುಹಮ್ಮದ್ ಮುಸ್ತಫ(ಸ) ರವರ ಮೇಲೆ ಅವತರಿಸಿತು. ಹೀಗೆ ಪವಿತ್ರ ಖುರ್‌ಆನ್‌ನ ಅವತರಣೆಯೊಂದಿಗೆಯೇ ಅಲ್ಲಾಹನು ಈ ಘೋಷಣೆ ಮಾಡಿದನು. "ಈಗ, ಲೋಕದಲ್ಲಿ ಲೇಖನಿಯಿಂದಲೇ ಒಂದು ಮಹೋನ್ನತ ಕ್ರಾಂತಿ ಉಂಟಾಗುವುದು. ಹಾಗೆಯೇ ಆಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. **"ಅಲ್ಲಮ ಬಿಲ್‌ಖಲಮ್"** ಒಂದು ಅರ್ಥ ಹಾಗೂ ಇದೆ. ಪವಿತ್ರ ಖುರ್‌ಆನಿನ ಮೂಲಕ ಮುಂದೆ (ಭವಿಷ್ಯದಲ್ಲಿ) ಜ್ಞಾನಗಳು ಲೋಕದಲ್ಲಿ ಹರಡುವುದು. ಹಾಗೆಯೇ ಇಂದು ನಾವು ಕಾಣುತ್ತಿರುವ ಎಲ್ಲಾ ಜ್ಞಾನಗಳು ಪವಿತ್ರ ಖುರ್‌ಆನಿನ ಮೂಲಕ ಬಂದುದಾಗಿವೆ ಪವಿತ್ರ ಖುರ್‌ಆನ್ ಅರೇಬಿಯಾದಲ್ಲಿ ಅವತರಣಗೊಂಡಿತು. ಅರಬರು ಅಜ್ಞಾನಿಗಳಾಗಿದ್ದರು. ಅವರಿಗೆ ಇತಿಹಾಸವೆಂದರೇನು, Grammer (ವ್ಯಾಕರಣ) ಯಾವುದು, ಧರ್ಮಪದ್ಧತಿ ಅಥವಾ ತತ್ವಗಳು ಏನೂ ತಿಳಿದಿರಲಿಲ್ಲ. ಆದರೆ ಪವಿತ್ರ ಖುರ್‌ಆನ್‌ನ ಮೇಲೆ ವಿಶ್ವಾಸ ತರುವ ಭಾಗ್ಯ ದೊರೆತ ಮೇಲೆ ಎಲ್ಲಾ ಜ್ಞಾನಗಳ ಕಡೆ ಗಮನಹರಿಸುವಂತಾಯಿತು ಅದೇ ರೀತಿ ಇತಿಹಾಸದ ಜ್ಞಾನ ಮತ್ತು ಅಸ್ತಿತ್ವ ಜಾರಿಗೆ ಬಂದಿತು. ಲ್ಹುಗತ್ (ಶಬ್ದಕೋಶ) ಸಹ ಪವಿತ್ರ ಖುರ್‌ಆನಿನ ಸೇವೆಗಾಗಿ ಬರೆಯಲ್ಪಟ್ಟಿತು. ಅದೇ ರೀತಿ ಶಬ್ದಾರ್ಥಗಳು ಮತ್ತು ಪ್ರಬಂಧಗಳ ಜ್ಞಾನ ಪವಿತ್ರ ಖುರ್‌ಆನ್‌ನ ಮಾಧ್ಯಮದಿಂದ ಉಂಟಾಗಿವೆ.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.